ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 4 ಸೋಮವಾರ 2022

ಸಂಪುಟ: 43 | ಸಂಚಿಕೆ: 344 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಚಾಮುಂಡಿಬೆಟ್ಟ ಉಳಿಸಿ ಸಮಿತಿಯಿಂದ ದುಂಡು ಮೇಜಿನ ಸಭೆ

ಚಾ.ಬೆಟ್ಟದಲ್ಲಿ ವಾಣಿಜ್ಯ ಕೇಂದ್ರೀಕೃತ ಪ್ರವಾಸೋದ್ಯಮ ಅಭಿವೃದ್ಧಿ ಕೈಬಿಡಿ

ಮೈಸೂರು,ಏ.3(ಪಿಎಂ)– ಮೈಸೂರಿನ ಚಾಮುಂಡಿಬೆಟ್ಟದಲ್ಲಿ ಲಾಭ ಮತ್ತು ವಾಣಿಜ್ಯ ಆಧಾರಿತ ಪ್ರವಾಸೋದ್ಯಮ ಅಭಿವೃದ್ಧಿ ಕೈಬಿಡಬೇಕು. ಬೆಟ್ಟದ ಸ್ವಾಭಾವಿಕ ಪರಂಪರೆ ಸೇರಿದಂತೆ ಎಲ್ಲಾ ರೀತಿಯ ಪರಂಪರೆ ಹಾಗೂ ಪ್ರಾಕೃತಿಕ ರಚನೆ ಸಂರಕ್ಷಣೆಯಾಗಬೇಕು. ಅಲ್ಲಿನ ಪರಿಸರಕ್ಕೆ ಮಾರಕವಾದ ಅಭಿವೃದ್ಧಿ ಕೈಬಿಡಬೇಕು ಎಂಬಿತ್ಯಾದಿ ಅಭಿಪ್ರಾಯಗಳನ್ನು ವಿವಿಧ ಕ್ಷೇತ್ರಗಳ ತಜ್ಞರು ವ್ಯಕ್ತಪಡಿಸಿದರು.

ಮೈಸೂರಿನ ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನ ನಮಃಜ್ಯೋತಿ ಸಭಾಂಗಣದಲ್ಲಿ 'ಚಾಮುಂಡಿ ಬೆಟ್ಟ ಉಳಿಸಿ ಸಮಿತಿ' ವತಿಯಿಂದ ಮೈಸೂರಿನ ಹಲವು ಪರಿಸರ ಸಂಘ –ಸಂಸ್ಥೆಗಳ ಸಹಯೋಗದಲ್ಲಿ ಬೆಟ್ಟದ ಧಾರ್ಮಿಕ ಪಾವಿತ್ರ್ಯತೆ ಮತ್ತು ಪ್ರಾಕೃತಿಕ ಸೌಂದರ್ಯದ ಉಳಿವಿಗಾಗಿ' ಶೀರ್ಷಿಕೆಯಡಿ ಬೆಟ್ಟಕ್ಕೆ ರೋಪ್ ವೇ ನಿರ್ಮಾಣ ಮತ್ತು ಮೆಟ್ಟಿಲು ಮಾರ್ಗಕ್ಕೆ ರೇಲಿಂಗ್ಸ್ ಅಳವಡಿಕೆ ಪ್ರಸ್ತಾಪ ಸೇರಿದಂತೆ ಅಭಿವೃದ್ಧಿ ಕಾಮಗಾರಿಗಳ ವಿರುದ್ಧ ಭಾನುವಾರ ಹಮ್ಮಿಕೊಂಡಿದ್ದ ದುಂಡು ಮೇಜಿನ ಸಭೆಯಲ್ಲಿ ವಿವಿಧ ಕ್ಷೇತ್ರಗಳ ತಜ್ಞರು ಬೆಟ್ಟದ ಪ್ರವಾಸೋದ್ಯಮ ನೀತಿ ಬದಲಿಸಿಕೊಳ್ಳುವಂತೆ ಸರ್ಕಾರಕ್ಕೆ ಒತ್ತಾಯಿಸಿದರು.

ನಿರ್ಣಯಗಳು

ವಿವಿಧ ತಜ್ಞರು ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಕ್ರೋಢೀಕರಿಸಿ, ಪ್ರಧಾನಿಗಳು ಮತ್ತು ಮುಖ್ಯಮಂತ್ರಿಗಳಿಗೆ ಶೀಘ್ರದಲ್ಲಿ ಸಲ್ಲಿಸಲು ಹಾಗೂ ಚಾಮುಂಡಿ ಬೆಟ್ಟ ಉಳಿಸುವ ಸಂಬಂಧ ಸಂಗ್ರಹಿಸಿರುವ 50 ಸಾವಿರ ಸಾರ್ವಜನಿಕರ ಸಹಿಗಳನ್ನು ಡಿಜಿಟಲೈಸ್ಡ್ ಮಾಡಿ ಅದನ್ನೂ ಅದರ ಜೊತೆಯಲ್ಲಿ ಸಲ್ಲಿಸಲು ಸಭೆಯಲ್ಲಿ ಅಂತಿಮವಾಗಿ ನಿರ್ಣಯ ಕೈಗೊಳ್ಳಲಾಯಿತು. ಅಲ್ಲದೆ, ಶೀಘ್ರದಲ್ಲಿ ಸಾರ್ವಜನಿಕರು, ಬೆಟ್ಟದ ಸಂರಕ್ಷಣೆಗೆ ಬಗ್ಗೆ ಕಾಳಜಿಯುಳ್ಳವರು ಒಳಗೊಂಡಂತೆ ಸಂವಾದ ಕಾರ್ಯಕ್ರಮ ಏರ್ಪಡಿಸಲು ತೀರ್ಮಾನಿಸಲಾಯಿತು.

ರೋಪ್ ವೇ ಪ್ರಸ್ತಾಪಕ್ಕೆ ತೀವ್ರ ವಿರೋಧ



ಮೈಸೂರಿನ ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜು ಸಭಾಂಗಣದಲ್ಲಿ ಭಾನುವಾರ ಚಾಮುಂಡಿ ಬೆಟ್ಟ ಸಂರಕ್ಷಣೆ ಕುರಿತಂತೆ ಮೇಜರ್ ಜನರಲ್ (ನಿವೃತ್ತ) ಡಾ. ಎಸ್.ಜಿ. ಒಂಬತ್ಕೆರೆ ವಿಷಯ ಮಂಡಿಸಿದರು.

ಪರಂಪರೆ ತಜ್ಞ ಪ್ರೊ.ಎನ್.ಎಸ್.ರಂಗರಾಜು ಮಾತನಾಡಿ, ಸರ್ಕಾರದ 'ವಲಯ ನಿಯಮಾವಳಿಗಳು (ತಿದ್ದುಪಡಿ) 2020' ರಲ್ಲಿ ಇರುವ ಅನೇಕ ಅಂಶಗಳು ಚಾಮುಂಡಿಬೆಟ್ಟ ಪರಂಪರೆ ಸಂರಕ್ಷಣೆಗೆ ಪೂರಕವಾಗಿವೆ. ಇದರ ಅನುಸಾರವೂ ನಾವು ಹೋರಾಟ ಮಾಡಬಹುದು. **ಪಾರಂಪರಿಕ ಪ್ರದೇಶ ಮತ್ತು ಅದರ ಸುತ್ತಲಿನ ಪರಿಸರವನ್ನು ಯಾವುದೇ ಕಾರಣಕ್ಕೂ ಜಿಲ್ಲೆಯ ಪರಂಪರೆ ತಜ್ಞರ ಸಮಿತಿ ಅನುಮತಿ ಇಲ್ಲದೆ, ಬದಲಾಯಿಸುವಂತಿಲ್ಲ** ಎಂದು ಈ ನಿಯಮಾವಳಿಯಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ ಎಂದು ತಿಳಿಸಿದರು.

ಚಾಮುಂಡಿಬೆಟ್ಟವು ಪಾರಂಪರಿಕ ಹಿನ್ನೆಲೆಯಲ್ಲಿ ಬಹಳ ಮುಖ್ಯ ಪಾತ್ರ ವಹಿಸುತ್ತದೆ. ಸಾಂಸ್ಕೃತಿಕ ಪರಂಪರೆ, ಧಾರ್ಮಿಕ ಪರಂಪರೆ, ಪುರಾತತ್ವಶಾಸ್ತ್ರ, ಐತಿಹಾಸಿಕ ಪರಂಪರೆ ಹೊಂದಿರುವ ಬೆಟ್ಟವು, ಇದರ ಜೊತೆಗೆ ಸ್ವಾಭಾವಿಕ ಪರಂಪರೆ ಮತ್ತು ಜೀವ ವೈವಿಧ್ಯತೆ ಪರಂಪರೆಯನ್ನೂ ಹೊಂದಿದೆ ಎಂದರು. ● 9ನೇ ಪುಟಕ್ಕೆ

ಇಐಎ ವರದಿ ಸಿದ್ಧಪಡಿಸಬೇಕು

ಚಾಮುಂಡಿಬೆಟ್ಟದ ಸಂರಕ್ಷಣೆ ಸಂಬಂಧ ಪರಿಸರ ಪರಿಣಾಮ ಮೌಲ್ಯಮಾಪನ ವರದಿ (ಇಐಎ) ಸಿದ್ಧಪಡಿಸಬೇಕಿದೆ ಎಂದು ಡಾ.ಎಸ್.ಜಿ.ಒಂಬತ್ಕೆರೆ ಹೇಳಿದರು.

ಲಿಂಗಾಂಬುದಿ ಕೆರೆ ಮಧ್ಯದಲ್ಲಿ ರಸ್ತೆ ನಿರ್ಮಿಸಲು ಹೊರಟಿದ್ದರು. ಈ ಸಂಬಂಧ ಇಐಎ ವರದಿ ಮಾಡಿಸಿ, ಸದರಿ ರಸ್ತೆ ಪ್ರಸ್ತಾಪ ಕೈಬಿಡುವಂತೆ ಮಾಡುವಲ್ಲಿ ನಾವು ಯಶಸ್ವಿಯಾದೆವು. ಅಂತೆಯೇ ನಾವು ಇದರಲ್ಲೂ ಗೆಲ್ಲಬಹುದು. ಚಾಮುಂಡಿಬೆಟ್ಟಕ್ಕೆ ಇಐಎ ವರದಿ ಬೇಕು. ಪರಿಸರ ಸಂರಕ್ಷಣೆ ಕಾಯ್ದೆ ಪ್ರಕಾರ 50 ಕೋಟಿ ರೂ.ಗಿಂತ ಹೆಚ್ಚು ವೆಚ್ಚದ ಕಾಮಗಾರಿಯಾದರೆ ಇಐಎ ಕಡ್ಡಾಯ ಎಂದರು.

ಬೆಟ್ಟದ ಮೇಲಿನ ಕಾಮಗಾರಿ ಪ್ರಸ್ತಾವನೆಗಳು 50 ಕೋಟಿ ರೂ.ಗಿಂತ ಕಡಿಮೆಯೇ ಇವೆ. ಹಾಗಾಗಿ ಇಐಎ ಕಡ್ಡಾಯವಲ್ಲ. ಹಾಗಾಗಿ ಈ ವರದಿಗೆ ಸರ್ಕಾರಕ್ಕೆ ಒತ್ತಾಯ ಮಾಡಲಾಗದು. ಹಾಗಾಗಿ ನಾವೇ ಹೇಗೆ ಲಿಂಗಾಂಬುದಿಕೆರೆ ಸಂಬಂಧ ಇಐಎ ವರದಿ ಮಾಡಿಸಿದ್ದೆವೋ ಅದೇ ರೀತಿ ಚಾಮುಂಡಿಬೆಟ್ಟ ಸಂಬಂಧವೂ ಇಐಎ ಮಾಡಿಸಬೇಕು. ಅದಕ್ಕೆ ತಗಲುವ ವೆಚ್ಚ ಭರಿಸಲು ನಿಧಿ ಸಂಗ್ರಹಕ್ಕೆ ಮುಂದಾಗಬಹುದು. ಸ್ವತಂತ್ರವಾಗಿ ಏಜೆನ್ಸಿ ಮೂಲಕ ಇಐಎ ವರದಿ ಮಾಡಿಸಬೇಕು. ಚಾಮುಂಡಿ ಬೆಟ್ಟದ ಸಂರಕ್ಷಣಾ ಕಾಯ್ದೆ ವಿಧಾನಸಭೆಯಲ್ಲಿ ಮಂಡಿಸಿ, ಅಂಗೀಕರಿಸಲು ಒತ್ತಾಯಿಸಬೇಕು. ಈ ಕಾಯ್ದೆ ಸಂಬಂಧ ಮೊದಲನೇಯ ಕರಡು ಪ್ರತಿ ಸಿದ್ಧಪಡಿಸಿದ್ದೇನೆ. ಇದನ್ನು ಬಳಸಿಕೊಳ್ಳಬೇಕು. ಕರಡು ಪ್ರತಿ ಪೂರ್ಣಗೊಳಿಸಿ, ಸರ್ಕಾರಕ್ಕೆ ಸಲ್ಲಿಸಬಹುದು. ಬೆಟ್ಟಕ್ಕೆ ಸಂಬಂಧ ವಾಣಿಜ್ಯ–ಲಾಭ ಆಧಾರಿತ ಪ್ರವಾಸೋದ್ಯಮ ನೀತಿ ಬದಲಾವಣೆಗೆ ಒತ್ತಾಯಿಸಬೇಕು ಎಂದರು.

ಬಿಜೆಪಿಯಿಂದ ಪರಿಷತ್ ಚುನಾವಣೆಯಲ್ಲಿ ಸ್ಪರ್ಧೆ

ಬಸವರಾಜ ಹೊರಟ್ಟಿ ಘೋಷಣೆ

ಹುಬ್ಬಳ್ಳಿ,ಏ.3– ವಿಧಾನಪರಿಷತ್ ಪಶ್ಚಿಮ ಶಿಕ್ಷಕರ ಕ್ಷೇತ್ರ ಚುನಾವಣೆಗೆ ಬಿಜೆಪಿ ಅಭ್ಯರ್ಥಿಯಾಗಿ ಬಸವರಾಜ ಹೊರಟ್ಟಿ ಸ್ಪರ್ಧಿಸಲಿದ್ದಾರೆ.



ವಿಧಾನಪರಿಷತ್ ಪಶ್ಚಿಮ ಶಿಕ್ಷಕರ ಕ್ಷೇತ್ರ ಚುನಾವಣೆಯಲ್ಲಿ ದಿನಾಂಕ ಘೋಷಣೆ ಬಳಿಕ ಪಕ್ಷಕ್ಕೆ ಸೇರ್ಪಡೆಯಾಗಲಿದ್ದೇನೆ ಎಂದು ತಿಳಿಸಿದ್ದಾರೆ.

ಮಾಧ್ಯಮಿಕ ಶಿಕ್ಷಕರ ಸಂಘವು ಇಂದು ಹುಬ್ಬಳ್ಳಿಯ ಬಿವಿಬಿ ಕಾಲೇಜಿನಲ್ಲಿ ಆಯೋಜಿಸಿದ್ದ 'ಬಸವರಾಜ ಪಥ' ಕಿರು ಹೊತ್ತಿಗೆ ಬಿಡುಗಡೆ ಬಳಿಕ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ಬಿಜೆಪಿಯಿಂದಲೇ ಸ್ಪರ್ಧಿಸುತ್ತೇನೆ, ಯಡಿಯೂರಪ್ಪ ಅವರೂ ಒಪ್ಪಿದ್ದಾರೆ. ವಿಶೇಷವಾಗಿ ನಮ್ಮ ಎಚ್.ಡಿ. ಕುಮಾರಸ್ವಾಮಿ ಅವರೂ ಒಪ್ಪಿಗೆ ಸೂಚಿಸಿದ್ದಾರೆ. ಪರಿಷತ್‌ಗೆ ಮತ್ತೆ ನೀವು ಬರಲೇಬೇಕು. ನಿಮ್ಮ ನಿರ್ಧಾರಕ್ಕೆ ಸಹಮತವಿದೆ ಎಂದಿದ್ದಾರೆ ಎಂದು ತಿಳಿಸಿದರು.

ಬಿಜೆಪಿ ಸೇರ್ಪಡೆಗೆ ಆ ಪಕ್ಷದ ಕೆಲವರಿಂದ ವಿರೋಧವಿದೆಯಲ್ಲ ಎನ್ನುವ ಪ್ರಶ್ನೆಗೆ ಉತ್ತರಿಸಿದ ಹೊರಟ್ಟಿ, ಯಾರು ವಿರೋಧ ಮಾಡುತ್ತಿದ್ದಾರೆ ಅದು ನನಗೆ ಬೇಕಾಗಿಲ್ಲ. ಶನಿವಾರ ಯಡಿಯೂರಪ್ಪ ಅವರು ನನ್ನೊಂದಿಗೆ ಮಾತನಾಡಿದ್ದಾರೆ. ಎಂದರು. ಬಿಜೆಪಿ ಸೇರ್ಪಡೆಗೆ ಕರ್ನಾಟಕದ ಎಲ್ಲಾ ನಾಯಕರು ಸಹಮತ ವ್ಯಕ್ತಪಡಿಸಿದ್ದಾರೆ ಎಂದು ಸ್ಪಷ್ಟಪಡಿಸಿದರು.

ಮಾಜಿ ಐಪಿಎಸ್ ಅಧಿಕಾರಿ ಭಾಸ್ಕರ್‌ರಾವ್ ಇಂದು ಎಎಪಿಗೆ ಸೇರ್ಪಡೆ

ಬೆಂಗಳೂರು,ಏ.3– ಇತ್ತೀಚಿಗೆ ರೈಲ್ವೆ ಪೊಲೀಸ್ ಎಡಿಜಿಪಿ ಹುದ್ದೆಗೆ ರಾಜೀನಾಮೆ ನೀಡಿದ್ದ ಹಿರಿಯ ಐಪಿಎಸ್ ಅಧಿಕಾರಿ ಬಿ. ಭಾಸ್ಕರ್ ರಾವ್ ಆಮ್ ಆದ್ಮಿ ಪಕ್ಷವನ್ನು ಸೇರಲಿದ್ದಾರೆ. ನವದೆಹಲಿಯ ದೀನ್ ದಯಾಳ್ ಉಪಾಧ್ಯಾಯ ಮಾರ್ಗದಲ್ಲಿರುವ ಎಎಪಿ ಕಚೇರಿಯಲ್ಲಿ ಸೋಮವಾರ ಮಧ್ಯಾಹ್ನ ಅವರು ಪಕ್ಷ ಸೇರಲಿದ್ದಾರೆ. ಈ ಸಂದರ್ಭದಲ್ಲಿ ಮನೀಶ್ ಸಿಸೋಡಿಯಾ ಮತ್ತಿತರರು ಹಾಜರಾಗಲಿದ್ದಾರೆ ಎಂದು ಮೂಲಗಳು ತಿಳಿಸಿವೆ. ರೈಲ್ವೆ ಪೊಲೀಸ್ ಎಡಿಜಿಪಿ ಹುದ್ದೆಗೆ ಸೆಪ್ಟೆಂಬರ್ 2021ರಲ್ಲಿ ಭಾಸ್ಕರ್‌ರಾವ್ ರಾಜೀನಾಮೆ ಸಲ್ಲಿಸಿದ್ದರು. ಕಳೆದ ವಾರವಷ್ಟೇ ಸರ್ಕಾರ ಅವರ ರಾಜೀನಾಮೆಯನ್ನು ಅಂಗೀಕರಿಸಿತ್ತು. 1954ರಂದು ಜನಿಸಿದ ಭಾಸ್ಕರ್‌ರಾವ್ 2019–20ರ ಅವಧಿಯಲ್ಲಿ ಬೆಂಗಳೂರು ನಗರ ಪೊಲೀಸ್ ಆಯುಕ್ತರಾಗಿದ್ದರು. ರಾಜ್ಯ ಮೀಸಲು ಪೊಲೀಸ್ ಪಡೆ, ಆಂತರಿಕ ಭದ್ರತಾ ವಿಭಾಗದಲ್ಲಿ ಕೂಡ ಕೆಲಸ ನಿರ್ವಹಿಸಿದ್ದರು.



ರಂಜಾನ್ ಪ್ರಾರಂಭ: ಪ್ರಧಾನಿ ಮೋದಿ ಸೇರಿ ಹಲವು ಗಣ್ಯರಿಂದ ಶುಭಾಶಯ



ನವದೆಹಲಿ, ಏ.3– ನಿನ್ನೆ ಸಂಜೆ ದೇಶದ ಹಲವೆಡೆ ಚಂದ್ರ ದರ್ಶನವಾದ ಬಳಿಕ ಪವಿತ್ರ ರಂಜಾನ್ ಮಾಸ ಇಂದು (ಏ.3) ಆರಂಭವಾಗಿದೆ. ಮುಸ್ಲಿಂ ಬಾಂಧವರು ನಿನ್ನೆ ರಾತ್ರಿ ಸ್ಥಳೀಯ ಮಸೀದಿಗಳಲ್ಲಿ ತರಾವೀಹ್ ಎಂಬ ವಿಶೇಷ ರಾತ್ರಿ ಪ್ರಾರ್ಥನೆ ಸಲ್ಲಿಸಿದರು. ಇಂದು ಉಪವಾಸದ ಮೊದಲ ದಿನ ಆರಂಭವಾಗಿದೆ. ಈ ನಿಟ್ಟಿನಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಸೇರಿ ಹಲವು ಗಣ್ಯರು ಶುಭಾಶಯ ತಿಳಿಸಿದ್ದಾರೆ.

ಪವಿತ್ರ ರಂಜಾನ್ ತಿಂಗಳ ಆರಂಭದ ಹಿನ್ನೆಲೆ ಶುಭಾಶಯ ತಿಳಿಸಿದ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಈ ಪವಿತ್ರ ಮಾಸ ಬಡವರ ಸೇವೆ ಮಾಡಲು ಜನರನ್ನು ಪ್ರೇರೇಪಿಸಲಿ ಎಂದು ಟ್ವೀಟ್‌ನಲ್ಲಿ ಹಾರೈಸಿದ್ದಾರೆ. ಇದು ಸಮಾಜದಲ್ಲಿ ಶಾಂತಿ, ಸೌಹಾರ್ದತೆ ಮತ್ತು ಸಹಾನುಭೂತಿಯ ಮನೋಭಾವವನ್ನು ಮತ್ತಷ್ಟು ಹೆಚ್ಚಿಸುತ್ತದೆ ಎಂದಿದ್ದಾರೆ. ಉಪ ರಾಷ್ಟ್ರಪತಿ ವೆಂಕಯ್ಯ ನಾಯ್ಡು ಕೂಡ ಟ್ವೀಟ್ ಮೂಲಕ ಶುಭಾಶಯ ತಿಳಿಸಿದ್ದಾರೆ. ರಂಜಾನ್ ದೇವರ ಮೇಲಿನ ನಂಬಿಕೆ, ಜೀವನದಲ್ಲಿ ಶುದ್ಧತೆ ಮತ್ತು ಬಡವರ ಬಗ್ಗೆ ಸಹಾನುಭೂತಿಯನ್ನು ಸಂಕೇತಿಸುತ್ತದೆ. ಈ ರಂಜಾನ್ ಜನರ ಜೀವನದಲ್ಲಿ ಶಾಂತಿ, ಸಮೃದ್ಧಿ ಮತ್ತು ಸಂತೋಷವನ್ನು ತರಲಿ ಎಂದು ಹಾರೈಸಿದ್ದಾರೆ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಕೂಡ ● 9ನೇ ಪುಟಕ್ಕೆ

ತಮ್ಮನ ಪ್ರೇಮ ಪ್ರಕರಣ: ಯುವತಿ ಸಂಬಂಧಿಕರಿಂದ ಅಣ್ಣನ ಕೊಲೆ

ಗುಂಡ್ಲುಪೇಟೆ, ಏ.3(ಸೋಮ್ ಜಿ)– ಯುವತಿಯನ್ನು ತಮ್ಮ ಪ್ರೀತಿಸುತ್ತಿದ್ದ ವಿಚಾರಕ್ಕೆ ಸಂಬಂಧಿಸಿದಂತೆ ಅಣ್ಣನನ್ನು ಯುವತಿ ಸಂಬಂಧಿಕರು ಇರಿದು ಕೊಲೆ ಮಾಡಿರುವ ಘಟನೆ ಗುಂಡ್ಲುಪೇಟೆ ಪಟ್ಟಣದ ಹೊರ ವಲಯದಲ್ಲಿರುವ ಹೊಸೂರು ಬಡಾವಣೆಯಲ್ಲಿ ಶನಿವಾರ ರಾತ್ರಿ ನಡೆದಿದೆ.



ಚಿಕ್ಕರಾಜು

ಹೊಸೂರು ಬಡಾವಣೆಯ ಕೃಷ್ಣನಾಯಕ ಎಂಬುವರ ಪುತ್ರ ಚಿಕ್ಕರಾಜು (25) ಹತ್ಯೆಗೀಡಾದವನಾಗಿದ್ದು, ಈತನ ತಮ್ಮ ವಿನೋದ್ ಅದೇ ಬಡಾವಣೆಯ ಯುವತಿಯನ್ನು ಪ್ರೀತಿಸುತ್ತಿದ್ದ ವಿಚಾರದಲ್ಲಿ ಈ ಹತ್ಯೆ ನಡೆದಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಈ ಸಂಬಂಧ ಯುವತಿಯ ಆರು ಮಂದಿ ಸಂಬಂಧಿಕರ ವಿರುದ್ಧ ಪ್ರಕರಣ ದಾಖಲಾಗಿದೆ.

ವಿವರ: ಸಿನಿಮಾ ಚಿತ್ರೀಕರಣ ತಂಡದ ಲೈಟ್ ಬಾಯ್ ಆಗಿ ಕೆಲಸ ಮಾಡುತ್ತಿದ್ದ ಚಿಕ್ಕರಾಜುವಿನ ತಮ್ಮ ವಿನೋದ್ ಗುಂಡ್ಲುಪೇಟೆಯ ತರಕಾರಿ ಮಾರುಕಟ್ಟೆಯಲ್ಲಿ ಕೆಲಸ ಮಾಡುತ್ತಿದ್ದು, ಹೊಸೂರು ಬಡಾವಣೆಯ ಯುವತಿಯನ್ನು ಪ್ರೀತಿಸುತ್ತಿದ್ದ ಎಂದು ಹೇಳಲಾಗಿದೆ. ಈ ವಿಚಾರಕ್ಕೆ ಸಂಬಂಧಿಸಿದಂತೆ ● 9ನೇ ಪುಟಕ್ಕೆ

ಶ್ರೀಲಂಕಾದಲ್ಲಿ ತುರ್ತು ಪರಿಸ್ಥಿತಿ ಘೋಷಣೆ



ಕೊಲೊಂಬೊ, ಏ.3– ದ್ವೀಪರಾಷ್ಟ್ರ ಶ್ರೀಲಂಕಾ ಅಧ್ಯಕ್ಷ ಗೋತಬಯ ರಾಜಪಕ್ಸೆ ವಿಶೇಷ ಗೆಜೆಟ್ ಮೂಲಕ ಸಾರ್ವಜನಿಕ ತುರ್ತು ಪರಿಸ್ಥಿತಿ ಘೋಷಣೆ ಮಾಡಿದ್ದಾರೆ. ಸಾರ್ವಜನಿಕರ ಭದ್ರತೆ, ಸಾರ್ವ ಜನಿಕ ಆದೇಶವನ್ನು ರಕ್ಷಿಸಲು ಮತ್ತು ಜನರಿಗೆ ಅಗತ್ಯ ಸೇವೆಗಳನ್ನು ಪೂರೈಸುವ ನಿಟ್ಟಿನಲ್ಲಿ ತಕ್ಷಣಕ್ಕೆ ಕ್ರಮ ಕೈಗೊಳ್ಳಲು ತುರ್ತು ಪರಿಸ್ಥಿತಿಯನ್ನು ಘೋಷಣೆ ಮಾಡಲಾಗಿದೆ ಎಂದು ಶ್ರೀಲಂಕಾದ ಡೈಲಿ ಮಿರರ್ ವರದಿ ಮಾಡಿದೆ. ಶ್ರೀಲಂಕಾದ ಅಧ್ಯಕ್ಷರು ಕಾಯಿದೆಯ ● 5ನೇ ಪುಟಕ್ಕೆ

ಪಾಕಿಸ್ತಾನ ಸಂಸತ್ ವಿಸರ್ಜನೆ


ಇಸ್ಲಾಮಾಬಾದ್, ಏ.3– ಪಾಕಿಸ್ತಾನ ಅಧ್ಯಕ್ಷ ಆರೀಫ್ ಅಲ್ವಿ ಭಾನುವಾರ ಪಾಕಿಸ್ತಾನದ ಸಂಸತ್ ಅನ್ನು ವಿಸರ್ಜನೆ ಮಾಡಿದ್ದಾರೆ. ಪ್ರಧಾನಿ ಇಮ್ರಾನ್ ಖಾನ್ ಸಲಹೆ ಮೇರೆಗೆ ಅಧ್ಯಕ್ಷ ಅಲ್ವಿ ಅವರು ಸಂಸತ್ ಅನ್ನು ವಿಸರ್ಜನೆ ಮಾಡಿದ್ದಾರೆ ಎಂದು ಮಾಹಿತಿ ಮತ್ತು ಪ್ರಸಾರ ಸಚಿವ ಫಾರೂಖ್ ಹಬೀಬ್ ಹೇಳಿದ್ದಾರೆ. ಸಚಿವರು ನೀಡಿರುವ ಮಾಹಿತಿಯ ಪ್ರಕಾರ 90 ದಿನಗಳಲ್ಲಿ ಚುನಾವಣೆ ನಡೆಯುವ ಸಾಧ್ಯತೆ ಇದೆ ಎಂದು ವಿಶ್ಲೇಷಿಸಲಾಗುತ್ತಿದೆ. 342 ಸದಸ್ಯರನ್ನೊಳಗೊಂಡ ಸಂಸತ್‌ನಲ್ಲಿ ಪ್ರಧಾನಿ ● 9ನೇ ಪುಟಕ್ಕೆ

ಪ್ರಾಣಿ ವಧೆಗೂ ಮುನ್ನ ಪ್ರಜ್ಞೆ ತಪ್ಪಿಸಿ!

ಬೆಂಗಳೂರು: ಪ್ರಾಣಿ ಹತ್ಯೆಗೂ ಮುನ್ನ ಪ್ರಾಣಿಗಳಿಗೆ ಪ್ರಜ್ಞೆ ತಪ್ಪಿಸಬೇಕೆಂದು ಪಶು ಸಂಗೋಪನಾ ಇಲಾಖೆ ಆದೇಶ ಹೊರಡಿಸಿದೆ. ಆಹಾರಕ್ಕಾಗಿ ಪ್ರಾಣಿಗಳನ್ನು ವಧೆ ಮಾಡುವಾಗ ಅದಕ್ಕೆ ಹಿಂಸೆಯಾಗಬಾರದು ಎಂಬ ಕಾರಣಕ್ಕಾಗಿ ಈ ಆದೇಶ ಹೊರಡಿಸಿರುವುದಾಗಿ ಇಲಾಖೆ ಸಮರ್ಥಿಸಿಕೊಂಡಿದೆ. ಕುರಿ, ಕೋಳಿ ಮುಂತಾದ ಪ್ರಾಣಿಗಳಿಗೆ ಹಿಂಸೆ ನೀಡದೇ ವಧೆ ಮಾಡಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದ್ದು, ಬೆಂಗಳೂರಿನಲ್ಲಿ ಇನ್ನು ಮುಂದೆ ಪ್ರಾಣಿ ವಧೆಗೆ ಸ್ಟನ್ನಿಂಗ್ ಕಡ್ಡಾಯ ಎಂದು ಆದೇಶದಲ್ಲಿ ತಿಳಿಸಲಾಗಿದೆ. ಸ್ಟನ್ನಿಂಗ್ ಸಿಸ್ಟಂ ಇರುವವರಿಗೆ ಮಾತ್ರ ಪ್ರಾಣಿ ವಧೆಗೆ ಅವಕಾಶ ನೀಡಲಾಗುತ್ತದೆ. ಹತ್ಯೆಗೂ ಮುನ್ನ ಪ್ರಜ್ಞೆ ತಪ್ಪಿಸಬೇಕಾಗುತ್ತದೆ. ಹೀಗೆ ಪ್ರಜ್ಞೆ ತಪ್ಪಿಸುವುದರಿಂದ ಸಾಯಿಸುವಾಗ ಅವುಗಳಿಗೆ ನೋವು ತಿಳಿಯುವುದಿಲ್ಲ ಎಂದು ಆದೇಶದಲ್ಲಿ ತಿಳಿಸಲಾಗಿದ್ದು, ಇಲಾಖೆಗೆ ಅನೇಕ ದೂರುಗಳು ಬಂದ ಹಿನ್ನೆಲೆಯಲ್ಲಿ ಈ ಆದೇಶ ಹೊರಡಿಸಿರುವುದಾಗಿ ಇಲಾಖೆ ತಿಳಿಸಿದೆ.

ಪಶು ಸಂಗೋಪನಾ ಇಲಾಖೆ ಆದೇಶ

ನೈಸ್ ವಿರುದ್ಧ ಮತ್ತೆ ಗುಡುಗಿದ ಹೆಚ್.ಡಿ.ದೇವೇಗೌಡ



ಬೆಂಗಳೂರು, ಏ.3– ನೈಸ್ ವಿರುದ್ಧ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರು ಭಾನುವಾರ ಮತ್ತೆ ಗುಡುಗಿದ್ದಾರೆ. ರೈತರ ಜಮೀನು ತೆಗೆದುಕೊಂಡು ಅವರಿಗೆ ಹಣ ನೀಡಿಲ್ಲ. ಅನೇಕರು ಈಗಲೂ ಒದ್ದಾಡ್ತಿದ್ದಾರೆ. ಸರ್ಕಾರಿ ಜಮೀನನ್ನು ಅಡ ಇಟ್ಟರು ಇದು ಯಾವ ಪುರುಷಾರ್ಥಕ್ಕೆ ಎಂದು ಸುದ್ದಿಗೋಷ್ಠಿಯಲ್ಲಿ ದೇವೇಗೌಡ ಪ್ರಶ್ನಿಸಿದರು.

ನೈಸ್ ಸಂಸ್ಥೆ ಟೋಲ್ ಹಣವನ್ನು ಸರ್ಕಾರದ ಅನುಮತಿ ಇಲ್ಲದೆ ಹೆಚ್ಚಳ ಮಾಡಿದೆ. ನೈಸ್ ಸಂಸ್ಥೆಯು ಸರ್ಕಾರದ ಎಲ್ಲ ನಿಯಮಗಳನ್ನೂ ಗಾಳಿಗೆ ತೂರಿದೆ ಎಂದು ಹರಿಹಾಯ್ದ

ರಸ್ತೆ ಮಾಡದೇ ಟೋಲ್ ಸಂಗ್ರಹಕ್ಕೆ ಕೆಂಡಾಮಂಡಲ

ಅವರು, ನೈಸ್ ಸಂಸ್ಥೆಗೆ ಕೊಮ್ಮನಗಟ್ಟದ ಬಳಿ ನೀಡಿರುವ 41 ಎಕರೆ ಜಾಗದ ಸೇಲ್ ಡೀಡ್ ರದ್ದುಗೊಳಿಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆದಿದ್ದೇನೆ ಎಂದರು.

ವಿಧಾನ ಪರಿಷತ್‌ನಲ್ಲಿ ಈ ವಿಷಯ ಚರ್ಚೆ ಆಗಿದೆ. ಆದರೆ, ಯಾವುದೇ ಸಚಿವರು ಸರಿಯಾಗಿ ಉತ್ತರ ಕೊಟ್ಟಿಲ್ಲ. ನಾನು ಅನೇಕ ಪತ್ರಗಳನ್ನು ಸಿಎಂ ಮತ್ತು ಸಿಎಸ್ ಹಾಗೂ ಕೈಗಾರಿಕೆ ಇಲಾಖೆ ಕಾರ್ಯದರ್ಶಿಗೂ ಕೂಡ ಪತ್ರ ಬರೆದಿದ್ದೇನೆ. ಸರ್ಕಾರ ನೈಸ್ ವಿಚಾರವಾಗಿ ಕಮಿಟಿ ಮಾಡಿದೆ. ಕಮಿಟಿಯನ್ನು ಪದೇ ಪದೇ ಬದಲಾವಣೆ ಮಾಡುತ್ತಾ ಹೋದರು. ಸಚಿವ ಮಾಧುಸ್ವಾಮಿ ಈ ಕಂಪನಿ ವ್ಯವಹಾರಗಳು ಸರಿ ಇಲ್ಲ ಅಂತ ಹೇಳಿದ್ದಾರೆ. ಈಗ ಮಾಧುಸ್ವಾಮಿ ಅವರನ್ನು ಕಮಿಟಿಯಿಂದ ಕೈ ಬಿಟ್ಟಿದ್ದಾರೆ ಎಂದರು.

ನಾನು ಒಳ್ಳೆ ಉದ್ದೇಶಕ್ಕಾಗಿ ಯೋಜನೆ ತಂದೆ. ಆದರೆ ಇದರಲ್ಲಿ ಅನೇಕ ನಿಯಮಗಳನ್ನು ಬದಲಾವಣೆ ಮಾಡಿದ್ದಾರೆ. ನೈಸ್ ಬಗ್ಗೆ ಸದನ ಸಮಿತಿ ಮಾಡಿದರು. ಸದನ ಸಮಿತಿ ವರದಿ ಕೊಟ್ಟಿದೆ. ರಸ್ತೆ ಮಾಡದೇ ಟೋಲ್ ಸಂಗ್ರಹ ಮಾಡುತ್ತಿದ್ದಾರೆ. ಮೈಸೂರು ರೋಡ್ ಮಾಡಿದ ಮೇಲೆ ಟೌನ್ ಶಿಪ್ ಮಾಡಬೇಕು ಅಂತ ಇತ್ತು. ಆದರೆ, ರಸ್ತೆ ಮಾಡದೇ ಟೋಲ್ ಸಂಗ್ರಹ ಮಾಡುತ್ತಿದ್ದಾರೆ. ಸದನ ಸಮಿತಿ ಟೋಲ್ ಸಂಗ್ರಹ ರದ್ದು ಮಾಡಿ ಅಂತ ವರದಿ ಕೊಟ್ಟಿತ್ತು. ಆದರೆ 2016ರಲ್ಲಿ ನೈಸ್ ಸಂಸ್ಥೆಯವರು ಹೈಕೋರ್ಟ್‌ನಲ್ಲಿ ಸ್ಟೇ ತೆಗೆದುಕೊಳ್ತಾರೆ. ಸದನ ಸಮಿತಿಯ ವರದಿ ಮೀರಿ ಟೋಲ್ ಸಂಗ್ರಹ ಆಗಿದೆ. 2016 ರಿಂದ 2022ರವರೆಗೆ ಟೋಲ್ ಸಂಗ್ರಹ ಮಾಡಿದ್ದಾರೆ. ನಿತ್ಯ 2–3 ಕೋಟಿ ಸಂಗ್ರಹ ಆಗುತ್ತದೆ. ಯಾರಾದರೂ ಅಧಿಕಾರಿಗಳು ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡಿದ್ದಾರಾ? ಎಂದು ಪ್ರಶ್ನಿಸಿದರು

ಈ ಬಗ್ಗೆ ಅನೇಕ ಪತ್ರ ಬರೆದಿದ್ದೇನೆ. ಸರ್ಕಾರ ಏನೂ ಕ್ರಮ ತೆಗೆದುಕೊಂಡಿಲ್ಲ. ಇಷ್ಟು ಅಕ್ರಮ ಮಾಡಿದ್ದಾರೆ ಎಂದು ಸರ್ಕಾರ ಹೈಕೋರ್ಟ್‌ಗೆ ಅರ್ಜಿ ಹಾಕಬೇಕಿತ್ತು. ಆದರೆ ಯಾವ ಸರ್ಕಾರವೂ ಈ ಕೆಲಸ ಮಾಡಲಿಲ್ಲ. ಕುಮಾರಸ್ವಾಮಿ ಸಿಎಂ ಆಗಿದ್ದಾಗಲೂ ಕೂಡ ಸುಪ್ರೀಂಕೋರ್ಟ್ ಆದೇಶ ಪಾಲನೆ ಮಾಡು ಎಂದು ಹೇಳಿದ್ದೆ. ಸಿದ್ದರಾಮಯ್ಯ, ಯಡಿಯೂರಪ್ಪ, ಅವರಿಗೂ ಪತ್ರ ಬರೆದಿದ್ದೆ. ಈಗ ಬೊಮ್ಮಾಯಿ ಅವರ ಸರ್ಕಾರಕ್ಕೆ ಬಹುಮತ ಇದೆ. ಈಗಲಾದರೂ ಕ್ರಮ ತೆಗೆದುಕೊಳ್ಳಲಿ. ಭೂಮಿ ಕಳೆದುಕೊಂಡವರು ನನ್ನ ಬಳಿ ಬಂದು ನೋವು ತೋಡಿಕೊಂಡಿದ್ದಾರೆ. ಇದು ಪ್ರಾರಂಭ, ಮುಂದೆ ಇನ್ನೂ ಹೋರಾಟ ಇದೆ. ನಾನು ಕಣ್ಣು ಮುಚ್ಚಿಕೊಂಡು ಈ ಪ್ರಾಜೆಕ್ಟ್ ಮಾಡಿಲ್ಲ. ನಿಯಮಬದ್ಧವಾಗಿ ಮಾಡಿದ್ದೆ. ನನ್ನ ಮೇಲೆ 2 ಕೋಟಿ ಮಾನನಷ್ಟ ಮೊಕದ್ದಮೆ ಹಾಕಿದರು. ಅದಕ್ಕೆ ಕೋರ್ಟ್ ಸ್ಟೇ ಕೊಟ್ಟಿದೆ. ನನ್ನ ಮೇಲೆ ಕೇಸ್ ಇದೆ. ಸರ್ಕಾರ ಈಗಲಾದರೂ ಕ್ರಮ ತೆಗೆದು ಕೊಳ್ಳಲಿ. ಎಲ್ಲಾ ಸಿಎಂಗಳಿಗೆ ಪತ್ರ ಬರೆದಿದ್ದೇನೆ. ಆದರೆ ಏನೂ ಪ್ರಯೋಜನ ಆಗಿಲ್ಲ. ಲೋಕೋಪಯೋಗಿ ಇಲಾಖೆ ಸಚಿವರು ಮಾತ್ರ ನನ್ನ ಪತ್ರಕ್ಕೆ ಉತ್ತರ ಬರೆದಿದ್ದಾರೆ. ಈಗಿನ ಸಿಎಂ ಪಾಪ ತುಂಬಾ ಬ್ಯುಸಿ ಇದ್ದಾರೆ ಅದಕ್ಕೆ ಸಂಬಂಧಪಟ್ಟ ಮಂತ್ರಿಗಳಿಗೆ ಕೆಲಸ ಮಾಡಲು ಹೇಳಲಿ ಎಂದು ದೇವೇಗೌಡ ಅಸಮಾಧಾನ ವ್ಯಕ್ತಪಡಿಸಿದರು.

> ನಮ್ಮ ಕೆಐಎಡಿಬಿ ಜಾಗವನ್ನು 14 ಕೋಟಿ ರೂ.ಗೆ ನೈಸ್ ಸಂಸ್ಥೆ ಮಾರಾಟ ಮಾಡಿದೆ. ಈಗ ಮತ್ತೆ ಮೆಟ್ರೋಗೆ ಸುಮಾರು 100 ಕೋಟಿಗೆ ಮಾರಾಟ ಮಾಡಿ ದುಡ್ಡು ಮಾಡಲು ನೈಸ್ ಸಂಸ್ಥೆ ಹೊರಟಿದೆ. ತುಂಬಾ ಆಸೆ ಇಟ್ಟು ಈ ಪ್ರಾಜೆಕ್ಟ್ ಮಾಡಿದ್ದೆ. ಆದರೆ ರೈತರಿಗೆ ನೈಸ್ ಸಂಸ್ಥೆ ಸರಿಯಾಗಿ ಪರಿಹಾರವನ್ನೇ ನೀಡಲಿಲ್ಲ. ಇದು ನನ್ನ ಕನಸಿನ ಪ್ರಾಜೆಕ್ಟ್ ಆಗಿತ್ತು. ಆದರೆ ಈ ಕಂಪನಿ ರೈತರಿಗೆ ಅನ್ಯಾಯ ಮಾಡಿತು. ಸರ್ಕಾರಿ ಜಮೀನನ್ನು ಅಡ ಇಟ್ಟು ಸಾಲ ಪಡೆದಿದ್ದಾರೆ. ದೇಶದಲ್ಲಿ ಉತ್ತಮ ರಸ್ತೆ ಮಾಡಲು ಈ ಪ್ರಾಜೆಕ್ಟ್ ಆಗಲೇ ಓಕೆ ಮಾಡಿದೆ. ಆದರೆ ಇವತ್ತು ಎಲ್ಲ ಉಲ್ಟಾ ಆಗಿದೆ. ಮನಸ್ಸಿಗೆ ಬಹಳ ನೋವಾಗುತ್ತದೆ. ಕಾಂಕ್ರೀಟ್ ರೋಡ್ ಮಾಡಿದ್ದೇನೆ ಅಂತಾರೆ. ಆದರೆ, ಅದು ಕೂಡ ಕಳಪೆ ರಸ್ತೆ ಆಗಿದೆ
>
> –ಹೆಚ್.ಡಿ.ದೇವೇಗೌಡ, ಮಾಜಿ ಪ್ರಧಾನಿ

ನಾಯಕ ಜನಾಂಗದ ಒಗ್ಗೂಡಿಕೆಗೆ ಪುಣ್ಯಾನಂದ ಶ್ರೀಗಳ ಪಾತ್ರ ಪ್ರಮುಖ



ಮೈಸೂರು, ಏ.3–ಮೈಸೂರು ನಾಯಕರ ಪಡೆ ವತಿಯಿಂದ ಸುಣ್ಣದಕೇರಿಯ ಮಹದೇಶ್ವರ ದೇವಸ್ಥಾನದಲ್ಲಿರುವ ಶ್ರೀ ವಾಲ್ಮೀಕಿ ಪುತ್ಥಳಿಯ ಬಳಿ ಶ್ರೀ ವಾಲ್ಮೀಕಿ ಗುರುಪೀಠದ ಶ್ರೀ ಪುಣ್ಯಾನಂದ ಮಹಾಸ್ವಾಮಿಗಳ 15 ವರ್ಷದ ಪುಣ್ಯಸ್ಮರಣೆಯ ಅಂಗವಾಗಿ ಪುಷ್ಪನಮನ ಸಲ್ಲಿಸಿ ಗೌರವ ಸಮರ್ಪಣೆ ಮಾಡಲಾಯಿತು.

ಈ ವೇಳೆ ಮಾತನಾಡಿದ ಮೈಸೂರು ನಾಯಕರ ಪಡೆ ಅಧ್ಯಕ್ಷ ಪಡುವಾರಹಳ್ಳಿ ಎಂ.ರಾಮಕೃಷ್ಣ, ರಾಜ್ಯದಲ್ಲಿ 5ನೇ ಅತೀ ಹೆಚ್ಚು ಜನಸಂಖ್ಯೆ ಹೊಂದಿರುವ ನಾಯಕ ಸಮುದಾಯದ ಒಗ್ಗೂಡಿಕೆಗೆ ನಾಯಕ ಸಮುದಾಯದ ಪ್ರಥಮ ಗುರುಗಳಾದ ಶ್ರೀ ಪುಣ್ಯಾನಂದ ಮಹಾಸ್ವಾಮಿಗಳ ಕೊಡುಗೆ ಅಪಾರ. ಇವರು ರಾಜ್ಯಾದ್ಯಂತ ಸಂಚರಿಸಿ ಜನಾಂಗದವರನ್ನು ರಾಜಕೀಯವಾಗಿ, ಸಾಮಾಜಿಕವಾಗಿ ಜಾಗೃತಿ ಮೂಡಿಸುವ ಮೂಲಕ ಸಮಾಜವನ್ನು ಸಂಘಟಿಸಿ ಸಮುದಾಯಕ್ಕೆ ರಾಜಕೀಯ ಪ್ರಜ್ಞೆ ಮೂಡಿಸಿ, ರಾಜಕೀಯ, ಸಾಮಾಜಿಕ, ಶೈಕ್ಷಣಿಕವಾಗಿ ಮುಂದುವರೆಯಲು ಹಾಗೂ ದಾವಣಗೆರೆಯ ಹರಿಹರ ತಾಲೂಕಿನಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಮಠ ಸ್ಥಾಪಿಸಿ ಅದರ ಮೂಲಕ ಸಮಾಜವನ್ನು ಒಗ್ಗೂಡಿಸಿದ ಕೀರ್ತಿ ಗುರುಗಳಿಗೆ ಸಲ್ಲುತ್ತದೆ ಎಂದರು.

ಈ ವೇಳೆ ಸುಣ್ಣದಕೇರಿಯ ನಾಯಕರ ಸಂಘದ ಅಧ್ಯಕ್ಷ ಪಿ.ಸತೀಶ್, ಟೆನ್ನಿಸ್ ಗೋಪಿ, ಮಂಜುನಾಥ್, ಶೇಖರ್ ನಾಯಕ, ಶಿವದತ್ತ, ಕುಮಾರೋತ್ತಮ, ರವಿ ನಾಯಕ, ಮಂಜು, ಸಿದ್ದರಾಜು, ಶಿವಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಇಂದು ವಿಧಾನಪರಿಷತ್ ಸದಸ್ಯ ಮಂಜೇಗೌಡರಿಂದ ಸಾರ್ವಜನಿಕರ ಭೇಟಿ

ಮೈಸೂರು, ಏ.3–ಮೈಸೂರು–ಚಾಮರಾಜನಗರ ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್‌ಗೆ ಆಯ್ಕೆಯಾಗಿರುವ ಸಿ.ಎನ್.ಮಂಜೇಗೌಡ ಅವರು ನಾಳೆ (ಸೋಮವಾರ) ಬೆಳಗ್ಗೆ 10 ರಿಂದ ಸಂಜೆ 6 ಗಂಟೆವರೆಗೆ ಮೈಸೂರಿನ ಮಿನಿ ವಿಧಾನಸೌಧದಲ್ಲಿರುವ ಕೊಠಡಿ ಸಂಖ್ಯೆ 6ರ ತಮ್ಮ ಕಚೇರಿಯಲ್ಲಿ ಸಾರ್ವಜನಿಕರನ್ನು ಭೇಟಿ ಮಾಡಲಿದ್ದಾರೆ. ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ಸ್ಥಳೀಯ ಸಂಸ್ಥೆಗಳ ಜನಪ್ರತಿನಿಧಿಗಳು ಹಾಗೂ ಸಾರ್ವಜನಿಕರು ತಮ್ಮನ್ನು ಭೇಟಿ ಮಾಡಿ ಅಹವಾಲುಗಳೇನಾದರೂ ಇದ್ದಲ್ಲಿ ಸಲ್ಲಿಸಬಹುದು. ಸಾರ್ವಜನಿಕರ ಸಮಸ್ಯೆಗಳನ್ನು ಪರಿಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದು ಮಂಜೇಗೌಡರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಬಾಬು ಜಗಜೀವನ ರಾಂ ಜನ್ಮ ದಿನಾಚರಣೆ

ಮೈಸೂರು, ಏ.3–ಜಿಲ್ಲಾಡಳಿತ, ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಬಾಬು ಜಗಜೀವನರಾಮ್ ಅವರ 115ನೇ ಜನ್ಮ ದಿನಾಚರಣೆಯನ್ನು 2022ರ ಏ.5ರಂದು ಬೆಳಗ್ಗೆ 9.30 ಗಂಟೆಗೆ ರೈಲ್ವೆ ನಿಲ್ದಾಣ ಮುಂಭಾಗದಲ್ಲಿರುವ ಡಾ.ಬಾಬು ಜಗಜೀವನ ರಾಮ್ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಬೆಳಗ್ಗೆ 10 ಗಂಟೆಗೆ ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ ಮೆರವಣಿಗೆಗೆ ಚಾಲನೆ ನೀಡುವರು ಹಾಗೂ ಮುಖ್ಯ ರಸ್ತೆಗಳ ಮೂಲಕ ಮೆರವಣಿಗೆ ಹೊರಟು, ಮೆಟ್ರೋಪೋಲ್ ವೃತ್ತದ ಮೂಲಕ ಕಲಾಮಂದಿರಕ್ಕೆ ತಲುಪುವುದು. ಅಂದು ಬೆಳಗ್ಗೆ 11 ಗಂಟೆಗೆ ಕಲಾಮಂದಿರದಲ್ಲಿ ಸಹಕಾರ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಕಾರ್ಯಕ್ರಮವನ್ನು ಉದ್ಘಾಟನೆ ಮಾಡುವರು. ಶಾಸಕ ಎಲ್.ನಾಗೇಂದ್ರ ಅಧ್ಯಕ್ಷತೆ ವಹಿಸುವರು.



ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ, ಸಂಸದರಾದ ಪ್ರತಾಪ್ ಸಿಂಹ, ವಿ.ಶ್ರೀನಿವಾಸಪ್ರಸಾದ್, ಸುಮಲತಾ ಅಂಬರೀಷ್ ಹಾಗೂ ರಾಜ್ಯ ಪ್ರವಾಸೋದ್ಯಮದ ಅಭಿವೃದ್ಧಿ ನಿಗಮದ ಅಧ್ಯಕ್ಷ ಕಾ.ಪು.ಸಿದ್ದಲಿಂಗಸ್ವಾಮಿ, ಉಪಮೇಯರ್ ಅನ್ವರ್ ಬೇಗ್, ಕರ್ನಾಟಕ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕರಾದ ಕೆ.ಆರ್.ದುರ್ಗಾದಾಸ್ ಹಾಗೂ ಅನೇಕ ಗಣ್ಯರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.



ಕೃಷಿ ಕ್ಷೇತ್ರದಲ್ಲಿನ ಸೇವೆಯನ್ನು ಪರಿಗಣಿಸಿ ಕರ್ನಾಟಕ ರಾಜ್ಯ ರೈತ ಕಲ್ಯಾಣ ಸಂಘದ ಅಧ್ಯಕ್ಷ ಚಂದನ್‌ಗೌಡ ಅವರಿಗೆ ಸುವರ್ಣ ಬೆಳಕು ಫೌಂಡೇಶನ್ ವತಿಯಿಂದ ಯುವ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಚಿತ್ರದಲ್ಲಿ ಕಸಾಪ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್, ಸಂಸ್ಥೆ ಅಧ್ಯಕ್ಷ ಮಹೇಶ್ ನಾಯಕ್, ಸಾಹಿತಿ ಮುತ್ತುಸ್ವಾಮಿ, ಕನ್ನಡ ಬರಹಗಾರ ಅನಂತ, ಕಲ್ಯಾಣಕುಮಾರ್ ಉಪಸ್ಥಿತರಿದ್ದರು.

ಖಾಸಗಿ ಅನುದಾನರಹಿತ ಪದವಿಪೂರ್ವ ಕಾಲೇಜು ಆರಂಭಿಸಲು ಅರ್ಜಿ ಆಹ್ವಾನ

ಮೈಸೂರು,ಏ.3–ಬೆಂಗಳೂರು ಪದವಿ ಪೂರ್ವ ಶಿಕ್ಷಣ ಇಲಾಖೆಯ ನಿರ್ದೇಶಕರ ಪತ್ರ ಮಾರ್ಚ್ 30ರ ಅನ್ವಯ 2022–23ನೇ ಶೈಕ್ಷಣಿಕ ಸಾಲಿನಲ್ಲಿ ಜಿಲ್ಲೆಯಲ್ಲಿ ಖಾಸಗಿ ಅನುದಾನರಹಿತ ಪದವಿಪೂರ್ವ ಕಾಲೇಜುಗಳನ್ನು ಆರಂಭಿಸಲು ಅರ್ಹ ಖಾಸಗಿ ಶಿಕ್ಷಣ ಸಂಸ್ಥೆಗಳು ಅಥವಾ ಟ್ರಸ್ಟ್‌ಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಅರ್ಜಿಯನ್ನು www.pue.kar.nic.in ವೆಬ್‌ಸೈಟ್‌ನಲ್ಲಿ 2022ರ ಏ.1ರಿಂದ 12ರವರೆಗೆ ಸಂಜೆ 5 ಗಂಟೆಯೊಳಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ www.pue.kar.nic.in ಅಥವಾ ಪ್ರಥಮ ದರ್ಜೆ ಸಹಾಯಕರು ಹಾಗೂ ವಿಷಯ ನಿರ್ವಾಹಕ ಕೆ.ಎಸ್.ಸುನೀಲ್‌ಕುಮಾರ್ ಮೊ.ಸಂ. 9480577677 ಅನ್ನು ಸಂಪರ್ಕಿಸಬಹುದು.

ಅರ್ಜಿ ಸಲ್ಲಿಸುವ ಅವಧಿ ವಿಸ್ತರಣೆ

ಮೈಸೂರು,ಏ.3–ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಮೆಟ್ರಿಕ್ ನಂತರದ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಅಲೆಮಾರಿ, ಅರೆ ಅಲೆಮಾರಿ, ಪ್ರವರ್ಗ–1 ವಿದ್ಯಾರ್ಥಿಗಳಿಂದ 2021–22ನೇ ಸಾಲಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ, ಶುಲ್ಕ ವಿನಾಯಿತಿ, ಊಟ ಮತ್ತು ವಸತಿ ಸಹಾಯಯೋಜನೆ(ವಿದ್ಯಾಸಿರಿ) ಸೌಲಭ್ಯಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು www.ssp.postmatric. karnataka.gov.in ಮೂಲಕ ಏ.30ರವರೆಗೆ ಅರ್ಜಿ ಸಲ್ಲಿಸಬಹುದು. ಕಾರ್ಯಕ್ರಮಗಳ ವಿವರ, ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳು ಹಾಗೂ ವಿದ್ಯಾರ್ಥಿ ವೇತನಕ್ಕೆ ಸಂಬಂಧಿಸಿದ ಸರ್ಕಾರಿ ಆದೇಶಗಳ ಬಗ್ಗೆ ತಿಳಿಯಲು www.bcwd.karnataka. gov.in ಸಂಪರ್ಕಿಸಬಹುದು. ಮಾಹಿತಿಗಾಗಿ ಮೊ.ಸಂ. 8050770005, 8050770004, ದೂ.ಸಂ. 080–35254757 ಸಂಪರ್ಕಿಸಬಹುದು.

ಸರ್ಪ ಸಂಸ್ಕಾರ, ಆಶ್ಲೇಷ ಬಲಿ

ಮೈಸೂರು, ಏ.3–ಮೈಸೂರಿನ ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ಏ.7ರ ಗುರುವಾರ 7 ಗಂಟೆವರೆಗೆ ಸರ್ಪ ಸಂಸ್ಕಾರ ಮಾಡಲಾಗುವುದು. ಏ.8ರ ಶುಕ್ರವಾರ ಬೆಳಗ್ಗೆ 7 ಗಂಟೆಗೆ ಸರ್ಪ ಸಂಸ್ಕಾರಾಂಗ ಹೋಮ ಮತ್ತು ಆಶ್ಲೇಷ ಬಲಿ ಪೂಜೆ ನೆರವೇರಲಿದೆ. ಪ್ರತಿಯೊಬ್ಬರಿಗೂ ವಿಶೇಷ ಸಂಕಲ್ಪ ಮತ್ತು ಪೂಜೆ ಮಾಡಿಸಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದ್ದು, ಹೆಚ್ಚಿನ ವಿವರಗಳಿಗಾಗಿ ಮೈಕುಮಾರ್ ಮೊಬೈಲ್ ನಂ. 9845183392 ಸಂಪರ್ಕಿಸಬಹುದು.

ಮೈಸೂರಲ್ಲಿ ಸ್ವಚ್ಛ ಭಾರತ್ ಮಿಷನ್–2.0 ಕಾರ್ಯಾಗಾರ

ಮೈಸೂರು,ಏ.3(ಎಂಟಿವೈ)–ರಾಜ್ಯದ ನಗರ ಪ್ರದೇಶಗಳಲ್ಲಿ 'ಸ್ವಚ್ಛ ಭಾರತ್ ಮಿಷನ್–2.0' ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಮೈಸೂರಲ್ಲಿ ಪೌರಾಡಳಿತ ಇಲಾಖೆ ಆಯೋಜಿಸಿದ್ದ 2 ದಿನಗಳ ಕಾರ್ಯಾಗಾರದಲ್ಲಿ 12 ಜಿಲ್ಲೆಗಳ ಪಾಲಿಕೆಯ ಆಯುಕ್ತರು ಹಾಗೂ ಅಧಿಕಾರಿಗಳು ಪಾಲ್ಗೊಂಡು ಸ್ವಚ್ಛ ಸರ್ವೇಕ್ಷಣೆ ಬಗ್ಗೆ ಮಾಹಿತಿ ಪಡೆದರು.

ಮೈಸೂರಿನ ಹೂಟಗಳ್ಳಿಯಲ್ಲಿರುವ ಸೈಲೆಂಟ್ ಶೋರ್ಸ್ ರೆಸಾರ್ಟ್ ಮತ್ತು ಸ್ಪಾ ಸಭಾಂಗಣದಲ್ಲಿ ಮಾ.31 ಹಾಗೂ ಏ.1ರಂದು ನಡೆದ ಕಾರ್ಯಾಗಾರದಲ್ಲಿ ಮಂಗಳೂರು, ಕಲಬುರಗಿ, ಮೈಸೂರು, ಹುಬ್ಬಳ್ಳಿ–ಧಾರವಾಡ, ತುಮಕೂರು, ಶಿವಮೊಗ್ಗ, ಬೆಳಗಾವಿ, ಬಳ್ಳಾರಿ, ದಾವಣಗೆರೆ ಹಾಗೂ ವಿಜಯಪುರ ಪಾಲಿಕೆ ಆಯುಕ್ತರು, ಸ್ವಚ್ಛ ಸರ್ವೇಕ್ಷಣೆಯಲ್ಲಿ ಪ್ರಮುಖ ಪಾತ್ರ ವಹಿಸುವ ಪರಿಸರ ಅಭಿಯಂತರರು, ಇಂಜಿನಿಯರ್‌ಗಳು, ನಗರಾಭಿವೃದ್ಧಿ ಇಲಾಖೆ, ಪೌರಾಡಳಿತ ನಿರ್ದೇಶನಾಲಯದ ಅಧಿಕಾರಿಗಳು ಮತ್ತು ಪೌರಾಡಳಿತ ನಿರ್ದೇಶನಾಲಯದ ಕೆಪಿಎಂಜಿ ತಂಡದ ಸದಸ್ಯರು ಪಾಲ್ಗೊಂಡು ಪ್ರಸಕ್ತ ಸಾಲಿನಿಂದಲೇ 'ಸ್ವಚ್ಛ ಭಾರತ್ ಮಿಷನ್–2.0' ಅನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಸಂಪನ್ಮೂಲ ವ್ಯಕ್ತಿಗಳ ಮಾರ್ಗದರ್ಶನದಲ್ಲಿ ತರಬೇತಿ ಪಡೆದುಕೊಂಡರು.

ವಿವಿಧ ನಗರ ಪಾಲಿಕೆ ಆಯುಕ್ತರು ಹಾಗೂ ಅಧಿಕಾರಿಗಳಿಗಾಗಿ ಜರುಗಿದ ಕಾರ್ಯಾಗಾರಕ್ಕೆ ಸಂಬಂಧಿಸಿದಂತೆ 'ಮೈಸೂರು ಮಿತ್ರ'ನೊಂದಿಗೆ ಮೈಸೂರು ಮಹಾನಗರಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತ ರೆಡ್ಡಿ ಮಾತನಾಡಿ, ಸ್ವಚ್ಛ ಸರ್ವೇಕ್ಷಣೆಗೆ ಸಂಬಂಧಿಸಿದಂತೆ ಪೌರಾಡಳಿತ ನಿರ್ದೇಶಾನಾಲಯದ ವತಿಯಿಂದ ಎರಡು ದಿನಗಳ ಕಾರ್ಯಾಗಾರ ಹಮ್ಮಿಕೊಳ್ಳಲಾಗಿತ್ತು. ಕಾರ್ಯಾಗಾರದಲ್ಲಿ 'ಸ್ವಚ್ಛ ಭಾರತ್ ಮಿಷನ್–2.0' ಮಾರ್ಗಸೂಚಿಗಳ ಬಗ್ಗೆ ವಿವರಿಸಲಾಯಿತು. ಎಲ್ಲಾ ನಗರಗಳನ್ನು ಕಸ ಮುಕ್ತಗೊಳಿಸಲು ಕೇಂದ್ರ ಸರ್ಕಾರವು ಎಸ್.ಬಿ.ಎಂ–ಯು 2.0 ಅನ್ನು ಆರಂಭಿಸಿದೆ. ಪೌರಾಡಳಿತ ನಿರ್ದೇಶನಾಲಯವು ಎಲ್ಲ ಆಯುಕ್ತರಿಗೂ ತರಬೇತಿ ನೀಡಲು ಈ ಕಾರ್ಯಕ್ರಮವನ್ನು ಆಯೋಜಿಸಿತ್ತು. ಈ ಕಾರ್ಯಕ್ರಮವನ್ನು ಹೇಗೆ ಕಾರ್ಯಗತಗೊಳಿಸಬೇಕು ಎಂದು ಕಾರ್ಯಾಗಾರದಲ್ಲಿ ತಿಳಿಸಿದರು ಎಂದರು.



ಮೈಸೂರಿನಲ್ಲಿ ವಿವಿಧ ಪಾಲಿಕೆಗಳ ಆಯುಕ್ತರು ಹಾಗೂ ಅಧಿಕಾರಿಗಳಿಗಾಗಿ ಸ್ವಚ್ಛ ಸರ್ವೇಕ್ಷಣ್ ಅಭಿಯಾನದ ಅಂಗವಾಗಿ ಆಯೋಜಿಸಿದ್ದ ಕಾರ್ಯಾಗಾರವನ್ನು ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ ಉದ್ಘಾಟಿಸಿದರು.

ಕಾರ್ಯಾಗಾರದ ಬಳಿಕ ಫೀಲ್ಡ್ ವಿಸಿಟ್‌ನಲ್ಲೂ ಅಧಿಕಾರಿಗಳು ಸಾಕಷ್ಟು ಮಾಹಿತಿ ಪಡೆದರು. ಮೈಸೂರಿನ ವಿವಿಧೆಡೆಯಿರುವ ಶೂನ್ಯ ಕಸ ನಿರ್ವಹಣಾ ಘಟಕ, ತ್ಯಾಜ್ಯ ಮರುಬಳಕೆ ಕೇಂದ್ರಕ್ಕೆ ಭೇಟಿ ನೀಡಿ ಮಾಹಿತಿ ಕಲೆ ಹಾಕಿದರು. ನಗರ ಪ್ರದೇಶಗಳಲ್ಲಿ ಸುರಕ್ಷಿತ ನೈರ್ಮಲ್ಯದ ಕಾಪಾಡುವುದು, ಘನತ್ಯಾಜ್ಯದ ಮೂಲ ವಿಂಗಡಣೆ, ಘನ ತ್ಯಾಜ್ಯದ ವೈಜ್ಞಾನಿಕ ಸಂಸ್ಕರಣೆ, ತ್ಯಾಜ್ಯಗಳ ಉತ್ಪತ್ತಿ ಕಡಿಮೆ ಮಾಡುವುದು, ಮರುಬಳಕೆ ಮಾಡುವುದು, ಮರು ಉತ್ಪತ್ತಿಯ(3–R – ರೆಡ್ಯೂಸ್, ರೀಯೂಸ್, ರೀಸೈಕಲ್) ತತ್ವಗಳ ಬಗ್ಗೆ ಮಾಹಿತಿ ಪಡೆದರು. ಮೈಸೂರಿನ ವಿದ್ಯಾರಣ್ಯಪುರಂ ಹಾಗೂ ಕುಂಬಾರಕೊಪ್ಪಲ್‌ನಲ್ಲಿ ಪಾಲಿಕೆಯೊಂದಿಗೆ ಒಪ್ಪಂದ ಮಾಡಿಕೊಂಡು ಜಾಗೃತ್ ಟೆಕ್ ಪ್ರೈವೇಟ್ ಲಿ. ನಡೆಸುತ್ತಿರುವ ಪ್ಲಾಸ್ಟಿಕ್ ತ್ಯಾಜ್ಯ ಮರುಬಳಕೆ ಮತ್ತು ಸಂಗ್ರಹ ಘಟಕದಲ್ಲಿ ಪ್ರಾತ್ಯಕ್ಷಿಕೆ ನೀಡಲಾಯಿತು.

> "ಸ್ವಚ್ಛ ಸರ್ವೇಕ್ಷಣೆಯಲ್ಲಿ ರಾಜ್ಯದ ಎಲ್ಲಾ ನಗರಗಳನ್ನು ಕಸಮುಕ್ತ ಹಾಗೂ ಬಯಲು ಶೌಚ ಮುಕ್ತಗೊಳಿಸುವುದು ಪ್ರಮುಖ ಪಾತ್ರವಹಿಸಲಿದೆ. ಸರ್ವೇಕ್ಷಣೆಯಲ್ಲಿ ಸಾರ್ವಜನಿಕ ಪಾಲ್ಗೊಳ್ಳುವಿಕೆಯ ಬಗ್ಗೆಯೂ ತಿಳಿಸಲಾಗಿದೆ. ತರಬೇತಿ ಕಾರ್ಯಕ್ರಮದಲ್ಲಿ ಕೇಂದ್ರದ ಮಾರ್ಗಸೂಚಿಗಳ ಪ್ರಕಾರ ವಿವರವಾಗಿ ಚರ್ಚಿಸಲಾಗಿದೆ. ಪ್ರಾಯೋಗಿಕ ಸಲಹೆಗಳೊಂದಿಗೆ ತಾಂತ್ರಿಕ ವಿಚಾರಗಳನ್ನು ಸಂಪನ್ಮೂಲ ವ್ಯಕ್ತಿಗಳು ವಿವರಿಸಿದ್ದಾರೆ.
>
> **–ಜಿ.ಲಕ್ಷ್ಮೀಕಾಂತ ರೆಡ್ಡಿ, ಪಾಲಿಕೆ ಆಯುಕ್ತ**

ಈ ಕುರಿತು ಜಾಗೃತ್ ಟೆಕ್ ನಿರ್ದೇಶಕ ದಿನೇಶ್ ಬೋಪಣ್ಣ ಮಾತನಾಡಿ, ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದ ವಿವಿಧ ಪಾಲಿಕೆ ಆಯುಕ್ತರು ಹಾಗೂ ಅಧಿಕಾರಿಗಳಿಗೆ ಪಿಪಿಟಿ ಮೂಲಕ ಮಾಹಿತಿ ನೀಡಲಾಯಿತು. ಮೈಸೂರಲ್ಲಿ ಜಾಗೃತ್ ಟೆಕ್ ಅಳವಡಿಸಿಕೊಂಡಿರುವ ಘನತ್ಯಾಜ್ಯ ನಿರ್ವಹಣೆ ಮತ್ತು ಲ್ಯಾಂಡ್ಫಿಲ್ ತಂತ್ರಜ್ಞಾನದ ಕುರಿತು ಪ್ರಾತ್ಯಕ್ಷಿಕೆ ನೀಡಲಾಯಿತು. ಪ್ಲಾಸ್ಟಿಕ್ ತ್ಯಾಜ್ಯ ಬಳಸಿ ಇಂಟರ್ಲಾಕ್ ಪೇವರ್ಸ್, ಕೆರ್ಬ್ಸ್ಟೋನ್, ರಸ್ತೆ ವಿಭಾಜಕಗಳು ಮತ್ತು ಇಕೋ ಪ್ರೊ (ಪ್ಲೈವುಡ್ ಪರ್ಯಾಯ) ನಂತಹ ಸಾಮಗ್ರಿಗಳನ್ನು ತಯಾರಿಸಿರುವುದನ್ನು ವೀಕ್ಷಿಸಿದರು. ನಮ್ಮ ಸಂಸ್ಥೆಯ ಕಾರ್ಯವೈಖರಿ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದರು ಎಂದರು.

ಪಾಲಿಕೆ ಆಯುಕ್ತರಿಂದ ಎಲ್‌ಇಡಿ ದೀಪಗಳ ಪರಿಶೀಲನೆ

ಮೈಸೂರು, ಏ.3(ಎಂಕೆ)– ಮೈಸೂರು ನಗರದಲ್ಲೆಡೆ ಅಳವಡಿಸುತ್ತಿರುವ ಎಲ್‌ಇಡಿ ಬೀದಿದೀಪಗಳನ್ನು ಪಾಲಿಕೆ ಆಯುಕ್ತ ಲಕ್ಷ್ಮೀಕಾಂತ್ ರೆಡ್ಡಿ ನೇತೃತ್ವದಲ್ಲಿ ಪರಿಶೀಲನೆ ನಡೆಸಲಾಯಿತು.

ನಗರದ ಜೆಎಲ್‌ಬಿ ರಸ್ತೆಯಲ್ಲಿ ಪರಿಶೀಲನೆ ನಡೆಸಿದ ಅವರು, ನಗರ ಪಾಲಿಕೆ ವ್ಯಾಪ್ತಿಯಲ್ಲಿ ಹಿಂದಿದ್ದ ಮರ್ಕ್ಯೂರಿ ಲೈಟ್‌ಗಳನ್ನು ತೆರವುಗೊಳಿಸಿ 68,178 ಎಲ್‌ಇಡಿ ಬೀದಿದೀಪಗಳನ್ನು ಅಳವಡಿಸಲಾಗುತ್ತಿದೆ. ಸಾರ್ವಜನಿಕ ಖಾಸಗಿ ಸಹಬಾಗಿತ್ವ(ಪಿಪಿಪಿ) ಯೋಜನೆಯಲ್ಲಿ ಈಗಾಗಲೇ ಸುಮಾರು 30 ಸಾವಿರ ಎಲ್‌ಇಡಿ ಬೀದಿದೀಪಗಳನ್ನು ಅಳವಡಿಸಲಾಗಿದ್ದು, ಎಲ್‌ಇಡಿ ಬೀದಿದೀಪಗಳ ಅಳವಡಿಸುವ ಕಾರ್ಯ ತ್ವರಿತವಾಗಿ ನಡೆಯುತ್ತಿದೆ ಎಂದು ಹೇಳಿದರು.

ಎಲ್‌ಇಡಿ ಲೈಟ್‌ಗಳ ಪ್ರಖರತೆ ಕಡಿಮೆ ಇದೆ. ಕೆಲವೆಡೆ ಸರಿಯಾಗಿ ಬೆಳಗುತ್ತಿಲ್ಲ ಕೆಲ ಎಂದು ಕೆಲವರಿಂದ ದೂರುಗಳು ಕೇಳಿಬಂದ ಹಿನ್ನೆಲೆ ಪರಿಶೀಲನೆ ನಡೆಸಲಾಗುತ್ತಿದೆ. ಎಲ್ಲೆಲ್ಲಿ ಎಲ್‌ಇಡಿ ಬೀದಿ ದೀಪಗಳನ್ನು ಅಳವಡಿಸಿಲ್ಲವೋ ಅಂತಹ ಸ್ಥಳಗಳಲ್ಲಿ ತ್ವರಿತವಾಗಿ ಅಳವಡಿಸುವ ಜೊತೆಗೆ ರಸ್ತೆಗಳ ವಿಸ್ತೀರ್ಣಕ್ಕೆ ಅನುಗುಣವಾಗಿ ಎಲ್‌ಇಡಿ ಬೀದಿದೀಪಗಳನ್ನು ಅಳವಡಿಸುವಂತೆ ಗುತ್ತಿಗೆದಾರರಿಗೆ ಸೂಚಿಸಲಾಗಿದೆ ಎಂದರು. ಈ ವೇಳೆ ಹೆಚ್ಚುವರಿ ಆಯುಕ್ತೆ ರೂಪ, ಉಪ ಆಯುಕ್ತ ಮಹೇಶ್, ಪಾಲಿಕೆ ಅಧಿಕಾರಿಗಳು, ಇಂಜಿನಿಯರ್‌ಗಳು ಉಪಸ್ಥಿತರಿದ್ದರು.



ನೈರುತ್ಯ ರೈಲ್ವೆ ಮೈಸೂರು ವಿಭಾಗದ ಸರಕು ಸಾಗಣೆಯಲ್ಲಿ 688.18 ಕೋಟಿ ಅತ್ಯಧಿಕ ಆದಾಯ

- ಕಳೆದ ವರ್ಷಕ್ಕೆ ಹೋಲಿಸಿದರೆ ಶೇ.54.58ರಷ್ಟು ಅಧಿಕ ಆದಾಯ ಗಳಿಕೆ
- ವಿಭಾಗಕ್ಕೆ ನಿಗದಿಪಡಿಸಿದ ಗುರಿಗಿಂತ ಶೇ.22.60ರಷ್ಟು ಹೆಚ್ಚು ಆದಾಯ

ಮೈಸೂರು, ಏ.3(ಪಿಎಂ)– ನೈರುತ್ಯ ರೈಲ್ವೆ ಮೈಸೂರು ವಿಭಾಗವು 2021–22ರ ಆರ್ಥಿಕ ವರ್ಷಕ್ಕೆ ಸಂಬಂಧಿಸಿದಂತೆ ಸರಕು ಸಾಗಣೆಯಲ್ಲಿ ದಾಖಲೆ ಆದಾಯ ಗಳಿಸಿ, ಸಾಧನೆ ಮಾಡಿದೆ.

ಕೋವಿಡ್ ಸೋಂಕು ಒಡ್ಡಿದ ಅನೇಕ ಸವಾಲುಗಳ ನಡುವೆಯೂ ಮೈಸೂರು ವಿಭಾಗವು 2021–22ರಲ್ಲಿ ಸರಕು ಸಾಗಣೆಯಲ್ಲಿ 688.18 ಕೋಟಿ ರೂ. ಅತ್ಯಧಿಕ ಆದಾಯ ಗಳಿಸಿ, ದಾಖಲೆ ಮಾಡಿದೆ.

ಇದು ಕಳೆದ ವರ್ಷಕ್ಕೆ ಹೋಲಿಸಿದರೆ ಶೇ.54.58ರಷ್ಟು ಮತ್ತು ವಿಭಾಗಕ್ಕೆ ನಿಗದಿಪಡಿಸಿದ ಗುರಿಗಿಂತ ಶೇ.22.60ರಷ್ಟು ಹೆಚ್ಚು ಆದಾಯವಾಗಿದೆ. ಸರಕು ಪ್ರಮಾಣವೂ 9.09 ದಶಲಕ್ಷ ಟನ್‌ಗಳಷ್ಟಾಗಿದ್ದೂ ಕಳೆದ ವರ್ಷಕ್ಕಿಂತ ಶೇ.32.24ರಷ್ಟು ಏರಿಕೆಯಾಗಿದೆ. ಕೇವಲ ಕಬ್ಬಿಣದ ಅದಿರು ಸಾಗಾಣಿಕೆಯಿಂದಲೇ 503 ಕೋಟಿ ರೂ. ಗಳಷ್ಟು ಆದಾಯ ಗಳಿಸಿದ್ದು, ಅದು ಸಂಪೂರ್ಣ 2020–21ರ ವರ್ಷದ ಸರಕು ಸಾಗಣೆ ಆದಾಯವನ್ನು ಮೀರಿಸಿದೆ.

ವಿಭಾಗದ ವ್ಯಾಪಾರ ಅಭಿವೃದ್ಧಿ ಘಟಕದ ಉತ್ಸಾಹದ ಮತ್ತು ನಿರಂತರ ಮಾರುಕಟ್ಟೆ ತಂತ್ರದ ಬೆಂಬಲದೊಂದಿಗೆ, ಮೆಕ್ಕೆಜೋಳದ ಸಾಗಾಣೆಯನ್ನು ರೈಲ್ವೆಯು 123 ರೇಕ್‌ಗಳನ್ನು ರವಾನಿಸಿ, 32.50 ಕೋಟಿ ನಿವ್ವಳ ಆದಾಯ ಸಂಪಾದಿಸುವ ಜೊತೆಗೆ ಇದರ ಸಾಗಣೆ ಮಾರುಕಟ್ಟೆಯನ್ನು ಮರು ಪಡೆದಿದೆ. ಪ್ರಸಕ್ತ ಹಣಕಾಸು ವರ್ಷದಲ್ಲಿ ಟಿವಿಎಸ್ ಸಮೂಹದ 22, 500 ದ್ವಿಚಕ್ರ ವಾಹನಗಳನ್ನು ಒಳಗೊಂಡ 20.5 ರೇಕ್‌ಗಳನ್ನು ನಂಜನಗೂಡು ಪಟ್ಟಣದ ರೈಲು ನಿಲ್ದಾಣದಿಂದ ದೇಶದ ಉತ್ತರ ಮತ್ತು ಈಶಾನ್ಯ ಭಾಗಗಳಿಗೆ ಕಳುಹಿಸಿ 4 ಕೋಟಿ ರೂ. ಆದಾಯ ಗಳಿಸಿದೆ. ಮೈಸೂರು ವಿಭಾಗದಿಂದ ಲೋಡ್ ಮಾಡಲಾದ ಸಾಂಪ್ರದಾಯಿಕ ಸರಕುಗಳಲ್ಲಿ ಕಬ್ಬಿಣದ ಅದಿರು, ತೈಲೋತ್ಪನ್ನಗಳು, ಆಹಾರ ಧಾನ್ಯಗಳು, ಸಕ್ಕರೆ, ಸಿಮೆಂಟ್, ನಿಲುಭಾರ ಮೊದಲಾದವು ಸೇರಿವೆ. ಪಾರ್ಸೆಲ್ ವಿಭಾಗದಲ್ಲಿಯೂ ವಿಭಾಗವು 9.60 ಕೋಟಿ ರೂ. ಅತ್ಯಧಿಕ ಆದಾಯ ಗಳಿಸಿದೆ. 2020–21ರಲ್ಲಿ ದಾಖಲಾದ 8,534 ಟನ್‌ಗಳಿಗೆ ಹೋಲಿಸಿದರೆ, ಪ್ರಸಕ್ತ ವರ್ಷದಲ್ಲಿ ಒಟ್ಟು 17,475 ಟನ್‌ಗಳ ಪಾರ್ಸೆಲ್‌ಗಳನ್ನು ಸಾಗಿಸುವ ಮೂಲಕ ಶೇ.100ರಷ್ಟು ಪ್ರಗತಿ ಸಾಧಿಸಲಾಗಿದೆ. ಹಣ್ಣುಗಳು ಮತ್ತು ತರ ಕಾರಿಗಳು ಸೇರಿದಂತೆ ಹಾಳಾಗುವ ವಸ್ತುಗಳನ್ನು ಸಾಗಿಸುವ ಮೂಲಕ ರೈತ ಸಮುದಾಯದ ಕಷ್ಟಗಳನ್ನು ತಗ್ಗಿಸಿ ಕೃಷಿ ವಲಯವನ್ನು ಬಲಪಡಿಸಲು ರೈಲ್ವೆ ಸಚಿವಾಲಯದ ನೀತಿಗೆ ಅನುಗುಣವಾಗಿ, ಮೈಸೂರು ವಿಭಾಗವು ಕಾರ್ಯನಿರ್ವಹಿಸುತ್ತಿದ್ದು, ಸುಮಾರು 20 ಸಾವಿರ ಚೀಲ ಈರುಳ್ಳಿಯನ್ನು ಭಾರತದ ಉತ್ತರ ಮತ್ತು ಈಶಾನ್ಯ ರಾಜ್ಯಗಳಿಗೆ ರವಾನಿಸಿ 52 ಲಕ್ಷ ರೂ. ಆದಾಯ ಗಳಿಸಿದೆ.

ಇದರ ಜೊತೆಗೆ ನಂಜನಗೂಡು ಪಟ್ಟಣದಿಂದ 16 ಪಾರ್ಸೆಲ್ ಕಾರ್ಗೋ ಎಕ್ಸ್‌ಪ್ರೆಸ್ ರೈಲುಗಳು ನೆಸ್ಲೆ ಉತ್ಪನ್ನಗಳು, ಟೈರ್‌ಗಳು ಮತ್ತು ಇತರೆ ಸರಕುಗಳನ್ನು ಸಾಗಿಸುವ ಮೂಲಕ 2 ಕೋಟಿ ರೂ. ಆದಾಯವನ್ನು ತಂದುಕೊಟ್ಟಿವೆ. 130ಕ್ಕೂ ಹೆಚ್ಚು ಲೋಡ್ ಮಾಡಲಾದ ಪಾರ್ಸೆಲ್ ವ್ಯಾನ್‌ಗಳನ್ನು ವೇಗವಾಗಿ ಚಲಿಸುವ ಪ್ರಯಾಣಿಕ ರೈಲುಗಳಿಗೆ ಜೋಡಿಸಲಾಗಿದ್ದು, 3.36 ಕೋಟಿ ರೂ. ಆದಾಯ ಲಭಿಸಿದೆ.

ಪ್ರಯಾಣಿಕರ ವಿಭಾಗದಲ್ಲಿ ಪ್ರಸಕ್ತ ವರ್ಷದಲ್ಲಿ ಮೈಸೂರು ವಿಭಾಗದ ನಿಲ್ದಾಣಗಳಿಂದ ಹೊರಡುವ ಆಧಾರದ ಮೇಲೆ 14.04 ದಶಲಕ್ಷ ಪ್ರಯಾಣಿಕರನ್ನು ಸಾಗಿಸಿ 193.80 ಕೋಟಿ ರೂ. ಗಳಿಸಿದೆ.

ಜೊತೆಗೆ ವಿಭಾಗದ ಇತರೆ ಆದಾಯದ ಗಳಿಕೆ ಕೂಡ 11 ಕೋಟಿ ರೂ. ಆಗಿದೆ. ಇದರೊಂದಿಗೆ ಸರಕು ಸಾಗಣೆ, ಪಾರ್ಸೆಲ್‌ಗಳು ಮತ್ತು ಪ್ರಯಾಣಿಕರ ಸಾಗಾಟದಿಂದ ವಿಭಾಗದ ಒಟ್ಟು ಆದಾಯವು 902 ಕೋಟಿ ರೂ. ಆಗಿದೆ. ಇದರ ಹೊರತಾಗಿ ಸಮಯ ಪಾಲನೆಯಲ್ಲಿ ಮೈಸೂರು ವಿಭಾಗವು ಕಳೆದ ವರ್ಷದ ಶೇ.97.91ರಷ್ಟಕ್ಕೆ ಹೋಲಿಸಿದರೆ 2021–22ರ ಅವಧಿಯಲ್ಲಿ ಮೇಲ್/ಎಕ್ಸ್‌ಪ್ರೆಸ್ ರೈಲುಗಳನ್ನು ಓಡಿಸುವಲ್ಲಿ ಯಶಸ್ವಿಯಾಗಿ ಶೇ.99.14ರಷ್ಟು ಸಮಯ ಪಾಲನೆಯನ್ನು ಸಾಧಿಸುವ ಮೂಲಕ ನೈರುತ್ಯ ರೈಲ್ವೆಯು ಅತ್ಯುತ್ತಮ ಸಾಧನೆ ಮಾಡಿದೆ ಎಂದು ಮೈಸೂರು ವಿಭಾಗದ ಸಾರ್ವಜನಿಕ ಸಂಪರ್ಕ ಅಧಿಕಾರಿ ಹಾಗೂ ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕ ಡಾ. ಮಂಜುನಾಥ್ ಕನಮಡಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ಅಂಚೆ ಪೆಟ್ಟಿಗೆಗೆ ಅಂಚೆ ಪತ್ರ ಹಾಕುವ ಕಾರ್ಯಕ್ರಮ

ಮೈಸೂರು,ಏ.3–ಪ್ರಜಾಪ್ರಭುತ್ವ ಉಳಿವಿಗಾಗಿ ಇವಿಎಂ ನಿಷೇಧಿಸಿ, ಮತಪತ್ರ ಬಳಸುವಂತೆ ಚುನಾವಣಾ ಆಯೋಗವನ್ನು ಒತ್ತಾಯಿಸಿ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ವತಿಯಿಂದ ಏ.5ರಂದು ಬೆಳಗ್ಗೆ 11 ಗಂಟೆಗೆ ಮೈಸೂರಿನ ಮಹಾನಗರ ಪಾಲಿಕೆ ಕಚೇರಿ ಮುಂಭಾಗದಲ್ಲಿ ಅಂಚೆ ಪೆಟ್ಟಿಗೆಗೆ ಅಂಚೆ ಪತ್ರ ಹಾಕುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಮಿತಿ ಪ್ರಕಟಣೆ ತಿಳಿಸಿದೆ.

ಬಿಜೆಪಿ ಫಲಾನುಭವಿಗಳ ಪ್ರಕೋಷ್ಟಕ್ಕೆ ನೇಮಕ


ಮೈಸೂರು, ಏ. 3– ಮೈಸೂರು ನಗರ ಭಾರತೀಯ ಜನತಾ ಪಕ್ಷ, ಫಲಾನುಭವಿಗಳ ಪ್ರಕೋಷ್ಟ ವಿಭಾಗದ ಸಂಚಾಲಕರನ್ನಾಗಿ ಆರ್.ಪರಮೇಶ್ ಅವರನ್ನು ನೇಮಕ ಮಾಡಲಾಗಿದೆ ಎಂದು ಪಕ್ಷದ ಪ್ರಕಟಣೆ ತಿಳಿಸಿದೆ.



ಪಿಹೆಚ್.ಡಿ ಪದವಿ

ಮೈಸೂರು, ಏ. 3– ಡಾ.ವೈ.ಟಿ.ಕೃಷ್ಣೇಗೌಡ ಅವರ ಮಾರ್ಗದರ್ಶನದಲ್ಲಿ ಕೆ. ನಂದನ್ ಗಿರಿ ನಿರ್ವಹಣೆ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ನಾಳೆ...



ಇಂದಿನ ಪಂಚಾಂಗ

04.04.2022 ಸೋಮವಾರ, ಮಳೆ ನಕ್ಷತ್ರ: ರೇವತಿ 31.03.2022 ರಿಂದ 13.04.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಚೈತ್ರ ಮಾಸ, ಶುಕ್ಲ ಪಕ್ಷ
ತಿಥಿ: ತೃತೀಯ, ನಕ್ಷತ್ರ: ಭರಣಿ, ರಾಹುಕಾಲ: ಬೆಳಗ್ಗೆ 7.30 ರಿಂದ 9ರವರೆಗೆ

■ **ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್** : ಸಂಸ್ಕೃತಿ–2022, ವಿಶೇಷ ಕೈಮಗ್ಗ ವಸ್ತುಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ಬೆಳಗ್ಗೆ 10 ರಿಂದ.

■ **ಶ್ರೀ ಉತ್ತರಾದಿ ಮಠ:** ಬೆಳಗ್ಗೆ 9ಕ್ಕೆ ಶ್ರೀ ಸತ್ಯಾತ್ಮ ತೀರ್ಥರಿಂದ ಮುದ್ರಾಧಾರಣೆ, ಸಂಜೆ 6.30ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮ, ಸಂಜೆ 7ಕ್ಕೆ ಶ್ರೀ ಸತ್ಯಾತ್ಮ ತೀರ್ಥರಿಂದ ಪ್ರವಚನ, ಸ್ಥಳ: ಶ್ರೀ ಉತ್ತರಾದಿ ಮಠ, ಅಗ್ರಹಾರ.

■ **ಶ್ರೀ ಮಹಾಜನ ಸಭಾ, ಕೃಷ್ಣಮೂರ್ತಿಪುರಂ ಶ್ರೀ ರಾಮಮಂದಿರ** : 93ನೇ ವರ್ಷದ ಶ್ರೀರಾಮೋತ್ಸವದ ಸಾಂಸ್ಕೃತಿಕ ಕಾರ್ಯಕ್ರಮಗಳು, ಬೆಳಗ್ಗೆ 10ಕ್ಕೆ ಹೆಬ್ಬಾಳ ಸುಬ್ರಹ್ಮಣ್ಯನಗರದ ಶ್ರೀ ವಿದ್ಯಾಗಣಪತಿ ಭಜನಾ ಮಂಡಳಿಯವರಿಂದ ಭಜನೆ, ಸಂಜೆ 6ಕ್ಕೆ ಕು. ಕಾವ್ಯಶ್ರೀ ಮತ್ತು ಸಂಗಡಿಗರಿಂದ ದಾಸವಾಣಿ ಸ್ಥಳ: ಶ್ರೀರಾಮಮಂದಿರ, ಕೃಷ್ಣಮೂರ್ತಿಪುರಂ.

■ **ತ್ರಯೀನ್ಯಾಸ್ ಶ್ರೀವಿದ್ಯಾ ಫೌಂಡೇಷನ್** : 13ನೇ ವರ್ಷದ ವಸಂತ ನವರಾತ್ರಿ ಮಹೋತ್ಸವ, ಬೆಳಗ್ಗೆ 8.30ರಿಂದ ಮಹಾಭಿಷೇಕ, ಸಪ್ತಶತಿ ಪಾರಾಯಣ, ಲಲಿತೋಪಾಖ್ಯಾನ ಪಾರಾಯಣ, ಶ್ರೀ ಚಕ್ರಾರ್ಚನೆ, ಸಂಜೆ 5.30ಕ್ಕೆ ಶ್ರೀ ಮೇಧಾ ದಕ್ಷಿಣಾ ಮೂರ್ತಿ ಶ್ರೀ ಮಹಾ ಮೃತ್ಯುಂಜಯ ಹೋಮ, ಪೂರ್ಣಾಹುತಿ, ಕುಂಕುಮಾರ್ಚನೆ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ತ್ರಯೀನ್ಯಾಸ್, ಜಯಲಕ್ಷ್ಮಿಪುರಂ.

■ **ಶ್ರೀ ರಾಮಸೇವಾ ಮಂಡಳಿ ಚಾರಿಟಬಲ್ ಟ್ರಸ್ಟ್:** ಶ್ರೀರಾಮನವಮಿ ಸಂಗೀತ ಕಾರ್ಯಕ್ರಮ, ವಿದ್ವಾನ್ ರಾಕೇಶ್ ಅಯ್ಯರ್ ಅವರಿಂದ ಗಾಯನ, ಪೃಥ್ವಿ ಭಾಸ್ಕರ್ –ಪಿಟೀಲು, ನಂದನ್ ಕಶ್ಯಪ್–ಮೃದಂಗ, ಸಂಜೆ 5.15ಕ್ಕೆ, ವಿದುಷಿ ಸಿಂಧು ಸುಚೇತನ್ ಮತ್ತು ಹೆಚ್.ಎಂ.ಸ್ಮಿತಾ ಅವರಿಂದ ಗಾಯನ, ಪೃಥ್ವಿ ಭಾಸ್ಕರ್ –ಪಿಟೀಲು, ತುಮಕೂರು ಬಿ.ರವಿಶಂಕರ್– ಮೃದಂಗ, ಶರತ್ ಕೌಟಿ– ಘಟ ಸ್ಥಳ : ಶ್ರೀ ಪ್ರಸನ್ನ ಪಾರ್ವತಿ ಕಲ್ಯಾಣ ಮಂಟಪ, ವಿ.ವಿ. ಮೊಹಲ್ಲಾ, ಸಂಜೆ 6.15ಕ್ಕೆ.

■ **ಶ್ರೀ ಗಣಪತಿ ಸೇವಾ ಮಂಡಳಿ ಟ್ರಸ್ಟ್** : ರಾಮೋತ್ಸವ ಕಾರ್ಯಕ್ರಮಗಳು, ವಿದ್ವಾನ್ ಸುಜಲಾ ಘೋರೆ ಶಿಷ್ಯವೃಂದದವರಿಂದ ಭಜನೆ, ಪ್ರೊ ಎಂ.ಕೃಷ್ಣೇಗೌಡ ಅವರಿಂದ ಮಾತೆಂಬುದು ಜ್ಯೋತಿರ್ಲಿಂಗ ಎಂಬ ವಿಷಯ ಕುರಿತು ಉಪನ್ಯಾಸ, ಸ್ಥಳ: ರಜತ್ ಸಭಾ ಮಂಟಪ, ಐ ಬ್ಲಾಕ್, ರಾಮಕೃಷ್ಣನಗರ, ಸಮಯ: ಸಂಜೆ 6.30ಕ್ಕೆ

■ **ಮೈಸೂರು ವಿಶ್ವವಿದ್ಯಾನಿಲಯ:** ಮೈಸೂರು ವಿಶ್ವವಿದ್ಯಾನಿಲಯದ ಪ್ರೊ.ಎಸ್.ಶ್ರೀಕಂಠಸ್ವಾಮಿ ಅಭಿನಂದನಾ ಸಮಿತಿ, ಎಂ.ಟೆಕ್ ಇನ್ ಮೆಟೀರಿಯಲ್ ಸೈನ್ಸ್, ಪರಿಸರ ಅಧ್ಯಯನ ವಿಭಾಗ ಮಾನಸ ಗಂಗೋತ್ರಿ ಸಹಯೋಗದಲ್ಲಿ ಮೈಸೂರು ವಿವಿ ಎಂ.ಟೆಕ್ ಇನ್ ಮೆಟೀರಿಯಲ್ ಸೈನ್ಸ್ ವಿಭಾಗದ ಅಧ್ಯಕ್ಷರಾದ ಪ್ರೊ. ಎಸ್. ಶ್ರೀಕಂಠಸ್ವಾಮಿ ಅವರಿಗೆ ಅಭಿನಂದನಾ ಸಮಾರಂಭ, ಸಾನ್ನಿಧ್ಯ: ಆದಿಚುಂಚನಗಿರಿ ಪೀಠಾಧ್ಯಕ್ಷರಾದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಅಭಿನಂದನಾ ಭಾಷಣ: ಬೆಂಗಳೂರು ಭಾರತೀಯ ವಿಜ್ಞಾನ ಸಂಸ್ಥೆಯ ಪ್ರೊಫೆಸರ್ ಎಮಿರಿಟಸ್ ಪ್ರೊ.ಕೆ.ಜೆ.ರಾವ್, ಅತಿಥಿಗಳು: ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ. ಕೆ.ಎಸ್.ರಂಗಪ್ಪ, ಗುಲ್ಬರ್ಗಾ ವಿವಿ ವಿಶ್ರಾಂತ ಕುಲಪತಿ ಪ್ರೊ. ಎಸ್.ಆರ್. ನಿರಂಜನ, ಗೌರವಾಧ್ಯಕ್ಷರು: ರಾಜ್ಯ ಮುಕ್ತ ವಿವಿ ವಿಶ್ರಾಂತ ಕುಲಪತಿ ಪ್ರೊ. ಎನ್.ಎಸ್.ರಾಮೇಗೌಡ, ಅಧ್ಯಕ್ಷತೆ: ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತಕುಮಾರ್, ಸ್ಥಳ: ವಿಜ್ಞಾನ ಭವನ ಸಭಾಂಗಣ, ಸಮಯ: ಸಂಜೆ 5ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಹಾಗೂ ಸಂಜೆ 5ಕ್ಕೆ ಅಮೃತ ಸ್ವಾತಂತ್ರ್ಯ ಮಾಲಿಕೆಯಲ್ಲಿ 'ಸಂಗ್ರಾಮದ ಸ್ಮೃತಿಗಳು' ಮೈಸೂರು ಸಂಸ್ಥಾನದ ಹೋರಾಟದ ನೆನಪುಗಳ ಮಾಲೆ ಪ್ರಸ್ತುತಿ: ದಿವಾಕರ ಹೆಗಡೆ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ, ಗಾಯನ– ಗೀತಾ ವೈಪುಟ್ಟಿ, ವ್ಯಾಖ್ಯಾನ: ಮೈಸೂರು ಕೃಷ್ಣಮೂರ್ತಿ, 7.15 ತ್ಯಾಜ್ಯ ನಿಭಾಯಿಸುವ ರೀತಿ 'ಮನೆ ಬಾಗಿಲಿಗೆ ಸಮಗ್ರ ಮಾಹಿತಿ' ಪ್ರಾಯೋಜಿತ ಕಾರ್ಯಕ್ರಮ, 7.45 ನಿತ್ಯ ವಿಜ್ಞಾನ ಪ್ರಾಯೋಜಿತ ಕಾರ್ಯಕ್ರಮ, 9.05 'ಯಕ್ಷ ಸಂಪದ' ಯಕ್ಷಗಾನದ ಬಡಗುತಿಟ್ಟಿನ ಮಟ್ಟುಗಳ ರೇಡಿಯೋ ಪ್ರಾತ್ಯಕ್ಷಿಕೆ–ಕರ್ನಾಟಕ ಯಕ್ಷಗಾನ ಅಕಾಡೆಮಿ ಪ್ರಾಯೋಜಿತ ಕಾರ್ಯಕ್ರಮ, ನಿರ್ಮಾಣ ಮತ್ತು ಪ್ರಸ್ತುತಿ: ದಿವಾಕರ ಹೆಗಡೆ, 9.35 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ 'ಸ್ವಾತಂತ್ರ್ಯ ಚಳವಳಿಯ ಪಯಣ' ಆಕಾಶವಾಣಿಯೊಂದಿಗೆ, 10.00 ಲಯ ಸಂಭ್ರಮ: ತಾಳ, ಲಯ ರಸಾಸ್ವಾದ. ಪರಿಕಲ್ಪನೆ ಮತ್ತು ಪ್ರಸ್ತುತಿ: ಹೆಚ್.ಎಲ್. ಶಿವಶಂಕರಸ್ವಾಮಿ, ನಿರ್ಮಾಣ: ಎಸ್. ಸುಬ್ರಹ್ಮಣ್ಯಂ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.05 ವನಿತಾ ವಿಹಾರ, 12.30 ಭಕ್ತಿಗೀತೆಗಳು–ನಿತಿನ್ ರಾಜಾರಾಂ ಶಾಸ್ತ್ರಿ, 12.45 ನಮ್ಮ ಆರೋಗ್ಯ: ರಾಷ್ಟ್ರೀಯ ಅಂಧತ್ವ ನಿವಾರಣಾ ಸಪ್ತಾಹದ ಸಂದರ್ಭದಲ್ಲಿ 'ದೃಷ್ಟಿ ನಮ್ಮ ಹಕ್ಕು' ಕುರಿತು ಡಾ.ಸಿ.ಎನ್.ಮಧುಸೂದನ್ ಅವರೊಂದಿಗೆ ಮಾತುಕತೆ, 1.20 ಭಾವಗೀತೆ–ಎ.ಡಿ. ಶ್ರೀನಿವಾಸನ್, 3.00 ವಿ.ವಿ.ಸುಬ್ರಹ್ಮಣ್ಯಂ: ವಯೋಲಿನ್, 4.00 ಮಹಿಳಾ ರಂಗ 'ಡಾಕ್ಟರ್ ಸಮಯ' ವಿಷಯ: ಬೇಸಿಗೆಯಲ್ಲಿ ತಣ್ಣಗಿರುವುದು ಹೇಗೆ? ಭಾಗವಹಿಸುತ್ತಾರೆ ಆಯುರ್ವೇದ ವೈದ್ಯೆ ಡಾ.ಚೈತ್ರಾ ಪ್ರಸ್ತುತಿ: ಕೆ.ಬಿ.ಮೀನಾ, 4.30 ಝೇಂಕಾರ: ಮಕ್ಕಳ ಗೀತಗಾಯನ ಕಲಿಕಾ ಕಾರ್ಯಕ್ರಮ, 6.50 ಕೃಷಿರಂಗ 'ಕಿಸಾನ್‌ವಾಣಿ' ಮಿಶ್ರ ಕೃಷಿಯಲ್ಲಿ ಅಭಿವೃದ್ಧಿ ಕುರಿತು ಪ್ರಗತಿಪರ ಕೃಷಿಕ ಸಿ. ಚನ್ನಪ್ಪ ಅವರೊಡನೆ ಸಂದರ್ಶನ, 9.30 ಅಮೃತ ಸ್ವಾತಂತ್ರ್ಯ ಮಾಲಿಕೆಯ ವಿಶೇಷ ಕಾರ್ಯಕ್ರಮ, 10.30 ಸವಿನೆನಪು

ಮೈಸೂರಲ್ಲಿ ಸಂಭ್ರಮದ ಯುಗಾದಿ ಆಚರಣೆ

ಮೈಸೂರು,ಏ.3(ಎಂಟಿವೈ)–ಹಿಂದೂ ಸಂವತ್ಸರದಲ್ಲಿ ಹೊಸ ವರ್ಷವಾದ 'ಯುಗಾದಿ' ಹಬ್ಬವನ್ನು ಮೈಸೂರಿನಲ್ಲಿ ಶ್ರದ್ಧಾ–ಭಕ್ತಿ ಮತ್ತು ಸಂಭ್ರಮ–ಸಡಗರದಿಂದ ಆಚರಿಸಲಾಯಿತು. ಕೊರೊನಾ ಮತ್ತು ಲಾಕ್‌ಡೌನ್ ಕಾರಣದಿಂದ ಕಳೆದ 2 ವರ್ಷದಿಂದ ಯುಗಾದಿ ಹಬ್ಬದ ಆಚರಣೆ ಮಂಕಾಗಿತ್ತು. ಆದರೆ ಪ್ರಸ್ತುತ ಕೊರೊನಾ ಸೋಂಕು



ಇಳಿಮುಖಗೊಂಡಿದ್ದು, ಕೊರೊನಾ ಮಾರ್ಗಸೂಚಿಗಳನ್ನು ಸರ್ಕಾರ ಹಿಂಪಡೆದಿರುವುದರಿಂದ ಈ ವರ್ಷ ಯುಗಾದಿ ಹಬ್ಬವನ್ನು ಜನರು ಸಂಭ್ರಮ ಮತ್ತು ಸಡಗರದಿಂದ ಆಚರಿಸಿದರು.

ಶನಿವಾರ ಬೆಳಗ್ಗೆಯೇ ಮನೆಗಳಲ್ಲಿ ದೇವರ ಪೂಜೆ ಮಾಡಿ ಬೇವು–ಬೆಲ್ಲ ತಿಂದು, ದೇವಾಲಯಗಳಿಗೆ ಕುಟುಂಬದ ಸದಸ್ಯರೊಂದಿಗೆ ತೆರಳಿ ವಿಶೇಷ ಪೂಜೆ ಸಲ್ಲಿಸಿದ ದೃಶ್ಯ ಎಲ್ಲೆಡೆ ಕಂಡುಬಂದಿತು. ಮೈಸೂರಿನ ನಜರ್‌ಬಾದ್‌ನಲ್ಲಿರುವ ಮಲೆ ಮಹದೇಶ್ವರ ದೇವಸ್ಥಾನ, ಕೋಟೆ ಆಂಜನೇಯಸ್ವಾಮಿ ದೇವಾಲಯ, ಗಣಪತಿ ದೇವಾಲಯ, ಗಣಪತಿ ಆಶ್ರಮದ ಆವರಣದಲ್ಲಿರುವ ಶ್ರೀ ವೆಂಕಟೇಶ್ವರ ಸ್ವಾಮಿ ದೇವಾಲಯ, ಒಂಟಿಕೊಪ್ಪಲಿ ನಲ್ಲಿರುವ ವೆಂಕಟರಮಣಸ್ವಾಮಿ ದೇವಸ್ಥಾನ, ಅಮೃತೇಶ್ವರ ದೇವಾಲಯ, ಚಂದ್ರಮೌಳೇಶ್ವರ ದೇವಾಲಯ, ಬಂದಂತಮ್ಮ ದೇವಾಲಯ, ವಿವಿಧೆಡೆ ಇರುವ ಮಹದೇಶ್ವರ ದೇವಾಲಯ ಸೇರಿದಂತೆ ಬಹುತೇಕ ಎಲ್ಲಾ ಬಡಾವಣೆಗಳಲ್ಲಿರುವ ದೇವಾಲಯಗಳಲ್ಲೂ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ತೆರಳಿ ಪೂಜೆ ಸಲ್ಲಿಸುವುದರ ಜೊತೆಗೆ ಬೇವು–ಬೆಲ್ಲ ವಿತರಿಸಿ ಯುಗಾದಿಯ ಶುಭಾಶಯ ಕೋರುತ್ತಿದ್ದ ದೃಶ್ಯ ಕಂಡು ಬಂದಿತು.

ಈ ವರ್ಷ ತಮ್ಮ ಬಾಳಲ್ಲಿ ಸುಖ, ಶಾಂತಿ, ನೆಮ್ಮದಿ ನೆಲೆಸಲಿ ಎಂದು ಭಕ್ತಾದಿಗಳು ದೇವರಿಗೆ ಪೂಜೆ ಸಲ್ಲಿಸಿ ಪ್ರಾರ್ಥಿಸಿದರು. ನಂತರ ದೇವರಿಗೆ, ಹಿರಿಯರಿಗೆ ನಮಸ್ಕರಿಸಿ ಬೇವು –ಬೆಲ್ಲ ತಿಂದು ಶುಭಾಶಯ ವಿನಿಮಯ ಮಾಡಿಕೊಂಡರು.

ಮಧ್ಯಾಹ್ನ ಹೋಳಿಗೆ, ಪಾಯಸ ಸವಿದು ಸಂಭ್ರಮಿಸಿದರು. ಸಂಜೆ ದೇವಾಲಯಗಳಿಗೆ ತೆರಳಿ ಪಂಚಾಂಗ ಶ್ರವಣ ಮಾಡಿ ವಿಶೇಷ ಪೂಜೆ ಸಲ್ಲಿಸಿದರು. ಹಬ್ಬದ ಅಂಗವಾಗಿ ರೈತರು ತಮ್ಮ ದನಕರುಗಳನ್ನು ತೊಳೆದು ಪೂಜೆ ಸಲ್ಲಿಸಿದರು. ವ್ಯವಸಾಯ ಉಪಕರಣಗಳಾದ ನೇಗಿಲು, ನೊಗ, ಕುಂಟೆ, ಎತ್ತಿನಗಾಡಿಗಳಿಗೆ ಪೂಜೆ ಸಲ್ಲಿಸಲಾಯಿತು.

ಗ್ರಾಮೀಣ ಪ್ರದೇಶಗಳಲ್ಲಿ ದೇವರ ಮೆರವಣಿಗೆ: ಯುಗಾದಿ ಹಿನ್ನೆಲೆಯಲ್ಲಿ ಮೈಸೂರು ಜಿಲ್ಲೆಯ ಬಹುತೇಕ ಗ್ರಾಮಗಳಲ್ಲಿ ಗ್ರಾಮ ದೇವರ ಪೂಜಾ ಮಹೋತ್ಸವ ಹಾಗೂ ಮೆರವಣಿಗೆ ಉತ್ಸವ ಜರುಗಿತು. ಸಂಗಮ ಕ್ಷೇತ್ರದಲ್ಲಿ ಗ್ರಾಮ ದೇವರ ಉತ್ಸವ ಮೂರ್ತಿಗೆ ಅಭಿಷೇಕ ಮಾಡಿಸಿಕೊಂಡು ಗ್ರಾಮಗಳಿಗೆ ತೆರಳಿ ಮೆರವಣಿಗೆ ಮಾಡಲಾಯಿತು. ಗ್ರಾಮೀಣ ಭಾಗದಲ್ಲಿ ಯುಗಾದಿ ಹಬ್ಬ ಸಂಭ್ರಮದಿಂದ ಆಚರಿಸುವ ವಾಡಿಕೆಯಿದ್ದು, ಶನಿವಾರ ಎಲ್ಲೆಡೆ ಯುಗಾದಿ ಹಬ್ಬದ ಖಳೆ ಕಟ್ಟಿತ್ತು.

ಚಾಮುಂಡಿಬೆಟ್ಟದಲ್ಲಿ ಯುಗಾದಿ ಧಾರ್ಮಿಕ ದಿನ ಆಚರಣೆ

●ಆರು ಕಡೆ ಬೇವಿನ ಗಿಡ ನೆಟ್ಟು ಧಾರ್ಮಿಕ ದಿನಕ್ಕೆ ಶಾಸಕ ಜಿ.ಟಿ.ದೇವೇಗೌಡ ಚಾಲನೆ ●ದೇವಾಲಯದಲ್ಲಿ ಯುಗಾದಿ ವಿಶೇಷ ಪೂಜೆ ●ಎಲ್ಲರ ಒಳಿತಿಗಾಗಿ ಶಾಸಕರಿಂದ ಪ್ರಾರ್ಥನೆ

ಮೈಸೂರು, ಏ.3(ಎಂಟಿವೈ)– ರಾಜ್ಯದಲ್ಲಿ ಪ್ರಸಕ್ತ ಸಾಲಿನಿಂದ ಯುಗಾದಿ ಹಬ್ಬವನ್ನು ಧಾರ್ಮಿಕ ದಿನವಾಗಿ ಆಚರಿಸಲು ಸರ್ಕಾರ ಘೋಷಿಸಿದ್ದು, ಮೈಸೂರು ಜಿಲ್ಲೆಯಲ್ಲಿ ಧಾರ್ಮಿಕ ದಿನದ ಆಚರಣೆಗೆ ಶಾಸಕ ಜಿ.ಟಿ.ದೇವೇಗೌಡ ಚಾಲನೆ ನೀಡಿದರು.

ಚಾಮುಂಡಿಬೆಟ್ಟದ ದೇವಾಲಯದ ಸಮೀಪದಲ್ಲಿ ಶನಿವಾರ ಸಂಜೆ ಜಿಲ್ಲಾಡಳಿತ, ಮುಜರಾಯಿ, ಧಾರ್ಮಿಕ ದತ್ತಿ ಇಲಾಖೆ, ಚಾಮುಂಡಿಬೆಟ್ಟದ ದೇವಾಲಯದ ಆಡಳಿತ ಮಂಡಳಿ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಶಾಸಕ ಜಿ.ಟಿ.ದೇವೇಗೌಡ ಯುಗಾದಿಯನ್ನು ಧಾರ್ಮಿಕ ದಿನವಾಗಿ ಆಚರಿಸುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಭಕ್ತರು ಹಾಗೂ ಬೆಟ್ಟದ ನಿವಾಸಿಗಳಿಗೆ ಬೇವು–ಬೆಲ್ಲ ವಿತರಿಸಿ 6 ಸ್ಥಳಗಳಲ್ಲಿ ಬೇವಿನ ಗಿಡ ನೆಟ್ಟರು.

ಇದೇ ವೇಳೆ ಶಾಸಕ ಜಿ.ಟಿ.ದೇವೇಗೌಡ ಮಾತನಾಡಿ, ಹಿಂದೂ ಸಂವತ್ಸರದಲ್ಲಿ ಯುಗಾದಿಯನ್ನು ಹೊಸ ವರ್ಷವೆಂದು ಪರಿಗಣಿಸಲಾಗುತ್ತದೆ. ಬಹುತೇಕ ಹಿಂದೂಗಳು ಯುಗಾದಿ ದಿನದಂದೇ ವಿವಿಧ ಚಟುವಟಿಕೆ ಆರಂಭಿಸುತ್ತಾರೆ. ರಾಜ್ಯ ಸರ್ಕಾರ ಈ ಸಾಲಿನಿಂದ ಯುಗಾದಿಯನ್ನು ಧಾರ್ಮಿಕ ದಿನವೆಂದು ಆಚರಿಸಲು ಘೋಷಿಸಿದೆ. ಜಿಲ್ಲಾ ಕಾರ್ಯಕ್ರಮವನ್ನು ಚಾಮುಂಡಿ ಬೆಟ್ಟದಲ್ಲಿ ಆಯೋಜಿಸಿದ್ದರಿಂದ, ಧಾರ್ಮಿಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಎಲ್ಲರಿಗೂ ಒಳ್ಳೆಯದಾಗಲೆಂದು ಚಾಮುಂಡೇಶ್ವರಿಯಲ್ಲಿ ಪ್ರಾರ್ಥಿಸಿದ್ದೇನೆ ಎಂದು ಶಾಸಕ ಜಿಟಿಡಿ ಹೇಳಿದರು.



ಯುಗಾದಿ ಹಬ್ಬವನ್ನು ಧಾರ್ಮಿಕ ದಿನವಾಗಿ ಆಚರಿಸುವ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಬಳಿಕ ಶಾಸಕ ಜಿ.ಟಿ.ದೇವೇಗೌಡ ಚಾಮುಂಡಿಬೆಟ್ಟದಲ್ಲಿ 6 ಕಡೆ ಬೇವಿನಗಿಡ ನೆಟ್ಟರು. ಚಿತ್ರದಲ್ಲಿ ಎಡಿಸಿ ಡಾ.ಮಂಜುನಾಥ್, ಚಾಮುಂಡಿಬೆಟ್ಟ ಗ್ರಾ.ಪಂ ಅಧ್ಯಕ್ಷ ಭರತ್‌ಕುಮಾರ್, ದೇವಾಲಯದ ಆಡಳಿತಾಧಿಕಾರಿ ಯತಿರಾಜ್ ಸಂಪತ್‌ಕುಮಾರನ್ ಇನ್ನಿತರರನ್ನು ಕಾಣಬಹುದು.

ಸಮಾಜದಲ್ಲಿ ಶಾಂತಿ ನೆಲೆಸಬೇಕಾದರೆ ಎಲ್ಲರೂ ದ್ವೇಷದ ಮನೋಭಾವ ದೂರ ಮಾಡುವುದರೊಂದಿಗೆ ಅಸೂಯೆಯನ್ನು ಬಿಡಬೇಕು. ನಮ್ಮಲ್ಲಿರುವ ದ್ವೇಷ, ಅಸೂಯೆ ದೂರವಾದರೆ ಸಮಾಜದಲ್ಲಿ ಶಾಂತಿ ನೆಲೆಸುವುದರೊಂದಿಗೆ ಸಹಬಾಳ್ವೆ ಮೂಡುತ್ತದೆ. ಎಲ್ಲರೂ ಸಹೋದರರಾಗಿ ಬಾಳ್ವೆ ನಡೆಸಲು ಮುಂದಾಗಬೇಕು. ಹೊಸ ವರ್ಷ ಎಲ್ಲರ ಬಾಳಲ್ಲೂ ಹೊಸತನ ತಂದು ಏಳಿಗೆ ಸಾಧಿಸಲು ಸಹಕಾರಿಯಾಗಲಿ ಎಂದು ಹರಸಿದರು.

ವಿಶೇಷ ಪೂಜೆ: ಯುಗಾದಿ ಹಿನ್ನೆಲೆಯಲ್ಲಿ ಶನಿವಾರ ಮುಂಜಾನೆಯಿಂದಲೇ ಚಾಮುಂಡೇಶ್ವರಿ ದೇವಾಲಯದಲ್ಲಿ ವಿಶೇಷ ಪೂಜಾ ಕೈಂಕರ್ಯ ಜರುಗಿದವು. ದೇವಿಗೆ ವಿಶೇಷ ಅಭಿಷೇಕ ನೆರ ವೇರಿಸಲಾಯಿತು. ದೇವಾಲಯಕ್ಕೆ ಬರುವ ಎಲ್ಲಾ ಭಕ್ತರಿಗೂ ಬೇವು–ಬೆಲ್ಲ ವಿತರಿಸಲಾಯಿತು. ಮಧ್ಯಾಹ್ನ 12 ಗಂಟೆಯಿಂದ ದಾಸೋಹ ಭವನದಲ್ಲಿ ಪ್ರಸಾದ ವಿತರಿಸಲಾಯಿತು.

ಕಾರ್ಯಕ್ರಮದ ಅಂಗವಾಗಿ ಸಂಜೆ 6 ಗಂಟೆಯಿಂದ ಕಲಾವಿದ ವಿ.ಕೃಷ್ಣಮೂರ್ತಿ ತಂಡದಿಂದ ವಾದ್ಯಗೋಷ್ಠಿ, ಡಾ.ವೀಣಾ ರವಿಕುಮಾರ್ ತಂಡದಿಂದ ಸಂಗೀತ ಕಾರ್ಯಕ್ರಮ ನಡೆಯಿತು. ಈ ಸಂದರ್ಭದಲ್ಲಿ ಎಡಿಸಿ ಡಾ.ಮಂಜುನಾಥ್, ಚಾಮುಂಡಿ ಬೆಟ್ಟ ಗ್ರಾ.ಪಂ ಅಧ್ಯಕ್ಷ ಭರತ್‌ಕುಮಾರ್, ದೇವಾಲಯದ ಆಡಳಿತಾಧಿಕಾರಿ ಯತಿರಾಜ್ ಸಂಪತ್ ಕುಮಾರನ್, ಸಹಾಯಕ ಕಾರ್ಯನಿರ್ವಹಣಾಧಿಕಾರಿ ಡಿ.ಕೆ.ದಿನೇಶ್ ಇನ್ನಿತರರು ಉಪಸ್ಥಿತರಿದ್ದರು.

ರಾಷ್ಟ್ರೀಯ ಸ್ವಯಂ ಸೇವಕ ಸಂಘದಿಂದ ಯುಗಾದಿ ಉತ್ಸವ ಆಚರಣೆ



ಮೈಸೂರು,ಏ.3(ಎಂಟಿವೈ)–ಮೈಸೂರಿನ ಮಹಾರಾಜ ಪದವಿಪೂರ್ವ ಕಾಲೇಜು ಮೈದಾನದಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ವತಿಯಿಂದ ಶನಿವಾರ ಯುಗಾದಿ ಉತ್ಸವ ಜರುಗಿತು. ಉತ್ಸವದಲ್ಲಿ ಸ್ವಯಂ ಸೇವಕ ಸಂಘದ ಸ್ಥಾಪಕರಾದ ಡಾ.ಹೆಡಗೇವಾರ್ ಮತ್ತು ಗುರೂಜಿ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಕಾರ್ಯಕ್ರಮ ಆರಂಭಿಸಲಾಯಿತು. ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ದಕ್ಷಿಣ ಕ್ಷೇತ್ರದ ಸಂಘಚಾಲಕ ವಿ.ನಾಗರಾಜ ಮಾತನಾಡಿ, ಪ್ರತಿ ಯುಗದಲ್ಲೂ ಆಂತರಿಕ ಶಕ್ತಿ ಇರುವಂತಹ ಒಬ್ಬ ವ್ಯಕ್ತಿ ಸಮಾಜಕ್ಕೆ ಸರಿ ದಾರಿ ತೋರಿಸುತ್ತಾನೆ. ಹೆಡಗೇವಾರ್ ಆ ರೀತಿಯ ಮಾರ್ಗದರ್ಶನವನ್ನು ಸಮಾಜಕ್ಕೆ ನೀಡಿದರು. ಅವರು ಮಾಡಿದಂತಹ ಸಮಾಜ ಸುಧಾರಣೆ ಮತ್ತು ಜಾಗೃತಿಯ ಫಲವಾಗಿ ಇಂದು ಶ್ರೀರಾಮಮಂದಿರ ನಿರ್ಮಾಣವಾಗುತ್ತಿದೆ. ಜಮ್ಮು–ಕಾಶ್ಮೀರದಲ್ಲಿ ಆರ್ಟಿಕಲ್ 370 ರದ್ದಾಯಿತು. ಹಿಂದೂಗಳು ತಮ್ಮ ಧರ್ಮದ ಬಗ್ಗೆ ಹೆಮ್ಮೆ ಪಟ್ಟಾಗ ಮಾತ್ರ ಇಂತಹ ಅಮೂಲಾಗ್ರ ಬದಲಾವಣೆಯಾಗುತ್ತದೆ. ಅಂತಹ ಮಹತ್ತರ ಕಾರ್ಯವನ್ನು ಮಾಡಿದ್ದು ಸಂಘ ಎನ್ನುವುದನ್ನು ಹೆಮ್ಮೆಯಿಂದ ಹೇಳಬೇಕು. ಇಂದು ನಾವು ಆಧ್ಯಾತ್ಮಿಕ ಜಾಗೃತಿ ಮತ್ತು ಸಾಮಾಜಿಕ ಭದ್ರತೆಯ ಪರ್ವದಲ್ಲಿದ್ದೇವೆ ಎಂದರು. ಕಾರ್ಯಕ್ರಮದಲ್ಲಿ ಶಾಸಕರಾದ ಎಸ್.ಎ.ರಾಮದಾಸ್, ಎಲ್.ನಾಗೇಂದ್ರ, ಕುವೆಂಪು ವಿವಿ ವಿಶ್ರಾಂತ ಕುಲಪತಿ ಡಾ.ಚಿದಾನಂದಗೌಡ, ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಮೈಸೂರು ವಿಭಾಗ ಮಾನ್ಯ ಸಂಘ ಚಾಲಕ ಡಾ.ವಾಮಾನರಾವ್ ಬಾಪಟ್, ನಗರ ಸಂಘ ಚಾಲಕ ವಾಸುದೇವ್ ಭಟ್ ಇತರರು ಇದ್ದರು.

ಪಿಹೆಚ್.ಡಿ ಪದವಿ

ಮೈಸೂರು,ಏ.3–ಡಾ.ಹೆಚ್.ಎಸ್.ಯತಿರಾಜನ್ ಮಾರ್ಗದರ್ಶನದಲ್ಲಿ ಹೆಚ್.ಕಿರಣ್‌ಕುಮಾರ್ ರಸಾಯನಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ



ಸಾದರಪಡಿಸಿದ ಮಹಾಪ್ರಬಂಧವನ್ನು, ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ವ್ಯಕ್ತಿ ನಾಪತ್ತೆ

ಮೈಸೂರು, ಏ.3– ಸಾಲ ಮಾಡಿಕೊಂಡಿದ್ದ ವ್ಯಕ್ತಿಯೋರ್ವ ನಾಪತ್ತೆಯಾಗಿರುವ ಸಂಬಂಧ ಮಂಡಿ ಮೊಹಲ್ಲಾ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪಾಸಿಲ್ ಅಹಮದ್ (22), ಮಾ.21ರಂದು ಮನೆ ಬಿಟ್ಟು ಹೋಗಿದ್ದು, ಹೋಗುವಾಗ ಪತ್ರವೊಂದನ್ನು ಬರೆದಿಟ್ಟಿದ್ದು, ಅದರಲ್ಲಿ ತಾನು ಸಾಲ ಮಾಡಿಕೊಂಡಿರುವ ಕಾರಣ ತಿಳಿಸಿದ್ದಾರೆ ಎಂದು ಅವರ ಪತ್ನಿ ಶ್ರೀಮತಿ ಸಾದಿಯಾ ಸುಲ್ತಾನ್ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ. ಇವರ ಬಗ್ಗೆ ಮಾಹಿತಿ ಸಿಕ್ಕಲ್ಲಿ ದೂ.0821–2418339, 2418313, 2418513, ಮೊ.ನಂ.9845862184 ಮೂಲಕ ತಿಳಿಸಲು ಕೋರಲಾಗಿದೆ.



ಮೈಸೂರಿನ ಜೀವಿತ ಫೌಂಡೇಶನ್‌ನ ರೋಗಿಗಳ ಆರೈಕೆ ಕೇಂದ್ರದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಕೇಂದ್ರದಲ್ಲಿ ಆಶ್ರಯ ಪಡೆದಿರುವ ಮಹಿಳೆಯರು ಸೇರಿದಂತೆ ಪುರುಷರಿಗೆ ಅಖಿಲ ಭಾರತ ವೀರಶೈವ ಮಹಾಸಭಾದ ಜಿಲ್ಲಾ ಮಹಿಳಾ ಘಟಕದ ವತಿಯಿಂದ ಏರ್ಪಡಿಸಿದ್ದ ವಸ್ತ್ರದಾನ ಕಾರ್ಯಕ್ರಮದಲ್ಲಿ ಘಟಕದ ಅಧ್ಯಕ್ಷರೂ ಆದ ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ ವಸ್ತ್ರ ವಿತರಣೆ ಮಾಡಿದರು. ಪಾಲಿಕೆ ಸದಸ್ಯ ಪೈ.ಶ್ರೀನಿವಾಸ್, ಫೌಂಡೇಶನ್‌ನ ಅಧ್ಯಕ್ಷ ಚಂದ್ರಶೇಖರ್, ಕೋಶಾಧ್ಯಕ್ಷ ಚಂದ್ರ ಮೋಹನ್, ಮಾಜಿ ಉಪಮೇಯರ್ ಶಾರದಮ್ಮ, ಕಲ್ಯಾಣಿ, ನಟರಾಜಪ್ಪ, ವಿಜಯ್, ಚಿನ್ನಸ್ವಾಮಿ ಘಟಕದ ಪದಾಧಿಕಾರಿಗಳು ಇದ್ದರು.

ಮುಕ್ತ ವಿವಿ ಸಹ ಪ್ರಾಧ್ಯಾಪಕ ಡಾ.ತೇಜಸ್ವಿ ನವಿಲೂರ್ ಅಮಾನತು

ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಮುಖ್ಯಸ್ಥರಾಗಿದ್ದಾಗ ಕರ್ತವ್ಯ ಲೋಪ ಆರೋಪ

ಮೈಸೂರು, ಏ.3(ಎಂಕೆ)– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ



(ಕೆಎಸ್‌ಓಯು)ದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಸಹ ಪ್ರಾಧ್ಯಾಪಕ ಡಾ.ತೇಜಸ್ವಿ ನವಿಲೂರ್ ಅವರನ್ನು ಸೇವೆಯಿಂದ ಅಮಾನತುಗೊಳಿಸಲಾಗಿದೆ.

ಮುಕ್ತ ವಿಶ್ವವಿದ್ಯಾನಿಲಯವು ಜುಲೈ–2021ನೇ ಸಾಲಿನಿಂದ ಯುಜಿಸಿ ನಿಯಮದಂತೆ ಪಠ್ಯಕ್ರಮ ಅಳವಡಿಸಿಕೊಳ್ಳಲು ತಿರ್ಮಾನಿಸಿ 17ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಸ್ನಾತಕೋತ್ತರ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಷಯದ ಪಠ್ಯಕ್ರಮವು ಅನುಮೋದನೆಗೊಂಡಿತ್ತು. ಡಾ.ತೇಜಸ್ವಿ ನವಿಲೂರ್ 2013ರ ಡಿ.28ರಿಂದ 2021ರ ಡಿ.16ರವರೆಗೆ ವಿಭಾಗದ ಅಧ್ಯಕ್ಷರು ಹಾಗೂ 2019ರ ಫೆ.8ರಿಂದ 2022ರ ಫೆ.7ರವರೆಗೆ ಸ್ನಾತಕೋತ್ತರ ಅಧ್ಯಯನ ಮಂಡಳಿ ಸಮಿತಿಯ ಅಧ್ಯಕ್ಷರಾಗಿಯೂ ಕರ್ತವ್ಯ ನಿರ್ವಹಿಸಿದ್ದಾರೆ.

ಆದರೆ, ಈ ಅವಧಿಯಲ್ಲಿ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಷಯದ ಪಠ್ಯಗಳನ್ನು ರಚಿಸುವ ಸಂಬಂಧ ಯಾವುದೇ ಕ್ರಮವಹಿಸಿಲ್ಲ. ಅಲ್ಲದೆ ವಿವಿಯಿಂದ ಸಿಬಿಸಿಎಸ್ ಸಿದ್ಧಪಾಠಗಳನ್ನು ರಚಿಸಿ ಸಲ್ಲಿಸುವ ಸಂಬಂಧ 2021ರ ಸೆ.23, ಅ.29 ಹಾಗೂ ಡಿ.8ರಂದು ಸಭೆಗಳನ್ನು ನಡೆಸಲಾಗಿದ್ದು, ಸದರಿ ಸಭೆಗಳಿಗೆ ಗೈರು ಹಾಜರಾಗಿದ್ದಾರೆ.

ಸಿಬಿಸಿಎಸ್ ಪಠ್ಯಕ್ರಮ ಹಾಗೂ ಅಧ್ಯಯನ ಸಾಮಗ್ರಿಗಳನ್ನು ಸಿದ್ಧಪಡಿಸಿ ಸಲ್ಲಿಸದೆ ವಿಳಂಬ ಮಾಡಿ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಷಯಕ್ಕೆ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳ ಶೈಕ್ಷಣಿಕ ಭವಿಷ್ಯಕ್ಕೆ ಧಕ್ಕೆ ಉಂಟಾಗುವುದಕ್ಕೆ ಕಾರಣರಾಗಿದ್ದಾರೆ. ಜವಾಬ್ದಾರಿಯುತ ಅಧಿಕಾರದ ಹುದ್ದೆಯಲ್ಲಿದ್ದು, ಕರ್ತವ್ಯ ಪಾಲನೆ ಸರಿಯಾಗಿ ನಿರ್ವಹಿಸದೆ ಇರುವುದರಿಂದ ಮುಕ್ತ ವಿವಿ ಅಳವಡಿಸಿಕೊಂಡಿರುವ ಮೈಸೂರು ವಿವಿ ಉದ್ಯೋಗಿಗಳ(ಸಿಸಿಎ) ಪರಿನಿಯಮಗಳನ್ವಯ ಡಾ.ತೇಜಸ್ವಿ ನವಿಲೂರ್ ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಅಮಾನತ್ತಿನಲ್ಲಿಡಲು ಕುಲಪತಿಗಳ ಆದೇಶದ ಮೇರೆಗೆ ಕುಲಸಚಿವ ಪ್ರೊ. ರಾಜಣ್ಣ ಆದೇಶ ಹೊರಡಿಸಿದ್ದಾರೆ.



ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕಿನ ನಿರ್ಗಮಿತ ಅಧ್ಯಕ್ಷ ಕೆ.ಉಮಾಶಂಕರ್ ಅವರನ್ನು ಬಿಜೆಪಿ ಮುಖಂಡರಾದ ಎಲ್.ಚೌಡಪ್ಪ ಸನ್ಮಾನಿಸಿದರು. ಬ್ಯಾಂಕಿನ ಎಸ್.ಸೋಮಣ್ಣ, ವಕೀಲ ಪಡುವಾರಹಳ್ಳಿ ಎಂ.ರಾಮಕೃಷ್ಣ, ಎಸ್.ಅರವಿಂದ, ಜನಹಿತ ವಿವಿಧೋದ್ದೇಶ ಸಹಕಾರ ಸಂಘದ ನಿರ್ದೇಶಕರಾದ ಸೋಮಣ್ಣ, ಎಸ್.ಕೃಷ್ಣಕುಮಾರ್, ಬಿ.ಕುಮಾರ್, ಸಂತೋಷ್, ಒಕ್ಕಲಿಗರ ಸಂಘದ ನಿರ್ದೇಶಕ ಎ.ರವಿ ಉಪಸ್ಥಿತರಿದ್ದಾರೆ.

ಆಲ್ ಇಂಡಿಯಾ ಸೀನಿಯರ್ ಟೆನ್ನಿಸ್ ಟೂರ್ನಮೆಂಟ್‌ನಲ್ಲಿ ಮೈಸೂರಿನ ತುಳಸೀರಾಮುಗೆ ಪ್ರಶಸ್ತಿ

ಮೈಸೂರು,ಏ.3(ಎಂಕೆ)–ಮೈಸೂರಿನ ಹಿರಿಯ ಟೆನ್ನಿಸ್ ಕ್ರೀಡಾಪಟು ಬಿ.ಎಸ್.ತುಳಸಿರಾಮು ಕೊಲ್ಕತ್ತದಲ್ಲಿ ನಡೆದ ಆಲ್ ಇಂಡಿಯಾ ಸೀನಿಯರ್ಸ್ ಟೆನ್ನಿಸ್ ಟೂರ್ನಮೆಂಟ್‌ನಲ್ಲಿ 65 ವರ್ಷ ಮೇಲ್ಪಟ್ಟವರ ವಿಭಾಗದ ಸಿಂಗಲ್ಸ್ ಹಾಗೂ ಡಬಲ್ಸ್‌ನಲ್ಲಿ ಮೊದಲ ಪ್ರಶಸ್ತಿ ಗಳಿಸಿದ್ದಾರೆ. ಸಿಂಗಲ್ಸ್‌ನಲ್ಲಿ ತಮಿಳುನಾಡಿನ ಸೇತು ವಿರುದ್ಧ 6–3, 6–4



ಹಾಗೂ ತಿರುಪತಿ ಧನಂಜಯ ಜೊತೆಗೂಡಿ ಡಬಲ್ಸ್‌ನಲ್ಲಿ ತಮಿಳುನಾಡಿನ ಸೇತು ಮತ್ತು ಆಂಧ್ರಪ್ರದೇಶದ ಸನ್ಯಾಸಿ ರಾಜು ವಿರುದ್ಧ 6–3, 7–5 ನೇರ ಸೆಟ್‌ನಲ್ಲಿ ವಿಜಯ ಸಾಧಿಸಿದ್ದಾರೆ.

68 ವರ್ಷದ ತುಳಸಿರಾಮು ಅವರು, 40ಕ್ಕೂ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಟೆನ್ನಿಸ್ ಪಂದ್ಯಾವಳಿಗಳಲ್ಲಿ ಭಾಗವಹಿಸಿದ್ದು, ಸಿಂಗಲ್ಸ್ ಹಾಗೂ ಡಬಲ್ಸ್ ವಿಭಾಗ ಸೇರಿ 60ಕ್ಕೂ ಹೆಚ್ಚು ಬಾರಿ ಪ್ರಶಸ್ತಿ ಪಡೆದಿದ್ದಾರೆ. 2015ರಲ್ಲಿ ಸಿಂಗಾಪುರ್‌ನಲ್ಲಿ ಇಂಟರ್ ನ್ಯಾಷನಲ್ ಟೆನ್ನಿಸ್ ಫೆಡರೇಷನ್ ಆಯೋಜಿಸಿದ್ದ 'ಚಾರ್ಲ್ಸ್ ಸೈಮನ್ ಸೀನಿಯರ್ ಚಾಂಪಿಯನ್ ಶಿಪ್'ನಲ್ಲಿ ಪ್ರಥಮ, 2016ರಲ್ಲಿ ಚೀನಾದ ಶೆಂಜನ್‌ನಲ್ಲಿ ನಡೆದ ಹಿರಿಯರ ಟೆನ್ನಿಸ್ ಪಂದ್ಯಾವಳಿಯ ಡಬಲ್ಸ್ ವಿಭಾಗದ ರನ್ನರ್ ಅಪ್ ಸೇರಿದಂತೆ 5ಕ್ಕೂ ಅಂತರರಾಷ್ಟ್ರೀಯ ಟೆನ್ನಿಸ್ ಪಂದ್ಯಾವಳಿಗಳಲ್ಲಿ ಪ್ರಶಸ್ತಿ ಪಡೆದ ಸಾಧನೆ ಮಾಡಿದ್ದಾರೆ. ಅಲ್ಲದೆ ರಾಷ್ಟ್ರಮಟ್ಟದಲ್ಲಿ ಹಾಗೂ ದಸರಾ ಕ್ರೀಡಾ ಕೂಟ ಸೇರಿದಂತೆ ಹಲವಾರು ಟೆನ್ನಿಸ್ ಪಂದ್ಯಾವಳಿಗಳಲ್ಲಿ ಭಾಗಹಿಸಿದ ಹಿರಿಯ ಕ್ರೀಡಾಪಟು ಎಂಬ ಹೆಗ್ಗಳಿಕೆ ಪಡೆದಿದ್ದಾರೆ.

ಅರಮನೆ ಆವರಣದಲ್ಲಿ ಯುಗಾದಿ ಸಂಗೀತೋತ್ಸವ

ಆಕರ್ಷಕ ಪೊಲೀಸ್ ಬ್ಯಾಂಡ್, ಗ್ರ್ಯಾಂಡ್ ಜುಗಲ್ ಬಂದಿಗೆ ಮೈಮರೆತ ಪ್ರೇಕ್ಷಕರು



ಮೈಸೂರು, ಏ.3(ಜಿಎ)–ಯುಗಾದಿ ಸಂಗೀತೋತ್ಸವದಲ್ಲಿ ಪೊಲೀಸ್ ಬ್ಯಾಂಡ್ ವಾದ್ಯವೃಂದ ಎಂದಿನಂತೆ ವಿಶೇಷವಾಗಿ ಗಮನ ಸೆಳೆದರೆ, ಗ್ರ್ಯಾಂಡ್‌ಜುಗಲ್ ಬಂದಿ ಸಂಗೀತ ಸಂಭ್ರಮವೂ ಎಲ್ಲರಿಗೂ ಸರದೌತಣ ನೀಡಿತು.

ಯುಗಾದಿ ಹಬ್ಬದ ಅಂಗವಾಗಿ ಮೈಸೂರು ಅರಮನೆ ಮಂಡಳಿ ವತಿಯಿಂದ ಅರಮನೆಯ ಆವರಣದಲ್ಲಿ ಆಯೋಜಿಸಿರುವ ಮೂರು ದಿನಗಳ ಯುಗಾದಿ ಸಂಗೀತೋತ್ಸವದ ಎರಡನೇ ದಿನವಾದ ಇಂದು ಅರಮನೆಯಲ್ಲಿ ನೆರೆದಿದ್ದ ಸಂಗೀತ ಪ್ರೇಮಿಗಳು ಸಂಗೀತೋತ್ಸವದಲ್ಲಿ ನಡೆದ ಕಾರ್ಯಕ್ರಮಕ್ಕೆ ಮನಸೋತರು.

ಇಂದು ಸಂಜೆ 6ಕ್ಕೆ ಕರ್ನಾಟಕ ಪೊಲೀಸ್ ಬ್ಯಾಂಡ್ ಆರ್.ಮೋಹನ್ ಅವರ ನೇತೃತ್ವದಲ್ಲಿ ನಡೆಯಿತು. ಎಂ.ಆರ್. ಹನುಮಂತರಾಜು (ತಬಲ), ವಿ. ಸತೀಶ್ (ಕ್ಲ್ಯಾರಿನೆಟ್ಸ್), ಎಂ.ಆರ್. ಉದಯ್‌ಕುಮಾರ್ (ಮೃದಂಗ), ಆರ್.ದಾಸಪ್ಪ (ತಬಲ), ಎಂ.ವಿ. ಶಿವಕುಮಾರ್ (ಕಾರ್ನೇಟ್), ಎನ್.ಜಯರಾಮು (ಕ್ಯಾರಿಯೊನೋಟ್), ಕಾರ್ತಿಕ್ (ಮ್ಯಾಂಡೋಲಿನ್), ಎಂ.ವಿ. ಶಾಂತಕುಮಾರ್ (ಪೀಟಿಲು), ಎಸ್. ಪದ್ಮನಾಭ(ಕೊಳಲು), ಎಂ.ಆರ್.ಶ್ರೀಕಾಂತ್, ಎಂ.ತ್ಯಾಗರಾಜು, ಎಂ.ವಿ. ಮಧುಸೂದನ್ (ಪೀಟಿಲು) ಹಾಗೂ ಎನ್.ಕುಮಾರ್ (ಡೋಲಕ್) ಅವರುಗಳು ಸಾಥ್ ನೀಡಿದರು.

ಬಿ.ಮಂಜುನಾಥ್ ಅವರ ನೇತೃತ್ವದಲ್ಲಿ ಇಂಗ್ಲೀಷ್ ಬ್ಯಾಂಡ್‌ಗೆ ಹೆಚ್.ಎಸ್.ಗಣೇಶ್, ಜಾನ್‌ರೂಬನ್, ಎಸ್.ವಿನ್ಸಂಟ್, ಎಸ್.ಶಂಕರ್,



ವಯೋಲಿನ್ ಕಲಾವಿದ ಡಾ.ಮೈಸೂರು ಮಂಜುನಾಥ್ ಸುಯಿನಿ ರಾಗದಲ್ಲಿ ಪಿಟೀಲು ವಾದನ ಮತ್ತು ಕೊಳಲು ವಾದನ ಕಲಾವಿದ ಪಂಡಿತ್ ಪ್ರವೀಣ್ ಗೋಡ್ಖಿಂಡಿ ಅವರು ಹಂಸನಂದಿ ರಾಗದ ಮೂಲಕ ಜುಗಲ್‌ಬಂದಿ ನಡೆಯಿತು.

ಅಂತೋಣಿ ಡಿಸಿಲ್ವ, ಮೆರಿಯ ವಿನ್ಸೆಂಟ್, ಜೋಸೆಫ್ ಡಿಸಿಲ್ವ, ರಾಜೇಂದ್ರಪ್ರಸಾದ್, ಜಿ.ಜನಾರ್ಧನ್, ಎಸ್.ಹರೀಶ್, ಜಿ.ಶಿವಕುಮಾರ್, ವಿ.ಮಂಜುನಾಥ್, ಎನ್.ಮೋಹನ್‌ಕುಮಾರ್, ಎನ್.ಚಂದ್ರಶೇಖರ್, ಸ್ವನಿ ಕಿರಣ್, ಎಸ್.ಥಾಮಸ್, ಪಿ.ಚಂದ್ರಶೇಖರ್ ಒಳಗೊಂಡ ತಂಡವು ವಿವಿಧ 12 ಸಾಹಿತ್ಯಗಳನ್ನು ವಿವಿಧ ರಾಗ ಮತ್ತು ತಾಳದಲ್ಲಿ ನುಡಿಸುವುದರ ಮೂಲಕ ಗಮನ ಸೆಳೆಯಿತು.

ನಂತರ 7ಕ್ಕೆ ಆರಂಭವಾದ 'ಗ್ರ್ಯಾಂಡ್ ಜುಗಲ್ ಬಂದಿ ಸಂಗೀತ ಸಂಭ್ರಮ'ದಲ್ಲಿ ಅಂತರಾಷ್ಟ್ರಿಯ ಖ್ಯಾತ ವಯೋಲಿನ್ ಕಲಾವಿದ ಡಾ. ಮೈಸೂರು ಮಂಜುನಾಥ್ ಅವರು ಹಿಂದೂಸ್ಥಾನಿ ಶೈಲಿಯ ಸಂಗೀತದ ಸುಯಿನಿ ರಾಗದಲ್ಲಿ ಪಿಟೀಲು ವಾದನ ಮತ್ತು ಅಂತರಾಷ್ಟ್ರಿಯ ಖ್ಯಾತ ಕೊಳಲು ವಾದನ ಕಲಾವಿದರಾದ ಪಂಡಿತ್ ಪ್ರವೀಣ್ ಗೋಡ್ಖಿಂಡಿ ಅವರು ಕರ್ನಾಟಿಕ್ ಶೈಲಿಯ ಹಂಸನಂದಿ ರಾಗದ ಮೂಲಕ ನಡೆದ ಇಬ್ಬರ ಜುಗಲ್ ಬಂದಿ ನೆರೆದಿದ್ದ ಸಂಗೀತ ಪ್ರೇಮಿಗಳಿಗೆ ಯುಗಾದಿಯ ಒಬ್ಬಟ್ಟು ನೀಡಿದಂತಾಯಿತು. ಇವರಿಗೆ ಬಿ.ಸಿ. ಮಂಜುನಾಥ್ (ಮೃದಂಗ), ಕಿರಣ್ ಗೋಡ್ಖಿಂಡಿ (ತಬಲ), ಭೂಮಿಕ (ತಂಬೂರಿ) ಮತ್ತು ಅಭಿಷೇಕ್ ಅವರು (ರೀದಮ್ ಪ್ಯಾಡ್) ಸಾಥ್ ನೀಡಿದರು. ನಾಳೆ(ಏ.4) ಕಡೆಯ ದಿನ ಸಂಜೆ 6ಕ್ಕೆ ಡಾ. ಎಸ್.ವಿ. ಸಹನಾ ಅವರಿಂದ ವೀಣಾವಾದನ ಮತ್ತು ಸಂಜೆ 7ಕ್ಕೆ ವಿದ್ವಾನ್ ಹೆಚ್.ಎಲ್. ಶಿವಶಂಕರ ಸ್ವಾಮಿ ಮತ್ತು ತಂಡದಿಂದ ಲಯಲಹರಿ ಕಾರ್ಯಕ್ರಮ ನಡೆಯಲಿದೆ.

ಯುಗಾದಿ ಸಂಗೀತೋತ್ಸವದ ಮೊದಲ ದಿನದ ಸಂಜೆ ಯದುಕುಮಾರ್ ಮತ್ತು ತಂಡದವರು ಮಂಗಳವಾದ್ಯ ಮತ್ತು ಸ್ಯಾಕ್ಸೋಫೋನ್ ವಾದನ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ನಂತರ 7ಕ್ಕೆ ಖ್ಯಾತ ಜಾನಪದ ಗಾಯಕಿ ಅನನ್ಯ ಭಟ್ ಮತ್ತು ತಂಡ ಜಾನಪದ ಗೀತೆಗಳ ಮೂಲಕ ನೆರೆದಿದ್ದ ಜನರನ್ನು ರಂಜಿಸಿದರು.



ಪೊಲೀಸ್ ಇಲಾಖೆಯಲ್ಲಿ ಶಿಸ್ತು, ಉತ್ತಮ ನಡವಳಿಕೆ ಮುಖ್ಯ

ಪೊಲೀಸ್ ಧ್ವಜ ದಿನಾಚರಣೆಯಲ್ಲಿ ನಿವೃತ್ತ ಎಸ್ಪಿ ಶಿವಕುಮಾರಯ್ಯ ಅಭಿಮತ



ಮೈಸೂರು,ಏ.3(ಎಂಟಿವೈ)–ಪೊಲೀಸ್ ಇಲಾಖೆಯಲ್ಲಿ ಶಿಸ್ತು ಮತ್ತು ಉತ್ತಮ ನಡವಳಿಕೆ ಬಹಳ ಮುಖ್ಯವಾದ ಅಂಗವಾಗಿದ್ದು, ಕರ್ತವ್ಯ ನಿರತ ಸಿಬ್ಬಂದಿಗಳು ಈ ಎರಡು ಗುಣಗಳಿಗೆ ಆಧ್ಯತೆ ನೀಡಬೇಕು ಎಂದು ನಿವೃತ್ತ ಎಸ್ಪಿ ಶಿವಕುಮಾರಯ್ಯ ಸಲಹೆ ನೀಡಿದ್ದಾರೆ.

ಮೈಸೂರಿನ ಸಿಎಆರ್ ಮೈದಾನದಲ್ಲಿ ಶನಿವಾರ ನಡೆದ ಪೊಲೀಸ್ ಧ್ವಜ ದಿನಾಚರಣೆಯಲ್ಲಿ ಗೌರವ ವಂದನೆ ಸ್ವೀಕರಿಸಿ ಮಾತನಾಡಿದ ಅವರು, ಸಮಾಜದಲ್ಲಿ ನಾವು ಹೇಗೆ ನಡೆದುಕೊಳ್ಳಬೇಕು. ಸಮಾಜ ನನ್ನಿಂದ ಏನನ್ನು ಅಪೇಕ್ಷೆ ಪಡೆಯುತ್ತದೆ ಎಂಬುದು ನಮ್ಮ ಶಿಸ್ತು ಹಾಗೂ ನಡವಳಿಕೆ ತೀರ್ಮಾನಿಸುತ್ತದೆ. ಪ್ರತಿವರ್ಷ ಏ.2ರಂದು ಪೊಲೀಸ್ ಧ್ವಜ ದಿನಾಚರಣೆಯನ್ನು ಯಾವ ಕಾರಣಕ್ಕಾಗಿ ಆಚರಿಸಲಾಗುತ್ತಿದೆ ಎಂಬ ಮಾಹಿತಿಯನ್ನು ಎಲ್ಲರೂ ತಿಳಿದುಕೊಂಡಿರಬೇಕು ಎಂದು ಸಲಹೆ ನೀಡಿದರು.

1956ರ ಹಿಂದೆ ಮದ್ರಾಸ್ ಪ್ರಾಂತ್ಯ, ಹೈದರಾ ಬಾದ್ ಪ್ರಾಂತ್ಯ ಮತ್ತು ಮುಂಬೈ ಪ್ರಾಂತ್ಯದ ಕೆಲವು ಜಿಲ್ಲೆಗಳು ಪೊಲೀಸ್ ಕಾಯಿದೆಗಳನ್ನು ಕ್ರಮಬದ್ಧ ವಾಗಿ ಅಳವಡಿಸಿಕೊಂಡಿರಲಿಲ್ಲ. ಆಡಳಿತದಲ್ಲಿ ಅಸ್ತ ವ್ಯಸ್ತತೆ ಎದ್ದು ಕಾಣುತ್ತಿತ್ತು. 1963ರಲ್ಲಿ ಮೈಸೂರು ವಿಶಾಲ ರಾಜ್ಯ ಎಂದು ಸೇರಿಸಿ ಅಸ್ತವ್ಯಸ್ತಗೊಂಡಿದ್ದ ಕಾಯಿದೆಗಳನ್ನು ಮಾರ್ಪಾಡು ಮಾಡಿ ಏಕರೂಪದ ಕಾಯಿದೆಗಳನ್ನು ತರಲು ತೀರ್ಮಾನ ಮಾಡಿ ಒಂದು ಸಮಿತಿಯನ್ನು ರಚಿಸಲಾಯಿತು. ಈ ಸಮಿತಿಯ ಶಿಫಾರಸ್ಸಿನಂತೆ 1965 ಏ.2ರಂದು ಏಕರೂಪದ ಕಾಯಿದೆಗಳನ್ನು ಜಾರಿಗೆ ತಂದರು. ಈ ಹಿನ್ನೆಲೆಯಲ್ಲಿ ಈ ದಿನವನ್ನು ಪೊಲೀಸ್ ಧ್ವಜ ದಿನಾಚರಣೆಯ ಮೂಲಕ ಆಚರಿಸಲಾಗುತ್ತದೆ ಎಂದರು. ಸೇವೆಯಿಂದ ನಿವೃತ್ತರಾದ ಪೊಲೀಸ್ ಅಧಿಕಾರಿಗಳಿಗೆ ಹಾಗೂ ಸಿಬ್ಬಂದಿಗೆ ಈ ದಿನವನ್ನು ಕಲ್ಯಾಣ ದಿನವೆಂದು ಘೋಷಿಸಲಾಗಿದೆ. ಪೊಲೀಸ್ ಕಿರು ಧ್ವಜಗಳನ್ನು ಮಾರಾಟ ಮಾಡಿ ಅದರಿಂದ ಬಂದಂತಹ ಹಣವನ್ನು ನಿವೃತ್ತಿಯಾದ ಸಿಬ್ಬಂದಿಗೆ ನೆರವು ನೀಡಲಾಗುತ್ತದೆ ಎಂದರು. ಕಾರ್ಯಕ್ರಮದಲ್ಲಿ ನಿವೃತ್ತ ಸಿಬ್ಬಂದಿಗಳನ್ನು ಗೌರವಿಸಲಾಯಿತು. ದಕ್ಷಿಣ ವಲಯದ ಐಜಿಪಿ ಪ್ರವೀಣ್ ಮಧುಕರ್ ಪವಾರ್, ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ, ಜಿಲ್ಲಾ ಎಸ್‌ಪಿ ಆರ್.ಚೇತನ್, ಡಿಸಿಪಿಗಳಾದ ಪ್ರದೀಪ್ ಗುಂಟಿ, ಗೀತಾ ಪ್ರಸನ್ನ, ಹೆಚ್ಚುವರಿ ಎಸ್ಪಿ ಶಿವಕುಮಾರ್ ಉಪಸ್ಥಿತರಿದ್ದರು.

ನಕ್ಕರೆ ಅದೇ ಸ್ವರ್ಗ

ಟೀಚರ್ : ಆನೆ ದೊಡ್ಡದಾ? ಇರುವೆ ದೊಡ್ಡದಾ?

ಗುಂಡ : ಹಾಗೆಲ್ಲಾ ಸುಮ್ನೆ ಹೇಳೋಕಾಗಲ್ಲ ಡೇಟ್ ಆಫ್ ಬರ್ತ್ ಬೇಕು ಮೇಡಂ

ಮೈಸೂರು ಮಿತ್ರ

ಸೋಮವಾರ, 4 ಏಪ್ರಿಲ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ವಿದ್ಯಾರ್ಥಿಗಳು ಭತ್ತ ಬೆಳೆಯುವ ಗದ್ದೆಗಳಾಗಬೇಕೇ ಹೊರತು ಭತ್ತ ತುಂಬುವ ಚೀಲಗಳಾಗಬಾರದು.

– ಕುವೆಂಪು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು


ಹುಟ್ಟುಗುಣ ಸುಟ್ಟರೂ ಹೋಗದು.

ನಿಮ್ಮ ಪತ್ರಗಳು

ಬಿಸಿಯೂಟಕ್ಕೆ ಶಿವಕುಮಾರಸ್ವಾಮಿಗಳ ಹೆಸರು: ಭಕ್ತ ಸಮೂಹಕ್ಕೆ ಸಂತಸ

ಮಾನ್ಯರೇ,

ನಡೆದಾಡುವ ದೇವರು ಶ್ರೀ ಸಿದ್ದಗಂಗಾ ಮಠದ ಶ್ರೀ ಶಿವಕುಮಾರ ಸ್ವಾಮೀಜಿಗಳವರ 115ನೇ ಜಯಂತಿ ಸಂದರ್ಭದಲ್ಲಿ ಸರ್ಕಾರವು ಶಾಲಾ ಮಕ್ಕಳ ಮಧ್ಯಾಹ್ನದ ಬಿಸಿ ಊಟದ ಯೋಜನೆಗೆ ಶ್ರೀಗಳ ಹೆಸರನ್ನು ನಾಮಕರಣ ಮಾಡುವುದಾಗಿ ಘೋಷಿಸಿರುವುದು ಎಲ್ಲರಿಗೂ ಸಂತೋಷ ತರುವ ಸಂಗತಿಯಾಗಿದೆ.



90 ವರ್ಷಗಳ ತನು–ಮನ–ಧನದ ಮೂಲಕ ದಾಖಲೆ ಸೇವೆ ಮಾಡಿರುವ, ಅಸಂಖ್ಯಾತ ಜನರ ಹೃದಯದಲ್ಲಿ ನೆಲೆಸಿರುವ ಇಡೀ ವಿಶ್ವಕ್ಕೆ ದಾಸೋಹದ ಸಿದ್ಧಾಂತವನ್ನು ಪಸರಿಸಿದ ಶ್ರೀ ಶಿವಕುಮಾರ ಸ್ವಾಮೀಜಿಗಳು ತಮ್ಮ ನಡೆಯಿಂದ ಹೆಸರಾಗಿದ್ದಾರೆ. ಜೀವನದುದ್ದಕ್ಕೂ ಕಾಯಕ ಮತ್ತು ದಾಸೋಹವನ್ನು ಅಳವಡಿಸಿಕೊಂಡು ನಿರಾಡಂಬರ, ನಿಸ್ವಾರ್ಥ, ನಿರ್ಮಲ, ನಿರ್ವಂಚನೆಯ, ಪ್ರಾಮಾಣಿಕತೆಯಲ್ಲಿ ಭಕ್ತಿ, ಜ್ಞಾನ, ಕರ್ಮಗಳ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದರು. ದೀನ–ದಲಿತರ, ಹಿಂದುಳಿದ ಅನಾಥ ಮಕ್ಕಳ ಹಾಗೂ ಜಾತಿ, ಭೇದ, ಮತ ಮರೆತು ಎಲ್ಲ ವರ್ಗದ ಮಕ್ಕಳಿಗೆ ಸರ್ವಜನಾಂಗದ ತೋಟದಂತಿರುವ ಸಿದ್ಧಗಂಗೆಯಲ್ಲಿ ಅಕ್ಷರದ ಜೊತೆಗೆ ಹಸಿವಿನ ದಾಹವನ್ನು ನೀಗಿಸಿದ ಪುಣ್ಯ ಪುರುಷರು, ಶ್ರೀಗಳು ನಾಡಿನಾದ್ಯಂತ ಜಂಗಮದ ಜೋಳಿಗೆಯನ್ನು ಹೆಗಲಿಗೆ ಕಟ್ಟಿಕೊಂಡು ವ್ಯಾಪಾರಸ್ಥರಿಂದ, ಭಕ್ತರಿಂದ ಸಂಪತ್ತನ್ನು ಸಂಗ್ರಹಿಸಿ ಮಕ್ಕಳಿಗಾಗಿ ತಮ್ಮ ಸರ್ವಸ್ವವನ್ನು ತ್ಯಾಗ ಮಾಡಿ ತಾವೇ ಅಡುಗೆಯನ್ನು ಮಾಡಿ ಉಣಬಡಿಸುತ್ತಿದ್ದರು.

ಸಮಾಜದ ಒಳಿತಿಗಾಗಿ ತಮ್ಮನ್ನು ತಾವು ಅರ್ಪಿಸಿಕೊಂಡು ಗಂಧದ ಕೊರಡಿನಂತೆ ತೇಯ್ದಿದ್ದಾರೆ, ದಾಸೋಹ ಕಾಯಕಕ್ಕೆ ಹೊಸ ಭಾಷ್ಯ ಬರೆದ ಶ್ರೀಗಳ ಹೆಸರನ್ನು ಬಿಸಿ ಊಟದ ಯೋಜನೆಗೆ ನಾಮಕರಣ ಮಾಡುತ್ತಿರುವುದು ಅರ್ಥಪೂರ್ಣವಾಗಿದೆ, ಸರ್ಕಾರದ ಈ ನಡೆಗೆ ತುಂಬು ಹೃದಯದ ಅನಂತ ಅನಂತ ಧನ್ಯವಾದಗಳು.

– ಪರಶಿವಮೂರ್ತಿ ಎನ್.ಪಿ, ನಂಜೀಪುರ, ಸರಗೂರು ತಾಲೂಕು.

ಕುಟುಂಬದವರೇ ಫೌಂಡೇಷನ್ ಮಾಡಲಿ

ಮಾನ್ಯರೇ

ದಕ್ಷಿಣ ಭಾರತದ ಖ್ಯಾತ ಪೋಷಕ ನಟ ಪ್ರಕಾಶ್ ರೈ (ಪ್ರಕಾಶ್ ರಾಜ್) ಅವರು ಡಾ. ಪುನೀತ್ ರಾಜ್‌ಕುಮಾರ್ ಹೆಸರಿನಲ್ಲಿ **Appu Foundation** ಪ್ರಾರಂಭಿಸುವ ಬಗ್ಗೆ ಘೋಷಿಸಿದ್ದಾರೆ.



ಅವರ ಈ ನಿರ್ಣಯವನ್ನು ಅಭಿಮಾನಿಗಳಾದ ನಾವು ಪ್ರಬಲವಾಗಿ ವಿರೋಧಿಸುತ್ತೇವೆ. ಡಾ. ಪುನೀತ್ ರಾಜ್‌ಕುಮಾರ್ ಫೌಂಡೇಷನ್ ಅನ್ನು ಡಾ. ರಾಜ್‌ಕುಮಾರ್ ಕುಟುಂಬದವರೇ ಸ್ಥಾಪಿಸಿ ಶ್ರೀಮತಿ ಅಶ್ವಿನಿ ಪುನೀತ್ ರಾಜ್‌ಕುಮಾರ್ ಪ್ರತಿಷ್ಠಾನದ ಅಧ್ಯಕ್ಷರಾಗಿರಲು ಕುಟುಂಬದ ಇತರೆ ಸದಸ್ಯರು ಸಹಕರಿಸಲಿ. ಸರ್ಕಾರಗಳು, ಅಭಿಮಾನಿಗಳು ನೀಡುವ ಅನುದಾನ, ವಂತಿಕೆ, ದಾನ ಸ್ವೀಕರಿಸಿ, ಆರೋಗ್ಯ ಸಮಸ್ಯೆಯಿಂದ ಬಳಲುತ್ತಿರುವ ಬಡವರ ಚಿಕಿತ್ಸಾ ವೆಚ್ಚ, ಔಷಧಿ ಸೇರಿದಂತೆ ಆರೋಗ್ಯ ಕ್ಷೇತ್ರಕ್ಕೆ ಡೊನೇಷನ್ ನೀಡಲಿ.

– ನಾಗೇಂದ್ರ ಶರ್ಮ, ಮೈಸೂರು

ಸಾಧನೆಗೆ ಸಂದ ಗೌರವ

ಮಾನ್ಯರೇ

ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಸಹಕಾರ ಸಪ್ತಾಹದಲ್ಲಿ ಚಾಮರಾಜ ಕ್ಷೇತ್ರದ ಮಾಜಿ ಶಾಸಕರಾದ ವಾಸು ಅವರಿಗೆ ಸಹಕಾರ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಇದು ಅವರ ಸಾಧನೆಗೆ ಸಂದ ಗೌರವವಾಗಿದೆ.



ಶಾಸಕರಾಗಿದ್ದಾಗ ವಾಸು ಅವರು ಮೈಸೂರಿಗೆ ಜಯದೇವ ಆಸ್ಪತ್ರೆ, ನೂತನ ಮಹಾರಾಣಿ ಕಾಲೇಜು, ಟ್ರಾಮಾ ಸೆಂಟರ್, ಆಯುರ್ವೇದ ಆಸ್ಪತ್ರೆ ಉನ್ನತೀಕರಣ ಸೇರಿದಂತೆ ಹಲವಾರು ಯೋಜನೆಗಳು ಆರಂಭವಾದವು. ಇದೆಲ್ಲಾ ಕೋವಿಡ್ ಸಂಕಷ್ಟದಲ್ಲಿ ಇರುವವರಿಗೆ ಉಪಯೋಗವಾಯಿತು.

ವಾಸು ಅವರು ಶಿಕ್ಷಣ ಕ್ಷೇತ್ರ, ಸಹಕಾರ ಕ್ಷೇತ್ರ, ಪತ್ರಿಕೋದ್ಯಮ, ರಾಜಕೀಯ ಹಾಗೂ ಕ್ರೀಡಾ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ತಾಯಿ ಚಾಮುಂಡೇಶ್ವರಿ ವಾಸು ಅವರ ಮುಂದಿನ ಯೋಜನೆಗಳನ್ನು ಸಾಕಾರಗೊಳಿಸಲಿ.

– ಎಸ್.ಪಿ. ರಾಜೇಶ್, ವಿವಿ ಮೊಹಲ್ಲಾ, ಮೈಸೂರು

ಮಣ್ಣು ತೆರವುಗೊಳಿಸಿ

ಮಾನ್ಯರೇ

ಮೈಸೂರಿನ ಡಿ. ಸುಬ್ಬಯ್ಯ ರಸ್ತೆಯ ರಾಜಕಾಲುವೆ ಬಳಿ ಮಹಾನಗರ ಪಾಲಿಕೆಯಿಂದ ಒಳಚರಂಡಿ ಪೈಪ್‌ಗಳ ಬದಲಾವಣೆ ಕಾಮಗಾರಿ ನಡೆಸಿದ ನಂತರ ಉಳಿದಿರುವ ಮಣ್ಣಿನ ರಾಶಿಯನ್ನು ಹಾಗೇ ಬಿಟ್ಟು ತಿಂಗಳು ಕಳೆದರೂ ಸಂಬಂಧಪಟ್ಟ ಗುತ್ತಿಗೆದಾರರು ಅದನ್ನು ತೆರವುಗೊಳಿಸಿಲ್ಲ.



ಗಾಳಿ ಬೀಸಿದರೆ ಸಾಕು ಮಣ್ಣಿನ ರಾಶಿಯಿಂದ ಧೂಳು ಬರುತ್ತಿದ್ದು, ಸುತ್ತ ಮುತ್ತಲಿನ ಮನೆಯವರಿಗೆ ಮನೆಯ ಮುಂದೆ ಧೂಳು ತೆಗೆಯುವುದೇ ಒಂದು ಕೆಲಸವಾಗಿದೆ. ಮಣ್ಣಿನ ರಾಶಿಯನ್ನು ಬೀದಿ ನಾಯಿಗಳು ಹಾಗೂ ದನಗಳು ಕೆದರುತ್ತಿದ್ದು, ಮಳೆ ಬಂದರಂತೂ ರಸ್ತೆಯ ಮೇಲೆ ಕೆಸರು ರಾಡಿಯಾಗಿ ಈ ಮಾರ್ಗದಲ್ಲಿ ಸಂಚರಿಸುವುದೇ ಕಷ್ಟವಾಗುತ್ತದೆ. ಈಗಲಾದರೂ ಸಂಬಂಧಪಟ್ಟ ಅಧಿಕಾರಿಗಳು ಮಣ್ಣಿನ ರಾಶಿಯನ್ನು ತೆರವುಗೊಳಿಸುವ ಮೂಲಕ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಯನ್ನು ನಿವಾರಿಸಬೇಕಾಗಿದೆ.

– ಬಿ.ಎಸ್.ಸುಧಾರತ್ನಮ್ಮ, ಮೈಸೂರು




ಜಿ.ಎಲ್. ತ್ರಿಪುರಾಂತಕ
ಮೊ : 9686677284

ಸುಪ್ರಭ

ಗಾಯಕ್ಕೆ ಎಲ್ಲರ ಮನೆಯಲ್ಲಿ ಉಪ್ಪಿದೆ..., ಔಷಧವಿಲ್ಲ...!

ನಮ್ಮ ನಿಮ್ಮ ನಡುವೆ ನಾಲ್ಕು ಬಗೆಯ ಜನರಿದ್ದಾರೆ. ಒಂದನೇ ಬಗೆಯವರು ತಾನೂ ಚೆನ್ನಾಗಿರಬೇಕು, ಅನ್ಯರೂ ಚೆನ್ನಾಗಿರಬೇಕು ಎಂದು ಬಯಸುವವರು, ಎರಡನೆ ಬಗೆಯವರು ತಾನು ಚೆನ್ನಾಗಿರಬೇಕು, ಅನ್ಯರು ಚೆನ್ನಾಗಿರಬಾರದು ಎಂದು ಬಯಸುವವರು, ಮೂರನೆ ಬಗೆಯವರು ತಾನು ಚೆನ್ನಾಗಿರದಿದ್ದರೂ ಪರವಾಗಿಲ್ಲ, ಅನ್ಯರು ಚೆನ್ನಾಗಿರಬೇಕು ಎಂದು ಹಾರೈಸುವವರು, ನಾಲ್ಕನೆ ಬಗೆಯವರು ತಾನು ಚೆನ್ನಾಗಿಲ್ಲ, ಆದ್ದರಿಂದ ಅನ್ಯರು ಚೆನ್ನಾಗಿರಬಾರದು ಎನ್ನುವ ವಿಕೃತ ಮನೋಭಾವದವರು. ಮನುಷ್ಯನಲ್ಲಿ ಅರಿಷಡ್ವರ್ಗಗಳಾದ ಕಾಮ, ಕ್ರೋಧ, ಮದ, ಮತ್ಸರ, ಲೋಭ, ಮೋಹ ಆಗಾಗ ಜಾಗೃತಗೊಳ್ಳುತ್ತಿರುತ್ತದೆ. ಸಂದರ್ಭಕ್ಕನುಗುಣವಾಗಿ ಅದನ್ನು ಪ್ರಕಟಿಸಿಬಿಡುತ್ತಾನೆ. ಮತ್ಸರದಿಂದ ಅನೇಕರು ಅನ್ಯರನ್ನು ನಲುಗಿಸಿ ತಾವೂ ಸಹ ನರಳುತ್ತಿರುತ್ತಾರೆ. ಅನೇಕರಿಗೆ ಇದೊಂದು ಮನೋವ್ಯಾಧಿಯಾಗಿರುತ್ತದೆ. ಮನುಷ್ಯರಾದ ಎಲ್ಲರೂ ಮನುಷ್ಯತ್ವ ಹೊಂದಿರುತ್ತಾರೆ ಎಂದು ಬಯಸುವುದು ತಪ್ಪು ಭಾವನೆ. ತಮ್ಮ ಸುಖದಿಂದಲೇ ನೆಮ್ಮದಿ ಕಂಡುಕೊಳ್ಳುವವರು ಕೆಲವರಾದರೆ, ಅನ್ಯರ ದುಃಖದಲ್ಲಿಯೂ ತಾನು ಖುಷಿ ಪಡುವ ಒಂದು ರೀತಿಯ ವಿಚಿತ್ರ ಮನೋಭಾವದವರು ಅನೇಕರು ಇರುತ್ತಾರೆ.



ಸದಾ ಹೊಸದಕ್ಕೆ ಪ್ರಯತ್ನಿಸುತ್ತಲೇ ಇರಿ, ಗೆದ್ದರೆ ನಿಮ್ಮ ಮನೆಯವರು ಖುಷಿ ಪಡುತ್ತಾರೆ, ಸೋತರೆ ಪಕ್ಕದ ಮನೆಯವರು ಖುಷಿ ಪಡುತ್ತಾರೆ? ಎಂದು ಮಹನೀಯರೊಬ್ಬರು ಹೇಳಿದ್ದಾರೆ. ಹೌದು ನಿಮ್ಮ ಗೆಲುವನ್ನು ಸಂಭ್ರಮಿಸಿ ಖುಷಿ ಪಡುವವರಷ್ಟೇ ನಿಮ್ಮ ಗೆಲುವಿಗೆ ಹೊಟ್ಟೆಕಿಚ್ಚು ಪಡುವವರೂ ಇರುತ್ತಾರೆ. ಸಾಹಸ ಕೈಗೊಂಡಾಗ, ಹೊಸ ವ್ಯಾಪಾರ ಪ್ರಾರಂಭಿಸಿದಾಗ, ಪ್ರಮುಖ ಪರೀಕ್ಷೆ ಎದುರಿಸುವಾಗ, ಸವಾಲಿನ ಕೆಲಸವನ್ನು ಕೈಗೆತ್ತಿಕೊಂಡಾಗ ಕೆಲವರು ಶುಭ ಹಾರೈಸಿದರೆ, ಮತ್ತೆ ಕೆಲವರು ಕೆಲಸಕ್ಕೆ ವಿಘ್ನವಾಗಲಿ ಎಂದು ಒಳಗೊಳಗೆ ಬಯಸುತ್ತಿರುತ್ತಾರೆ. ಅವರಿಗೆ ಅನ್ಯರ ಗೆಲುವನ್ನು ನೋಡುವ, ಸಹಿಸಿಕೊಳ್ಳುವ, ಸಂಭ್ರಮಿಸುವ ವಿಶಾಲ ಹೃದಯವಿರುವುದಿಲ್ಲ. ಹಾಗಂದ ಮಾತ್ರಕ್ಕೆ ಅವರು ಶತ್ರುಗಳಾಗಿರುವುದಿಲ್ಲ, ಹತ್ತಿರದವರೇ ಆಗಿರುತ್ತಾರೆ, ಕೆಲವೊಮ್ಮೆ ಒಡಹುಟ್ಟಿದವರೂ ಆಗಿರುತ್ತಾರೆ, ಸ್ನೇಹಿತರೇ ಆಗಿರುತ್ತಾರೆ, ಹಿತೈಷಿಗಳು ಎಂದು ಬಿಂಬಿಸಿಕೊಂಡಿರುತ್ತಾರೆ, ಆದರೆ ಶುಭಶಕುನವನ್ನು ಬಾಯಲ್ಲಿ ನುಡಿದರೂ ಅಶುಭಶಕುನವನ್ನು ಮನಸ್ಸಿನಲ್ಲಿ ಪಠಿಸುವ ಹಿತಶತೃಗಳಾಗಿರುತ್ತಾರೆ.

ಅವರು ನಮ್ಮ ಸ್ಪರ್ಧಿಗಳಲ್ಲ, ಬದುಕಿನ ಅನೇಕ ಸಂಗತಿಗಳಲ್ಲಿ ಸಂಬಂಧವೇ ಇರುವುದಿಲ್ಲ, ವಯಸ್ಸಿನಲ್ಲಿ ಸಮಾನರಲ್ಲ, ಸ್ಥಾನಮಾನದಲ್ಲಿ ಸರೀಕರಲ್ಲ, ನಮ್ಮ ಗೆಲುವು ಅವರಿಗೆ ಯಾವ ತೊಂದರೆಯನ್ನೂ ಮಾಡುವುದಿಲ್ಲ, ನಮ್ಮ ಸೋಲಿನಿಂದ ಅವರಿಗೆ ದೊಡ್ಡದಾದ ಲಾಭವೂ ಇರುವುದಿಲ್ಲ. ಆದಾಗ್ಯೂ ಅವರಿಗೆ ನಮ್ಮ ಗೆಲುವು, ನಮ್ಮ ಯಶಸ್ಸು ನಿದ್ರೆ ತರುವುದಿಲ್ಲ. ನಮ್ಮ ದೊಡ್ಡ ಯಶಸ್ಸಿಗೆ ಒಂದು ದಿನವೂ ಬಂದು ಅಭಿನಂದನೆ ಸಲ್ಲಿಸದವರು, ನಮ್ಮ ಒಂದು ಚಿಕ್ಕ ಸೋಲಿನ ಸುಳಿವು ಸಿಕ್ಕಿದಾಕ್ಷಣ ದೂರವಾಣಿ ಕರೆ ಮಾಡಿ, ಸೋಲಿನ ಕುರಿತಾಗಿ ಅಪಾರ ಕಾಳಜಿಯಿಂದ 'ವಿಚಾರಿಸಿಕೊಂಡು' ಅನುಕಂಪ ಸೂಚಿಸಿ, ಒಳಗೊಳಗೆ ಸಂಭ್ರಮಿಸಿ ಹಾಲು ಕುಡಿದಷ್ಟು ಸಮಾಧಾನ ಹೊಂದುತ್ತಾರೆ. ಸೋಲಿನಿಂದ ಬೇಸತ್ತವರಿಗೆ ಇಂತಹವರ ಮನೋಭಾವದಿಂದ ಮತ್ತಷ್ಟು ನೋವಾಗುತ್ತದೆ. ಅವರ ನಾಟಕೀಯದ ಮಾತುಗಳು ಗಾಯಕ್ಕೆ ಉಪ್ಪು ಹಾಕಿದಂತೆ ಇರುತ್ತದೆಯೇ ಹೊರತು, ಗಾಯಕ್ಕೆ ಔಷಧ ಹಾಕಿದ ರೀತಿ ಇರುವುದಿಲ್ಲ ಇಂದು ಬದುಕಿನ ಪ್ರಮುಖ ಘಟ್ಟಗಳಲ್ಲಿ ಸೋತವರು ಇಂತಹ ಉಪ್ಪು ಹಾಕುವ ಮಂದಿಯಿಂದಲೇ ಆತ್ಮಹತ್ಯೆಗೆ ಶರಣಾಗಿರುವುದು ಸಹ ಉಂಟು. ಸೋತವರಿಗೆ ಸಾಂತ್ವನದ ಮಾತುಗಳನ್ನಾಡಿ ಅವರ ಮುಂದಿನ ಪ್ರಯತ್ನಕ್ಕೆ ಬೆನ್ನುತಟ್ಟಿ ಪ್ರೋತ್ಸಾಹಿಸಿ, ಬದುಕನ್ನು ಸವಾಲಿನಂತೆ ಸ್ವೀಕರಿಸಿ ಮುಂದೆ ಯಶಸ್ಸನ್ನು ಗಳಿಸಲು ಕಾರಣರಾಗುವವರು ಬಹಳ ವಿರಳ.

ಅವರು ನಮ್ಮ ಸ್ಪರ್ಧಿಗಳಲ್ಲ, ಬದುಕಿನ ಅನೇಕ ಸಂಗತಿಗಳಲ್ಲಿ ಸಂಬಂಧವೇ ಇರುವುದಿಲ್ಲ, ವಯಸ್ಸಿನಲ್ಲಿ ಸಮಾನರಲ್ಲ, ಸ್ಥಾನಮಾನದಲ್ಲಿ ಸರೀಕರಲ್ಲ, ನಮ್ಮ ಗೆಲುವು ಅವರಿಗೆ ಯಾವ ತೊಂದರೆಯನ್ನೂ ಮಾಡುವುದಿಲ್ಲ, ನಮ್ಮ ಸೋಲಿನಿಂದ ಅವರಿಗೆ ದೊಡ್ಡದಾದ ಲಾಭವೂ ಇರುವುದಿಲ್ಲ. ಆದಾಗ್ಯೂ ಅವರಿಗೆ ನಮ್ಮ ಗೆಲುವು, ನಮ್ಮ ಯಶಸ್ಸು ನಿದ್ರೆ ತರುವುದಿಲ್ಲ. ನಮ್ಮ ದೊಡ್ಡ ಯಶಸ್ಸಿಗೆ ಒಂದು ದಿನವೂ ಬಂದು ಅಭಿನಂದನೆ ಸಲ್ಲಿಸದವರು, ನಮ್ಮ ಒಂದು ಚಿಕ್ಕ ಸೋಲಿನ ಸುಳಿವು ಸಿಕ್ಕಿದಾಕ್ಷಣ ದೂರವಾಣಿ ಕರೆ ಮಾಡಿ, ಸೋಲಿನ ಕುರಿತಾಗಿ ಅಪಾರ ಕಾಳಜಿಯಿಂದ 'ವಿಚಾರಿಸಿಕೊಂಡು' ಅನುಕಂಪ ಸೂಚಿಸಿ, ಒಳಗೊಳಗೆ ಸಂಭ್ರಮಿಸಿ ಹಾಲು ಕುಡಿದಷ್ಟು ಸಮಾಧಾನ ಹೊಂದುತ್ತಾರೆ. ಸೋಲಿನಿಂದ ಬೇಸತ್ತವರಿಗೆ ಇಂತಹವರ ಮನೋಭಾವದಿಂದ ಮತ್ತಷ್ಟು ನೋವಾಗುತ್ತದೆ. ಅವರ ನಾಟಕೀಯದ ಮಾತುಗಳು ಗಾಯಕ್ಕೆ ಉಪ್ಪು ಹಾಕಿದಂತೆ ಇರುತ್ತದೆಯೇ ಹೊರತು, ಗಾಯಕ್ಕೆ ಔಷಧ ಹಾಕಿದ ರೀತಿ ಇರುವುದಿಲ್ಲ. ಇಂದು ಬದುಕಿನ ಪ್ರಮುಖ ಘಟ್ಟಗಳಲ್ಲಿ ಸೋತವರು ಇಂತಹ ಉಪ್ಪು ಹಾಕುವ ಮಂದಿಯಿಂದಲೇ ಆತ್ಮಹತ್ಯೆಗೆ ಶರಣಾಗಿರುವುದು ಸಹ ಉಂಟು. ಸೋತವರಿಗೆ ಸಾಂತ್ವನದ ಮಾತುಗಳನ್ನಾಡಿ ಅವರ ಮುಂದಿನ ಪ್ರಯತ್ನಕ್ಕೆ ಬೆನ್ನುತಟ್ಟಿ ಪ್ರೋತ್ಸಾಹಿಸಿ, ಬದುಕನ್ನು ಸವಾಲಿನಂತೆ ಸ್ವೀಕರಿಸಿ ಮುಂದೆ ಯಶಸ್ಸನ್ನು ಗಳಿಸಲು ಕಾರಣರಾಗುವವರು ಬಹಳ ವಿರಳ.

ಇನ್ನು ದೊಡ್ಡ ಮನುಷ್ಯರು ಎನಿಸಿಕೊಳ್ಳುವವರಿಗೆ ಇರುವಷ್ಟು ಈರ್ಷೆ ಇನ್ನಾರಿಗೂ ಇರುವುದಿಲ್ಲ ಎನ್ನಬಹುದು. ಇವರ ಸಾಧನೆ, ಸ್ಥಾನಮಾನ ಕಂಡು ಪ್ರತಿಭಾವಂತ ಪರಿಚಿತರು ಹಾಗೂ ಸಂಬಂಧಿಕರು ಸೂಕ್ತ ಮಾರ್ಗದರ್ಶನ ಕೋರಿ ಇವರ ಬಳಿ ಹೋದರೆ, ಅವರಿಗೆ ಗೈಡ್ ಮಾಡುವ ಬದಲು ಮಿಸ್‌ಗೈಡ್ ಮಾಡಿ ಕಳುಹಿಸಿರುತ್ತಾರೆ. ಎಲ್ಲಿ ಈ ವ್ಯಕ್ತಿ ತನ್ನ ಮಟ್ಟಕ್ಕೆ ಬೆಳೆದುಬಿಡುತ್ತಾನೋ ಎಂಬ ಆತಂಕದಿಂದ ಅವರ ಬದುಕು ಹಳ್ಳ ಹಿಡಿಯುವಂತೆ ಮಾಡಿ ವಿಕೃತಾನಂದವನ್ನು ಅನುಭವಿಸುತ್ತಾರೆ. ತಮ್ಮ ಕೈಲಾದ ಸಹಾಯ ಮಾಡುವ ಬದಲು ತಮ್ಮ ಕೈಚಳಕ ತೋರಿಸಿ ಅಪಾಯಕ್ಕೆ ಸಿಲುಕಿಸುವುದು ಯಾವ ರಾಕ್ಷಸ ಗುಣಕ್ಕೂ ಕಮ್ಮಿಯಿಲ್ಲ.

ಇಂದಿಗೂ ಗ್ರಾಮೀಣ ಭಾಗದಲ್ಲಿ 'ಮದ್ದು ಹಾಕುವುದು' ಎಂಬ ವಿಕೃತಿಯ ನೀಚಕೃತ್ಯ ಚಾಲ್ತಿಯಲ್ಲಿದೆ. ತಮ್ಮ ಶತ್ರುಗಳಿಗೆ ಆಹಾರದಲ್ಲಿ ವಿಷಕಾರಿ ಅಂಶವನ್ನು ಬೆರೆಸಿಕೊಡುವ ಕೆಟ್ಟ ಸಂಪ್ರದಾಯವದು. ಅನೇಕ ಬಾರಿ ಶತ್ರುಗಳಿಗಲ್ಲದೆ ಅಮಾಯಕರಿಗೂ, ಏನೂ ಅರಿಯದ ಎಳೆಯ ಮಕ್ಕಳಿಗೂ ಸಹ ಮದ್ದನ್ನು ಹಾಕುವ ಪರಿಪಾಠವಿದೆ. ವಿಷಕಾರಿ ಅಂಶವು ಹೊಟ್ಟೆಯಲ್ಲಿಯೇ ಇದ್ದುಕೊಂಡು ಮನುಷ್ಯನ ಆರೋಗ್ಯವನ್ನು ಹದಗೆಡಿಸುತ್ತದೆ. ವೈದ್ಯಕೀಯ ಪರೀಕ್ಷೆಗೂ ಸಿಗದ ಈ ಮದ್ದಿಗೆ ಹಳ್ಳಿಯಲ್ಲಿಯೇ ಪ್ರತಿಮದ್ದು ಕೊಡುವವರು ಸಹ ಇದ್ದಾರೆ. ತೋಳಿಗೆ ಬೇರಿನ ಎಳೆಯೊಂದನ್ನು ಕಟ್ಟಿದಾಗ ಆ ಭಾಗ ಸುಟ್ಟುಹೋದ ರೀತಿ ಆಗುತ್ತದೆ. ಬೇರೆ ಮಾದರಿಯಲ್ಲಿಯೂ ಮದ್ದು ಹಾಕಿರುವುದನ್ನು ಕಂಡು ಹಿಡಿಯುತ್ತಾರೆ. ಕಷಾಯವೊಂದನ್ನು ನೀಡಿ ಆ ವಿಷಕಾರಿ ಅಂಶವು ದೇಹದಿಂದ ಹೊರಬರುವ ಪ್ರತಿಮದ್ದನ್ನು ನೀಡುತ್ತಾರೆ. ಆಹಾರದ ಪಥ್ಯವನ್ನು ಸಹ ಅನುಸರಿಸಬೇಕಾಗುತ್ತದೆ. ಕಾಲಾನಂತರ ರೋಗಿಯ ಆರೋಗ್ಯ ಸುಧಾರಣೆಯಾಗಿ ಸಹಜ ಸ್ಥಿತಿಗೆ ಬರುತ್ತಾರೆ.

ದೇಹಕ್ಕೆ ಮದ್ದು ಹಾಕಿದರೆ ಒಂದಲ್ಲ ಒಂದು ರೀತಿಯಲ್ಲಿ ಅದನ್ನು ದೇಹದಿಂದ ಹೊರಕ್ಕೆ ತೆಗೆಯಿಸಿ ಆರೋಗ್ಯ ಸುಧಾರಿಸಿಕೊಳ್ಳಬಹುದು. ಆದರೆ ಮನಸ್ಸಿಗೆ ಮದ್ದು ಹಾಕುವ ಮಹಾನುಭಾವರ ಕೃತ್ಯಕ್ಕೆ ಮದ್ದೇ ಇಲ್ಲ ಎನ್ನಬಹುದು. ಹಾವಿನ ವಿಷಕ್ಕೆ ಔಷಧವಿದೆ, ಮನುಷ್ಯನ ನಾಲಗೆಯಿಂದ ಹೊರಡುವ ಮಾತಿನ ವಿಷಯಕ್ಕೆ ಔಷಧಿಯಿಲ್ಲ. ಮಾತಿನ ನಂಜು ಒಂದು ಕುಟುಂಬವನ್ನೇ ಬಲಿ ಪಡೆಯಬಹುದು. ಹೀಗೆ ಇಲ್ಲಸಲ್ಲದ ವಿಷಕಾರಿ ವಿಷಯಗಳನ್ನು ಮನಸ್ಸಿನಲ್ಲಿ ಬಿತ್ತಿ, ಸ್ನೇಹ ಸಂಬಂಧಗಳನ್ನು ಹಾಳು ಮಾಡಿ ವಿಘ್ನಾನಂದವನ್ನು ಅನುಭವಿಸುವವರು ಅನೇಕರಿದ್ದಾರೆ. ಮನೆಯ ಸದಸ್ಯರ ನಡುವೆ ಸಣ್ಣ ಮನಸ್ತಾಪಗಳು ಉಂಟಾಗುವುದು ಸಹಜ. ಅದನ್ನು ತಿಳಿದು ಎಲ್ಲರೊಟ್ಟಿಗೆ ಮಾತನಾಡಿ ಮನಸ್ತಾಪವನ್ನು ತಿಳಿಗೊಳಿಸುವ ತಿಳುವಳಿಕೆ ಜನರಿಗಿಂತ ಮನಸ್ತಾಪಕ್ಕೆ ಮತ್ತಷ್ಟು ಉಪ್ಪು ಸುರಿದು ಇಡೀ ಕುಟುಂಬ ಸದಸ್ಯರ ಬಾಂಧವ್ಯ ಹಾಳಾಗುವಂತೆ ಮಾಡುವ ತಿಳಿಗೇಡಿ ಜನರೇ ಹೆಚ್ಚಾಗಿದ್ದಾರೆ. ಮನಸ್ಸಿಗೆ ಮದ್ದು ಹಾಕುವ ಮಂದಿಯನ್ನು ಮನೆಯಿಂದ ದೂರ ಇಟ್ಟರೆ ಮನೆಯವರ ಸಂಬಂಧದ ಆರೋಗ್ಯ ಉತ್ತಮವಾಗಿರುತ್ತದೆ. ಎಷ್ಟೋ ವೇಳೆ ಗಂಡ ಹೆಂಡಿರ ನಡುವೆ ಬರುವ ಸಣ್ಣ ಮಾತಿಗೆ ಅವರ ಹೆತ್ತವರುಗಳೇ ಇಲ್ಲಸಲ್ಲದ ಬಣ್ಣಕಟ್ಟಿ ತಮ್ಮ ಮಕ್ಕಳ ಸಾಂಸಾರಿಕ ಬದುಕು ಹಾಳುಮಾಡಿದ ಕುಖ್ಯಾತಿಗೆ ಭಾಜನರಾಗುತ್ತಾರೆ. ಅಂತಹ ನೀಚರ ಮಾತಿಗೆ ಮನ್ನಣೆ ನೀಡಿದರೆ ಮನೆ ಒಡೆದು ಸರಿಪಡಿಸಲಾಗದ ಸ್ಥಿತಿಗೆ ತಲುಪುತ್ತದೆ.

'ಹಾಲು ಕುಡಿವ ಮಕ್ಕಳಿಗೆ ಆರೋಗ್ಯ ಕಮ್ಮಿ, ಇನ್ನು ಹಾಲಾಹಲ ಕುಡಿದವರಿಗೆ ಉಂಟೇ' ಎಂಬ ಮಾತಿನಂತೆ ಈರ್ಷೆ ತುಂಬಿದ ಮನದ ಜನರು ಸದಾ ಅಸಂತೋಷದಿಂದ ಇರುತ್ತಾರೆ. ಅವರ ಜೀವನವಿಡೀ ಅತೃಪ್ತಿ, ಅಸಮಾಧಾನ ಅವರನ್ನು ಕಾಡುತ್ತಿರುತ್ತದೆ. ಅವರಿಗೆ ಅದಕ್ಕಿಂತ ಶಿಕ್ಷೆ ಮತ್ತೊಂದು ಇರುವುದಿಲ್ಲ. ಪೂಜ್ಯರೊಬ್ಬರು ಹೇಳಿರುವ ಮಾತುಗಳು ಮಾರ್ಮಿಕವಾಗಿದೆ, 'ಉರಿಯುವವರು ಉರಿಯಲಿ, ಕುದಿಯುವವರು ಕುದಿಯಲಿ, ಉರಿಯುವವರು ಉರಿದು ಉರಿದು ಬೂದಿಯಾಗುತ್ತಾರೆ, ಕುದಿಯುವವರು ಕುದಿಯುತ್ತಾ ಕುದಿಯುತ್ತಾ ಆವಿಯಾಗಿಬಿಡುತ್ತಾರೆ'. ತಮ್ಮ ಸ್ಥಿತಿಯನ್ನು ಉತ್ತಮಗೊಳಿಸಿಕೊಳ್ಳುವ ಪ್ರಯತ್ನ ಮಾಡದೆ ಉತ್ತಮವಾಗಿರುವವರನ್ನು ಅನೀತಿಯಿಂದ ತನ್ನ ಸ್ಥಿತಿಗೆ ತರಲು ಪ್ರಯತ್ನಿಸುವುದು ಮೂರ್ಖತನ. ಎಷ್ಟೋ ಜನ ಇಂತಹ ನಯವಂಚಕರ ಮಾತಿಗೆ ಬೆಲೆಕೊಟ್ಟು ತಮ್ಮ ನೆಮ್ಮದಿ ಜೀವನಕ್ಕೆ ಕೊಳ್ಳಿ ಇಟ್ಟುಕೊಂಡಿದ್ದಾರೆ. ಒಳ್ಳೆಯವರಂತೆ ನಟಿಸುತ್ತಾ ಮನದೊಳಗೆ ವಿಷವನ್ನು ತುಂಬಿಕೊಂಡಿರುವ ಇಂತಹವರನ್ನು ಆರೋಗ್ಯಕರ ಅಂತರದಲ್ಲಿ ಇರಿಸುವುದು ಒಳಿತು.

ಬದುಕಿನಲ್ಲಿ ಸೋತವರಿಗೆ ಭರವಸೆಯ ಮಾತುಗಳನ್ನಾಡುವುದು ಅವಶ್ಯ. ಸೋಲು ಹಾಗೂ ಗೆಲುವು ಎಲ್ಲರ ಬದುಕಿನಲ್ಲಿ ಇದ್ದೇ ಇರುತ್ತದೆ. ಬೇರೆಯವರು ಸೋತಾಗ ಅದನ್ನು ಸಂಭ್ರಮಿಸುವ ಬದಲು ಅವರಿಗೆ ಸಾಂತ್ವನದ ನುಡಿಗಳನ್ನಾಡಿ ಅವರ ಬದುಕಿನಲ್ಲಿ ಆಶಾಕಿರಣ ನೋಡುವಂತೆ ಮಾಡುವುದು ಮಾನವ ಧರ್ಮ. ಸೋತ ಮನಕ್ಕೆ ಆಸರೆಯಾಗಿ ನಿಂತರೆ ಅವರು ನೆನೆಸಿಕೊಳ್ಳುತ್ತಾರೆ. ನಾವು ಸೋತಾಗಲೂ ಅವರು ಬೆನ್ನೆಲುಬಾಗಿ ನಿಲ್ಲುತ್ತಾರೆ. ಅನೇಕರಿಗೆ ಅಸಹಜವಾದ ಮನೋಭಾವವಿರುತ್ತದೆ. ಇದ್ದಾಗ ಅವರ ಕಷ್ಟಕ್ಕೆ ಹೆಗಲು ನೀಡದೆ, ಸತ್ತಾಗ ಅವರ ಶವ ಸಾಗಿಸಲು ಹೆಗಲು ನೀಡುತ್ತಾರೆ. ಮನುಷ್ಯ ಎಂದ ಮೇಲೆ ಒಬ್ಬರಿಗೊಬ್ಬರು ಸಕಾಲದಲ್ಲಿ ಸಹಾಯ ಮಾಡುವ ಗುಣ ಹೊಂದಿರಬೇಕು. ನೆರವಿನ ಅಗತ್ಯವಿದ್ದಾಗ ಮರೆವಿನ ಕಾಯಿಲೆ ಪ್ರದರ್ಶನ ಮಾಡಬಾರದು. ಮನುಷ್ಯ ಆರ್ಥಿಕವಾಗಿ ದೃಢವಾಗಿದ್ದಾಗ ಅವನ ಸಂಗ ಬಯಸಿದಂತೆ ಅವನು ದುಸ್ಥಿತಿ ತಲುಪಿದಾಗಲೂ ಅವನಿಗೆ ಧೈರ್ಯ ತುಂಬುವ ಕೆಲಸ ಮಾಡಬೇಕು.

ಮಾಡುವ ಊಟಕ್ಕೆ ಉಪ್ಪು ಸಮಪ್ರಮಾಣದಲ್ಲಿದ್ದರೆ ಊಟಕ್ಕೆ ಬೆಲೆ, ಉಪ್ಪು ಜಾಸ್ತಿ ಹಾಕಿದರೆ ಮಾಡುವ ಊಟವನ್ನೇ ಬಿಟ್ಟು ಏಳಬೇಕಾಗುತ್ತದೆ. ಅಂತಹುದರಲ್ಲಿ ಸುಡುವ ಗಾಯಕ್ಕೆ ಉಪ್ಪು ಸುರಿದರೆ ಸಹಿಸಲು ಸಾಧ್ಯವೇ? ಗಾಯಕ್ಕೆ ತಮ್ಮ ಬಳಿ ಮುಲಾಮು ಇಲ್ಲದಿದ್ದರೆ ಪರವಾಗಿಲ್ಲ, ಅನಾವಶ್ಯಕವಾಗಿ ಉಪ್ಪನ್ನು ಸುರಿದು ಉರಿ ಹೆಚ್ಚು ಮಾಡುವ ಕೃತ್ಯಕ್ಕೆ ಕೈ ಹಾಕಬಾರದು. ಸಹಿಷ್ಣುತೆ ಎಂಬುದು ಬಹುಮುಖ್ಯ. ಪ್ರಪಂಚದ ಸುಖಸಂತೋಷಗಳನ್ನು, ಸ್ಥಾನಮಾನಗಳನ್ನು ಒಬ್ಬರೇ ಪಡೆಯಲು ಸಾಧ್ಯವಿಲ್ಲ. ಒಬ್ಬರ ಯಶಸ್ಸಿಗೆ ಖುಷಿ ಪಡದೇ ಇದ್ದರೂ ಹೊಟ್ಟೆಕಿಚ್ಚು ಪಡಬಾರದು. ಹೊಟ್ಟೆಕಿಚ್ಚು ಅನ್ಯರನ್ನು ಸುಡುವ ಮೊದಲು ತನ್ನ ಒಡಲನ್ನೇ ಸುಡುತ್ತದೆ ಎಂಬುದನ್ನು ಮರೆಯಬಾರದು. ಹೊಟ್ಟೆಕಿಚ್ಚಿನಿಂದ ಮಾಡಿದ ಕೃತ್ಯಗಳು ವಿಕೃತಿಗಳಾಗುತ್ತವೆ. ಪರಿಚಿತರ ಗೆಲುವನ್ನು ಕಂಡು ಅಭಿನಂದಿಸಿ ಅವರ ಕೊರಳಿಗೆ ಹೂಹಾರ ಹಾಕದಿದ್ದರೂ ಪರವಾಗಿಲ್ಲ, ಅವರ ಕೊರಳಿಗೆ ಉರುಳಾಗುವಂತ ಕೃತ್ಯ ಮಾಡಬಾರದು. ಏನಂತೀರಿ?

ಬೆಳ್ಳಿ ಕಿರಣ : ಗಾಯಕ್ಕೆ ಉಪ್ಪು ಹಾಕಿ ಉರಿಸಬಹುದು, ಗೆಲುವಿನ ಕಿಚ್ಚನ್ನು ಆರಿಸಲು ಸಾಧ್ಯವಿಲ್ಲ

ನಮ್ಮೂರ ಅರಸರು.....!

ರಾಜರು ಯಾವತ್ತಿದ್ದರೂ ರಾಜರೇ.... ಅದರಲ್ಲೂ ಮೈಸೂರು ಅರಸರೆಂದರೇ ವಿಶೇಷ ಗೌರವ, ಇದರಲ್ಲಿ ಎರಡು ಮಾತಿಲ್ಲ. ರಾಜರ ಆ ಗತಕಾಲದ ವೈಭವ ಹಾಗೂ ಪರಂಪರೆಯನ್ನು ಮುಂದುವರಿಸಿದ್ದು ಸ್ವರ್ಗಸ್ಥರಾದ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್. ಇದಕ್ಕೆ ಸ್ಫೂರ್ತಿಯಾಗಿ, ಬೆನ್ನೆಲುಬಾಗಿ ನಿಂತಿದ್ದು ಅವರ ಧರ್ಮ ಪತ್ನಿ ಶ್ರೀಮತಿ ಪ್ರಮೋದಾದೇವಿ ಒಡೆಯರ್. ಇದೀಗ ಆ ಸಾಲಿಗೆ ಮತ್ತೊಂದು ಸೇರ್ಪಡೆ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್.



ತುಂಬಿದ ಕೊಡ...!: ತುಂಬಿದ ಕೊಡ ಖಂಡಿತಾ ತುಳುಕುವುದಿಲ್ಲ..... ಈ ಮಾತನ್ನು ಸಾಕಷ್ಟು ಬಾರಿ ನಾನು ಕೇಳಿದ್ದೆ, ಸಾಕಷ್ಟು ಬಾರಿ ಕಣ್ಣಾರೆಯೂ ಕಂಡಿದ್ದೆ. ಆದರೆ ಅದು ಮನಮುಟ್ಟುವಂತೆ ಮನದಟ್ಟಾಗಿದ್ದು ನಮ್ಮ ಮೈಸೂರಿನ ಹೆಮ್ಮೆ ಹಾಗೂ ಗೌರವದ ಪ್ರತೀಕವಾಗಿರುವ ಯದುವಂಶದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಂದ ಅಂದರೆ ತಪ್ಪಾಗಲಾರದು. ಅವರು ಧಾರ್ಮಿಕ ಕಾರ್ಯಕ್ರಮವೊಂದರಲ್ಲಿ ನಡೆದುಕೊಂಡ ರೀತಿ ಅದ್ಭುತ, ಅಮೋಘ. ಅದನ್ನು ಪದಗಳಲ್ಲಿ ವರ್ಣಿಸಲು ಸಾಧ್ಯವಿಲ್ಲ.

ಗುರು ಗೌರವ..!: 'ನಾಡಿಗೆ ಅರಸನಾದರೂ ಹೆತ್ತಮ್ಮನಿಗೆ ಮಗನೇ, ಊರನ್ನೇ ಆಳಿದರೂ ಗುರುವಿಗೆ ಶಿಷ್ಯನೇ' ಅನ್ನೋ ನಾಣ್ನುಡಿಯನ್ನು ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ನಿಜವಾಗಿಸಿದ್ದಾರೆ. ಎರಡು ದಿನದ ಹಿಂದೆ ಅಂದರೆ ಶುಕ್ರವಾರ ಯುಗಾದಿ ಹಬ್ಬದ ಹಿಂದಿನ ದಿನ ಮೈಸೂರಿನ ಅಗ್ರಹಾರದಲ್ಲಿರುವ ಉತ್ತರಾದಿ ಮಠದಲ್ಲಿ ಧಾರ್ಮಿಕ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಜಗದ್ಗುರು ಶ್ರೀಮನ್ ಮಧ್ವಾಚಾರ್ಯರ ಮೂಲ ಮಹಾಸಂಸ್ಥಾನದ ಶ್ರೀಮದುತ್ತರಾದಿ ಮಠಾಧೀಶರಾದ ಪರಮಪೂಜ್ಯ 1008 ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರು ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು. ಪರಮಪೂಜ್ಯ ಶ್ರೀಗಳಿಗಾಗಿ ವೇದಿಕೆಯ ಮಧ್ಯಭಾಗದಲ್ಲಿ ಬೃಹತ್ ಆಸನವನ್ನು ಹಾಕಲಾಗಿತ್ತು. ಶ್ರೀಗಳು ನಿಗದಿತ ಸಮಯಕ್ಕೆ ಆಗಮಿಸಿ ತಮ್ಮ ಆಸನದಲ್ಲಿ ವಿರಾಜಮಾನರಾದರು. ಇನ್ನು ಆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದವರು ಯದುವಂಶದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್. ಅವರಿಗೆ ಶ್ರೀಗಳ ಪಕ್ಕದಲ್ಲೇ ಒಂದು ಆಸನವನ್ನು ಹಾಕಲಾಗಿತ್ತು. ಆದರೆ ಯದುವೀರರು ಆ ಆಸನದಲ್ಲಿ ಕೂರಲು ಸುತಾರಾಂ ಒಪ್ಪಲಿಲ್ಲ. ಗುರುಗಳ ಸರಿಸಮಾನವಾಗಿ ನಾನು ಕೂರುವುದಿಲ್ಲ ಅಂತಾ ಹೇಳಿದರು. ಅಷ್ಟೇ ಅಲ್ಲ. ಯದುವೀರರು ವೇದಿಕೆಯಲ್ಲಿ ಗುರುಗಳ ಆಸನದ ಪಕ್ಕದಲ್ಲೇ ಪದ್ಮಾಸನ ಹಾಕಿಕೊಂಡು ಕೆಳಗೆ ಕುಳಿತರು. ಅಲ್ಲದೇ, ಗುರುಗಳ ಪ್ರವಚನ ಮುಗಿಯುವವರೆಗೂ ಅಲ್ಲಾಡದೆ ಕುಳಿತಿದ್ದರು.

ಹಿಂದಿನಿಂದಲೂ ಮೈಸೂರು ರಾಜಮನೆತನ ಹಾಗೂ ಉತ್ತರಾದಿಮಠದ ನಡುವಿನ ಸಂಬಂಧ ಅತ್ಯಂತ ಆತ್ಮೀಯವಾಗಿದೆ. ಅದರಲ್ಲಿ ಪ್ರಮುಖವಾದದ್ದು.

- ಶ್ರೀವೇದವ್ಯಾಸತೀರ್ಥರು ಆಗಿನ ಮೈಸೂರಿನ ಅರಸರ ಕೆಲವು ಅನಾರೋಗ್ಯಗಳನ್ನು ತಮ್ಮ ತಪಃಶಕ್ತಿಯಿಂದ ಪರಿಹಾರ ಮಾಡಿದ್ದರಂತೆ. ಅದರಿಂದ ಸಂತುಷ್ಟರಾದ ಅರಸರು ಅವರಿಗೆ ಅನೇಕ ಗ್ರಾಮಗಳನ್ನು ಗೌರವಪೂರ್ವಕವಾಗಿ ನೀಡಿದ್ದಾರೆ. ಹೇಮಾವತಿ ನದಿ ತೀರದ ಹೊಳೆನರಸೀಪುರ ಕ್ಷೇತ್ರದಲ್ಲಿ ದೊಡ್ಡದಾದ ಮಠವನ್ನೂ ರಾಜರು ಕಟ್ಟಿಸಿಕೊಟ್ಟಿದ್ದಾರೆ.
- ಶ್ರೀವಿದ್ಯಾಧೀಶತೀರ್ಥರಿಗೆ ಶ್ರೀಕೃಷ್ಣರಾಜ ಅರಸರು ವಿಶೇಷ ಉಪಚಾರಗಳನ್ನು ಮಾಡಿ ಅವರಿಗೂ ಗ್ರಾಮಗಳನ್ನು ನೀಡಿದ್ದಾರೆ.
- ಶ್ರೀಸತ್ಯಧರ್ಮತೀರ್ಥರಿಗೆ ಮೈಸೂರಿನ ರಾಜಮನೆತದವರ ಅತ್ಯಂತ ಪ್ರೀತಿಯ ಬಾಂಧವ್ಯ ಇತ್ತು.
- ಶ್ರೀಸತ್ಯಸಂಕಲ್ಪ ತೀರ್ಥರು ಹಾಗೂ ಶ್ರೀಸತ್ಯಸಂತುಷ್ಟ ತೀರ್ಥರು ರಾಜರ ಅಪೇಕ್ಷೆಯಂತೆ ಮೈಸೂರಿನಲ್ಲಿಯೇ ಅನೇಕ ವರ್ಷಗಳ ಕಾಲ ವಾಸ್ತವ್ಯ ಮಾಡಿ, ರಾಜಮನೆತನಕ್ಕೆ ಮಾರ್ಗದರ್ಶಕರಾಗಿದ್ದರು.
- ಶ್ರೀಸತ್ಯಧ್ಯಾನತೀರ್ಥರು ಅನೇಕ ತಿಂಗಳುಗಳ ಕಾಲ ಮೈಸೂರಿನಲ್ಲಿ ವಾಸ್ತವ್ಯ ಮಾಡಿದ್ದರು. ಅರಮನೆಯಲ್ಲಿಯೇ ವೈಭವದ ಸಂಸ್ಥಾನ ಪೂಜೆಯನ್ನು ನೆರವೇರಿಸಿ ರಾಜರಿಗೆ ಅನುಗ್ರಹಿಸಿದ್ದರು.
- ಶ್ರೀಸತ್ಯಪ್ರಮೋದತೀರ್ಥರು ಮೈಸೂರಿಗೆ ಆಗಮಿಸಿ ಶ್ರೀಸತ್ಯಧ್ಯಾನತೀರ್ಥರ ಜನ್ಮಶತಮಾನೋತ್ಸವನ್ನು ಆಚರಿಸಿದ್ದರು. ಆ ಸಂದರ್ಭದಲ್ಲಿ ಶ್ರೀಯುತ ಜಯಚಾಮರಾಜೇಂದ್ರ ಒಡೆಯರ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಅಷ್ಟೇ ಅಲ್ಲ ರಾಜ ಗೌರವದೊಂದಿಗೆ ಭವ್ಯವಾದ ಮೆರವಣಿಗೆಯನ್ನೂ ಮಾಡಲಾಗಿತ್ತು. ಆನೆ ಅಂಬಾರಿ, ಕುದುರೆ, ನಿಶಾನಿ, ವಾದ್ಯ ಎಲ್ಲವನ್ನೂ ಅರಮನೆಯಿಂದ ಕಳುಹಿಸಲಾಗಿತ್ತು.

ನನ್ನೂರು – ನನ್ನ ಹೆಮ್ಮೆ.
ಸರ್ವೇ ಜನಾಃ ಸುಖಿನೋ ಭವಂತು.



– ರಾಮ್,
ಮೈಸೂರು

ಪರಂಪರೆ ಮುಂದುವರಿಸಿದ ಯದುವೀರರು

ಮೈಸೂರು ಅರಸರು ಪಾಲಿಸಿಕೊಂಡು ಬಂದ ಪರಂಪರೆಯನ್ನು ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಸಹಾ ಮುಂದುವರಿಸಿದ್ದಾರೆ. ಮಠ ಹಾಗೂ ರಾಜಮನೆತನದ ಗೌರವಕ್ಕೆ ಕಿಂಚಿತ್ತು ಧಕ್ಕೆಯಾಗದಂತೆ ನೋಡಿಕೊಂಡಿದ್ದಾರೆ. ಈ ಮೂಲಕ ತಮ್ಮ ಪೂರ್ವಜರು ಹಾಕಿಕೊಟ್ಟ ಪಥದಲ್ಲಿ ಸಾಗಿ ಮೈಸೂರು ರಾಜಮನೆತನದ ಗೌರವವನ್ನು ಇಮ್ಮಡಿಗೊಳಿಸಿದ್ದಾರೆ. ಯದುವೀರರ ಈ ನಡವಳಿಕೆ ಸಭೆಯಲ್ಲಿ ಭಾಗಿಯಾಗಿದ್ದ ಇತರ ಅತಿಥಿಗಳು, ಮಠದ ಭಕ್ತರು ಹಾಗೂ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಗಿದೆ. ಅಷ್ಟೇ ಅಲ್ಲ ಸಾಮಾಜಿಕ ಜಾಲತಾಣದಲ್ಲಿ ಯದುವೀರ ಬಗ್ಗೆ ಉತ್ತಮವಾದ ಅಭಿಪ್ರಾಯ ವ್ಯಕ್ತವಾಗಿದೆ

ರಾಜಕಾರಣಿಗಳಿಗೆ, ಅಧಿಕಾರಿಗಳಿಗೆ ಮಾದರಿ...!

ಇತ್ತೀಚಿನ ದಿನಗಳಲ್ಲಿ ರಾಜಕಾರಣಿಗಳು ತಾವು ಜನಪ್ರತಿನಿಧಿಗಳು, ಜನರ ಸೇವಕರು, ಜನರ ಕೆಲಸ ಮಾಡುವುದಕ್ಕಾಗಿಯೇ ತಮಗೆ ಅಧಿಕಾರ ಸಿಕ್ಕಿರುವುದು ಎಂಬ ಸತ್ಯವನ್ನು ಮರೆತು ವರ್ತಿಸುವುದನ್ನು ನೋಡಿದ್ದೇವೆ. ಅದರಲ್ಲೂ ಅಧಿಕಾರ ಸಿಕ್ಕಿದರಂತೂ ಕೇಳುವುದೇ ಬೇಡ. ಇತ್ತೀಚೆಗೆ ನಮ್ಮ ರಾಜ್ಯ ನಾಯಕರಿಂದ ಹಿಡಿದು ಕೇಂದ್ರದ ನಾಯಕರವರೆಗೆ, ಮಾಜಿ ಸಿಎಂಗಳು, ಹಾಲಿ ಮಂತ್ರಿಗಳು ರಾಜ್ಯದ ಪ್ರಮುಖ ಶ್ರೀಗಳ ಜೊತೆ ಕುಳಿತ ವಿವಿಧ ಭಂಗಿಯ ಫೋಟೋಗಳು, ಅವರ ಜೊತೆ ನಡೆದುಕೊಂಡ ಸಾಕಷ್ಟು ವಿಚಾರಗಳು ವೈರಲ್ ಆಗುತ್ತಿವೆ. ಇನ್ನು ಕೆಲ ಅಧಿಕಾರಿಗಳು ಸಹಾ ಇದಕ್ಕಿಂತ ಹೊರತಾಗಿಲ್ಲ. ಅವರದ್ದೂ ಅದೇ ಕಥೆ. ಜನರ ಕೆಲಸ ದೇವರ ಕೆಲಸ ಎಂಬುದು ಕೇವಲ ಗೋಡೆ ಬರಹಕ್ಕೆ, ಘೋಷಣೆಗೆ ಮಾತ್ರ ಸೀಮಿತವಾಗುವಂತೆ ಮಾಡಿದ್ದಾರೆ. ಇಂತವರ ಮಧ್ಯೆ ರಾಜಮನೆತನದ ಪರಂಪರೆಯ ಭಾಗವಾಗಿ, ನಾಡಿನ ಸಂಸ್ಕೃತಿಯನ್ನು ಉಳಿಸಿ ಬೆಳೆಸುತ್ತಿರುವ ಹಾಗೂ ಯಾವುದೇ ಅಧಿಕಾರವಿಲ್ಲದಿದ್ದರೂ ಜನರು ಸ್ವಯಂಪ್ರೇರಿತರಾಗಿ ಕೈ ಎತ್ತಿ ಮುಗಿದು ಗೌರವ ಸಲ್ಲಿಸಿ ಪ್ರತ್ಯಕ್ಷ ದೇವರಂತೆ ಕಾಣುವ ಯದುವೀರರ ನಡವಳಿಕೆ ಅನುಕರಣೀಯ. ಹೆಮ್ಮೆಯ ಯದುವೀರರಿಗೆ ನಮ್ಮದೊಂದು ಹ್ಯಾಟ್ಸ್ ಆಫ್...

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಬೈಡನ್ ಸರ್ಕಾರದಲ್ಲಿ ಮತ್ತೆ ಭಾರತೀಯರಿಗೆ ಉನ್ನತ ಸ್ಥಾನ

ಕಲ್ಪನಾ, ವಿನಯ್‌ಗೆ ದೊಡ್ಡ ಜವಾಬ್ದಾರಿ

ವಾಷಿಂಗ್ಟನ್, ಏ.3– ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರ ಸರ್ಕಾರದಲ್ಲಿ ಭಾರತೀಯ ಮೂಲದವರಿಗೆ ಮತ್ತೆ ಉನ್ನತ ಮಟ್ಟದ ಸ್ಥಾನಗಳು ದೊರೆತಿದ್ದು, ಭಾರತ ಮೂಲದ ಕಲ್ಪನಾ ಕೋಟಗಲ್ ಮತ್ತು ವಿನಯ್ ಸಿಂಗ್ ಅವರನ್ನು ಪ್ರಮುಖ ಆಡಳಿತಾತ್ಮಕ ಹುದ್ದೆಗಳಿಗೆ ನಾಮನಿರ್ದೇಶನ ಮಾಡಲಾಗಿದೆ.



ಕಲ್ಪನಾ ಕೋಟಗಲ್

ಈ ಬಗ್ಗೆ ಸ್ವತಃ ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರು ಘೋಷಣೆ ಮಾಡಿದ್ದು, ಭಾರತೀಯ ಮೂಲದ ನಾಗರಿಕ ಹಕ್ಕುಗಳ ವಕೀಲೆ ಕಲ್ಪನಾ ಕೊಟಗಲ್ ಮತ್ತು ಪ್ರಮಾಣೀಕೃತ ಸಾರ್ವಜನಿಕ ಅಕೌಂಟೆಂಟ್ ವಿನಯ್ ಸಿಂಗ್ ಅವರನ್ನು ಪ್ರಮುಖ ಆಡಳಿತಾತ್ಮಕ ಹುದ್ದೆಗಳಿಗೆ ನಾಮನಿರ್ದೇಶನ ಮಾಡಲಾಗಿದೆ ಎಂದು ಘೋಷಿಸಿದ್ದಾರೆ. ಕಲ್ಪನಾ ಕೋಟಗಲ್ ಅವರನ್ನು ಸಮಾನ ಉದ್ಯೋಗ ಅವಕಾಶ ಆಯೋಗದ ಆಯುಕ್ತರನ್ನಾಗಿ ನಾಮನಿರ್ದೇಶನ ಮಾಡಲಾಗಿದ್ದು, ವಿನಯ್ ಸಿಂಗ್ ಅವರನ್ನು ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಗೆ ಮುಖ್ಯ ಹಣಕಾಸು ಅಧಿಕಾರಿಯಾಗಿ ನಾಮನಿರ್ದೇಶನ ಮಾಡಲಾಗಿದೆ.

ಶುಕ್ರವಾರ ಶ್ವೇತಭವನ ಈ ಮಾಹಿತಿಯನ್ನು ನೀಡಿದ್ದು, ಬೈಡನ್ ಅವರ ನಿರ್ಧಾರವನ್ನು ಸಮಾನ ಉದ್ಯೋಗ ಅವಕಾಶ ಆಯೋಗವು ಸ್ವಾಗತಿಸಿದೆ. ಇದಕ್ಕೂ ಮುನ್ನ ಭಾರತೀಯ ಮೂಲದ 20 ಮಂದಿಗೆ ಅಮೆರಿಕದ ಆಡಳಿತದಲ್ಲಿ ಬೈಡೆನ್ ಮಹತ್ವದ ಜವಾಬ್ದಾರಿ ನೀಡಿದ್ದಾರೆ. ಈ ಭಾರತೀಯರು ಬೈಡೆನ್ ಆಡಳಿತದಲ್ಲಿ ಪ್ರಮುಖ ಜವಾಬ್ದಾರಿಗಳನ್ನು ನಿರ್ವಹಿಸುತ್ತಿದ್ದಾರೆ. ನೀರಾ ಟಂಡನ್, ಡಾ.ವಿವೇಕ್ ಮೂರ್ತಿ, ವಿನಯ್ ರೆಡ್ಡಿ, ವನಿತಾ ಗುಪ್ತಾ, ಭರತ್ ರಾಮಮೂರ್ತಿ, ಗೌತಮ್ ರಾಘವನ್, ಮಾಲಾ ಅಡಿಗ, ಗರಿಮಾ ವರ್ಮಾ, ತರುಣ್ ಛಾಬ್ರಾ, ಸುಮೋನಾ ಗುಹಾ, ಶಾಂತಿ ಕಲಾಟಿಲ್, ಸೋನಿಯಾ ಅಗರ್ವಾಲ್, ಸಬ್ರಿನಾ ಸಿಂಗ್, ಆಯೇಶಾ ಶಾ, ಸಮೀರಾ ಫಾಜಿಲಿ, ವೇದಾಂತ ಪಟೇಲ್, ವಿದುರ್ ಶರ್ಮಾ, ನೇಹಾ ಗುಪ್ತಾ ಅವರು ಬೈಡನ್ ಸರ್ಕಾರದಲ್ಲಿ ವಿವಿಧ ಹುದ್ದೆಗಳನ್ನು ಅಲಂಕರಿಸಿದ್ದಾರೆ.

ಆಮ್‌ಸ್ಟರ್‌ಡ್ಯಾಮ್ ಚಿತ್ರೋತ್ಸವ: ಇಳಯರಾಜಾಗೆ

ಅತ್ಯುತ್ತಮ ಸಂಗೀತ ನಿರ್ದೇಶಕ ಪ್ರಶಸ್ತಿ



ಚೆನ್ನೈ: ದಕ್ಷಿಣ ಭಾರತದ ಸಂಗೀತ ದಿಗ್ಗಜ ಇಳಯರಾಜಾ ಅವರಿಗೆ ಆಮ್ ಸ್ಟರ್ ಡ್ಯಾಮ್ ಅಂತಾರಾಷ್ಟ್ರೀಯ ಚಿತ್ರೋತ್ಸವದಲ್ಲಿ ಅತ್ಯುತ್ತಮ ಸಂಗೀತ ನಿರ್ದೇಶಕ ಪ್ರಶಸ್ತಿ ದೊರೆತಿದೆ. ಇಂಡೋ– ಇಂಗ್ಲೀಷ್ ಸಿನಿಮಾ 'ಎ ಬ್ಯೂಟಿಫುಲ್ ಬ್ರೇಕಪ್' ನಲ್ಲಿನ ಸಂಗೀತ ನಿರ್ದೇಶನಕ್ಕಾಗಿ ಇಳಯ ರಾಜ ಅವರಿಗೆ ಈ ಪ್ರಶಸ್ತಿ ಬಂದಿದ್ದು, ಸಿನಿಮಾದಲ್ಲಿ ಇಳಯ ರಾಜಾ ಅವರು ಸಂಯೋಜಿಸಿದ್ದ 30 ಸೌಂಡ್ ಟ್ರ್ಯಾಕ್‌ಗಳನ್ನು ಬಳಸಿಕೊಳ್ಳಲಾಗಿತ್ತು. 'ಎ ಬ್ಯೂಟಿಫುಲ್ ಬ್ರೇಕಪ್' ಇಳಯರಾಜಾ ಅವರ 1422ನೇ ಸಿನಿಮಾ ಎನ್ನುವುದು ವಿಶೇಷ. ಅಲ್ಲದೆ ಇದು ಅವರ ಮೊದಲ ಅಂತಾರಾಷ್ಟ್ರೀಯ ಪ್ರಾಜೆಕ್ಟ್.ಅಜಿತ್ ವಸನ್ ಈ ಸಿನಿಮಾದ ನಿರ್ದೇಶಕರು.

ಉಕ್ರೇನ್ ಬಂದರಿನ ಮೇಲೆ ಬಾಂಬ್ ದಾಳಿ: ಕೀವ್ ಬಳಿ ಸಾಮೂಹಿಕ ಸಮಾಧಿ

ಕೀವ್, ಏ.3–ಉಕ್ರೇನ್ ಮೇಲೆ ರಷ್ಯಾದ ದಾಳಿಯು ಹಲವಾರು ಪ್ರಾಣವನ್ನು ಬಲಿ ತೆಗೆದುಕೊಳ್ಳುತ್ತಿದೆ. ದಕ್ಷಿಣದಲ್ಲಿ ರಷ್ಯಾ ತನ್ನ ಪಡೆಗಳನ್ನು ಇರಿಸಲು ಪ್ರಯತ್ನ ಮಾಡುತ್ತಿದೆ ಎಂದು ಕೀವ್ ಎಚ್ಚರ ನೀಡಿದೆ. ಇದಾದ ಬಳಿಕವೇ ಉಕ್ರೇನ್‌ನ ಆಯಕಟ್ಟಿನ ಕಪ್ಪು ಸಮುದ್ರ ಬಂದರು ಒಡೆಸ್ಸಾ ಮೇಲೆ ವಾಯುದಾಳಿಗಳನ್ನು ರಷ್ಯಾ ನಡೆಸಿದೆ. ಸದ್ಯ ಕೀವ್ ಬಳಿ ಸಾಮೂಹಿಕ ಸಮಾಧಿ ಕಂಡು ಬಂದಿದೆ ಎಂದು ವರದಿಯು ಉಲ್ಲೇಖ ಮಾಡಿದೆ.

ರಷ್ಯಾವು ಉಕ್ರೇನ್‌ನ ಆಯಕಟ್ಟಿನ ಕಪ್ಪು ಸಮುದ್ರ ಬಂದರು ಒಡೆಸ್ಸಾ ಮೇಲೆ ವಾಯುದಾಳಿಗಳನ್ನು ನಡೆಸಿದೆ ಎಂದು ಉಕ್ರೇನ್ ಸಚಿವ ಆಂಟನ್ ಹೆರಾಶ್ಚೆಂಕೊ ಹೇಳಿದ್ದಾರೆ. ಒಡೆಸ್ಸಾ, ಸುಮಾರು ಒಂದು ಮಿಲಿಯನ್ ಜನಸಂಖ್ಯೆಯ ಐತಿಹಾಸಿಕ ನಗರವಾಗಿದೆ. ಉಕ್ರೇನ್‌ನ ಅತಿದೊಡ್ಡ ಕಪ್ಪು ಸಮುದ್ರ ಬಂದರು ಇದಾಗಿದೆ.

ಕೈಗಾರಿಕಾ ಪ್ರದೇಶದಲ್ಲಿ ಸ್ಫೋಟವಾಗಿ ಸುತ್ತಲೂ ಕಪ್ಪು ಹೊಗೆ ಆವರಿಸಿದೆ ಎಂದು ವರದಿಯು ಹೇಳಿದೆ. ರಷ್ಯಾವು ದೇಶದ ಉತ್ತರದಿಂದ ಸೇನೆಯನ್ನು ಹಿಂತೆಗೆದುಕೊಳ್ಳುತ್ತಿರುವಂತೆ ತೋರುತ್ತಿರುವಾಗ ಈ ದಾಳಿ ನಡೆದಿದೆ. ಶುಕ್ರವಾರ, ಉಕ್ರೇನ್‌ನ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ, ರಷ್ಯಾವು ದಕ್ಷಿಣದಲ್ಲಿ ಶಕ್ತಿಯುತ ದಾಳಿಗಳನ್ನು ನಡೆಸಲು ಸಿದ್ಧಪಡಿಸುತ್ತಿದೆ ಎಂದು ಎಚ್ಚರಿಸಿದ್ದರು.

300 ಜನರ ಸಾಮೂಹಿಕ ಸಮಾಧಿ: ರಷ್ಯಾದ ಪಡೆಗಳು ರಾಜಧಾನಿ ಕೀವ್ ಹೊರಗಿನ ಬುಚಾ ನಗರದಲ್ಲಿ ವಿನಾಶಕ್ಕೆ ನಾಂದಿ ಹಾಡಿದೆ. ಅಲ್ಲಿ ಸುಮಾರು 300 ಜನರನ್ನು ಸಾಮೂಹಿಕ ಸಮಾಧಿ ಮಾಡಲಾಗಿದೆ ಎಂದು ಮೇಯರ್ ಅನಾಟೊಲಿ ಫೆಡೋರುಕ್ ಎಎಫ್‌ಪಿಗೆ ತಿಳಿಸಿದರು. "ಈ ಎಲ್ಲ ಜನರನ್ನು ತಲೆಯ ಹಿಂಭಾಗದಲ್ಲಿ ಗುಂಡು ಹಾರಿಸಲಾಯಿತು, ಕೊಲ್ಲಲಾಯಿತು," ಎಂದು ಮೇಯರ್ ಅನಾಟೊಲಿ ಫೆಡೋರುಕ್ ಮಾಹಿತಿ ನೀಡಿದ್ದಾರೆ.

ರಷ್ಯಾದ ಪಡೆಗಳು ಆಕ್ರಮಣ ಮಾಡಿದ ನಂತರ ಉಕ್ರೇನ್ ಇಡೀ ಕೀವ್ ಪ್ರದೇಶದ ನಿಯಂತ್ರಣವನ್ನು ಮರಳಿ ಪಡೆದುಕೊಂಡಿದೆ. ಉಕ್ರೇನ್ ರಾಜಧಾನಿಯ ಸಮೀಪವಿರುವ ಕೆಲವು ಪ್ರಮುಖ ಪಟ್ಟಣಗಳಿಂದ ರಷ್ಯಾ ಪಡೆಯನ್ನು ಉಕ್ರೇನ್ ಪಡೆ ಹಿಮ್ಮೆಟ್ಟಿಸಿದೆ ಎಂದು ಉಪರಕ್ಷಣಾ ಸಚಿವ ಗನ್ನಾ ಮಲಿಯಾರ್ ಹೇಳಿದ್ದಾರೆ.

ಒಂದನೇ ಪುಟದಿಂದ

ತುರ್ತು ಪರಿಸ್ಥಿತಿ ಘೋಷಣೆ

ಮೂಲಕ ತಿದ್ದುಪಡಿ ಮಾಡಿದಂತೆ ಸಾರ್ವಜನಿಕ ಭದ್ರತಾ ಸುಗ್ರೀವಾಜ್ಞೆಯ (ಅಧ್ಯಾಯ 40) ಸೆಕ್ಷನ್ 2ರ ಮೂಲಕ ಅವರಿಗೆ ವಹಿಸಲಾದ ಅಧಿಕಾರದ ಅಡಿಯಲ್ಲಿ ಗೆಜೆಟ್ ಅನ್ನು ಬಿಡುಗಡೆ ಮಾಡಿದ್ದಾರೆ ಎಂದು ಪತ್ರಿಕೆ ವರದಿ ಮಾಡಿದೆ.

ಮಿರಿಹಾನದಲ್ಲಿರುವ ಅಧ್ಯಕ್ಷ ರಾಜಪಕ್ಸೆ ಅವರ ನಿವಾಸದ ಹೊರಗೆ ಭಾನುವಾರ ಪ್ರತಿಭಟನಾಕಾರರು ಪೊಲೀಸರೊಂದಿಗೆ ಘರ್ಷಣೆ ನಡೆಸಿದರು. ಪ್ರತಿಭಟನೆಯ ನಂತರ, ಪತ್ರಕರ್ತರು ಸೇರಿದಂತೆ ಕನಿಷ್ಠ ಹತ್ತು ಜನರು ಗಾಯಗೊಂಡರು. ಪ್ರವಾಸೋದ್ಯಮ ಕ್ಷೇತ್ರದ ಕುಸಿತದಿಂದಾಗಿ ಕೋವಿಡ್–19 ಸಾಂಕ್ರಾಮಿಕ ರೋಗದಿಂದ ಶ್ರೀಲಂಕಾದ ಆರ್ಥಿಕತೆಯು ಪತನದತ್ತ ಸಾಗುತ್ತಿದೆ. ಶ್ರೀಲಂಕಾವು ಪ್ರಸ್ತುತ ವಿದೇಶಿ ವಿನಿಮಯ ಕೊರತೆಯನ್ನು ಎದುರಿಸುತ್ತಿದೆ, ಇದು ಆಹಾರ, ಇಂಧನ, ವಿದ್ಯುತ್ ಮತ್ತು ಅನಿಲದ ಕೊರತೆಗೆ ಕಾರಣವಾಗಿದೆ. ಆರ್ಥಿಕ ಸಹಾಯಕ್ಕಾಗಿ ಸ್ನೇಹಪರ ರಾಷ್ಟ್ರಗಳ ಸಹಾಯವನ್ನು ಕೋರಿದೆ. ಶ್ರೀಲಂಕಾದಲ್ಲಿ ಪ್ರತಿದಿನ ಕನಿಷ್ಠ 10 ಗಂಟೆಗಳ ಕಾಲ ವಿದ್ಯುತ್ ಕಡಿತವಾಗುತ್ತಿದೆ. ಶ್ರೀಲಂಕಾದ ಕರೆನ್ಸಿಯು ಮಾರ್ಚ್ 8 ರಿಂದ US ಡಾಲರ್ ವಿರುದ್ಧ ಸುಮಾರು SLR 90ರಷ್ಟು ಅಪಮೌಲ್ಯಗೊಂಡಿದೆ. ಶ್ರೀಲಂಕಾ ಸರ್ಕಾರವು ಏಪ್ರಿಲ್ 3ರ ಭಾನುವಾರ ಮಧ್ಯರಾತ್ರಿಯ ನಂತರ ರಾಷ್ಟ್ರವ್ಯಾಪಿ ಸಾಮಾಜಿಕ ಮಾಧ್ಯಮವನ್ನು ನಿರ್ಬಂಧಿಸಿದೆ ಎಂದು ಇಂಟರ್ನೆಟ್ ವೀಕ್ಷಣಾಲಯ ತಿಳಿಸಿದೆ. ಪ್ರಮುಖವಾಗಿ Facebook, Twitter, WhatsApp, YouTube, Snapchat, TikTok ಮತ್ತು Instagram ಸೇರಿದಂತೆ ಸುಮಾರು ಎರಡು ಡಜನ್ ಗೂ ಅಧಿಕ ಸಾಮಾಜಿಕ ಮಾಧ್ಯಮ ಪ್ಲಾಟ್ ಫಾರ್ಮ್‌ಗಳು ಲಂಕಾ ಸರ್ಕಾರದ ನಿರ್ಧಾರದಿಂದ ಸೇವೆಯಿಂದ ವಂಚಿತವಾಗಿವೆ.

ತುರ್ತು ಪರಿಸ್ಥಿತಿಯನ್ನು ಘೋಷಿಸುವ ಆದೇಶವು ಸಂಘ, ಸಭೆ ಮತ್ತು ಚಳುವಳಿಯ ಸ್ವಾತಂತ್ರ್ಯದ ಹಕ್ಕುಗಳನ್ನು ನಿರ್ಬಂಧಿಸುವ ಉದ್ದೇಶವನ್ನು ಹೊಂದಿದೆ. ಸರ್ಕಾರವು ಆರ್ಥಿಕ ಬಿಕ್ಕಟ್ಟನ್ನು ಹಸ್ತಾಂತರಿಸುವುದರೊಂದಿಗೆ ಹೆಚ್ಚುತ್ತಿರುವ ಸಾರ್ವಜನಿಕ ಅಸಮಾಧಾನದ ಸಂದರ್ಭದಲ್ಲಿ, ತುರ್ತು ಪರಿಸ್ಥಿತಿಯು ಭಯವನ್ನು ಸೃಷ್ಟಿಸುವ ಮೂಲಕ ಭಿನ್ನಾಭಿಪ್ರಾಯವನ್ನು ನಿಗ್ರಹಿಸುವ ಪರಿಣಾಮವನ್ನು ಬೀರಬಹುದು, ಅನಿಯಂತ್ರಿತ ಬಂಧನಗಳು ಮತ್ತು ಬಂಧನವನ್ನು ಸುಗಮಗೊಳಿಸುತ್ತದೆ ಎಂದು ಅಮ್ನೆಸ್ಟಿ ಇಂಟರ್‌ನ್ಯಾಶನಲ್ ಹೇಳಿಕೆಯಲ್ಲಿ ತಿಳಿಸಿದೆ.

ಮಂಡ್ಯ ಕಚೇರಿ : ನಂ. 1204/1, ಮಹಿಳಾ ಸಮಾಜ ರಸ್ತೆ, 3ನೇ ಕ್ರಾಸ್, ಅಶೋಕನಗರ, ಮಂಡ್ಯ-571404 ದೂ: 222026 (ಕ) ಫ್ಯಾಕ್ಸ್: 08232-222026, ಮೊ: 8762960325. E-Mail : mandya@mysurumithra.com

ಮಹನೀಯರ ಚರಿತ್ರೆ ಓದುವುದು ಬಹಳ ಮುಖ್ಯ



ಮಂಡ್ಯ,ಏ.3(ಮೋಹನ್‌ರಾಜ್)- ಮಹನೀಯರ ಚರಿತ್ರೆಯ ಬಗ್ಗೆ ಮಕ್ಕಳಿಗೆ ತಿಳಿಸಿಕೊಟ್ಟು ಪೋಷಕರು ಸಹ ಅವರ ಬಗ್ಗೆ ಓದಬೇಕು ಎಂದು ಶ್ರೀ ಆದಿ ಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಸಲಹೆ ನೀಡಿದರು.

ನಗರದ ಕರ್ನಾಟಕ ಸಂಘದ ಆವರಣದಲ್ಲಿ ಭಾನುವಾರ ಆಯೋಜಿಸಿದ್ದ ರಚನಾತ್ಮಕ ನಾಯಕ ಜಿ.ಎಸ್.ಬೊಮ್ಮೇಗೌಡ ಕೃತಿ ಬಿಡುಗಡೆ, ಸಂಸ್ಮರಣಾ ಸಮಾರಂಭ ಹಾಗೂ ಮೊದಲನೇ ವರ್ಷದ ರಾಜ್ಯ ಮಟ್ಟದ ಜಿ.ಎಸ್.ಬೊಮ್ಮೇಗೌಡ ಉತ್ತಮ ಪ್ರಶಸ್ತಿ ಪ್ರದಾನ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಪೋಷಕರು ಮೊಬೈಲ್ ನೋಡಿಕೊಂಡು ಕುಳಿತುಕೊಂಡರೆ ಮಕ್ಕಳು ಸಹ ಅದೇ ದಾರಿ ಹಿಡಿಯುತ್ತಾರೆ. ಹಾಗಾಗಿ ಪುಸ್ತಕಗಳ ಅಧ್ಯಯನದಲ್ಲಿ ತೊಡಗುವುದು ಮುಖ್ಯವಾಗಬೇಕು. ಅಪ್ಪ ಅಮ್ಮ ಮನೆಯಲ್ಲಿ ಏನು ಮಾಡುತ್ತಾರೋ ಮಕ್ಕಳು ಸಹ ಅದನ್ನೇ ಮಾಡುತ್ತವೆ. ಹಾಗಾಗಿ ಮನೆಯಲ್ಲಿರುವಾಗ ಪುಸ್ತಕಗಳ ಅಧ್ಯಯನ, ಅಧ್ಯಾತ್ಮಿಕ ವಿಚಾರಗಳನ್ನು ಗ್ರಹಿಸುವ ಕೆಲಸ ಆಗಬೇಕು. ಇದರಿಂದ ಮಕ್ಕಳು ಸುಗಣ ಶೀಲರಾಗುತ್ತಾರೆ ಎಂದರು.

ನಾವು ತಪ್ಪು ಮಾಡಿ ಮಕ್ಕಳಿಗೆ ಬುದ್ದಿ ಹೇಳಿದರೆ ಅದು ಪ್ರಯೋಜನಕ್ಕೆ ಬರುವುದಿಲ್ಲ. ಹಿಂದಿನ ಮಹಾತ್ಮರ ಜೀವನ ಚರಿತ್ರೆಗಳನ್ನು ಬರೆದಿಟ್ಟ ಇತಿಹಾಸದಲ್ಲಿ ಎಲ್ಲವೂ ತೆರೆದುಕೊಳ್ಳುತ್ತದೆ. ಇವೆಲ್ಲವೂ ವ್ಯಕ್ತಿಯ ಬದುಕಿನಲ್ಲಿ ಹೊಸ ಬೆಳಕನ್ನು ಕಾಣಲು ಸಾಧ್ಯವಾಗುತ್ತದೆ. ಅದನ್ನು ತಿಳಿದುಕೊಂಡು ಬೊಮ್ಮೇಗೌಡರ ಬದುಕಿನ ಯಶೋಗಾಥೆಯನ್ನು ತಿಳಿಸುವ ಕೆಲಸ ಮಾಡಿರುವುದು ಪುಣ್ಯದ ಕೆಲಸವಾಗಿದೆ. ಇವರ ಹೆಸರಿನಲ್ಲಿ ಪ್ರಶಸ್ತಿ ನೀಡುತ್ತಿರುವುದು ಸಂತೋಷದ ವಿಷಯ ಎಂದರು.

ಶಾಸಕ ಸಿ.ಎಸ್.ಪುಟ್ಟರಾಜು ಮಾತನಾಡಿ, ರಾಜಕಾರಣದಿಂದ ಹಿಂದೆ ಸರಿಯುವ ಜಿಜ್ಞಾಸೆ ಮೂಡಿದೆ. ಏಕೆಂದರೆ ಅಂದಿನ ನಿತ್ಯ ಸಚಿವ ಕೆ.ವಿ.ಶಂಕರಗೌಡರ ಕಾಲದಲ್ಲಿ ಇದ್ದರಾಜಕಾರಣಕ್ಕೂ ಈಗ ಇರುವ ರಾಜಕಾರಣಕ್ಕೂ ವ್ಯತ್ಯಾಸವಿದೆ, ನಮ್ಮಕಾಲದಲ್ಲಿ ಕಾಲೆಳೆಯುವ ಕೆಲಸ ಹೆಚ್ಚಾಗುತ್ತಿದೆ ಎಂದು ವಿಷಾದಿಸಿದರು.

ಇದೇ ಸಂದರ್ಭದಲ್ಲಿ ಸಹಕಾರ ಕ್ಷೇತ್ರದ ಧುರೀಣ ಕೆ.ಬಿ.ನರಸಿಂಹೇಗೌಡ ಅವರಿಗೆ ರಾಜ್ಯಮಟ್ಟದ ಜಿ.ಎಸ್.ಬೊಮ್ಮೇಗೌಡ ಪ್ರಶಸ್ತಿ, ನಗದು ನೀಡಲಾಯಿತು. ನಂತರ ಜಿ.ಎಸ್.ಬೊಮ್ಮೇಗೌಡ ಅವರ ಕುರಿತ ಶಿವರಾಮ್ ಅಮು ಬರೆದಿರುವ ಕೃತಿ ಬಿಡುಗಡೆ ಮಾಡಲಾಯಿತು.

ವೇದಿಕೆಯಲ್ಲಿ ಕೊಮ್ಮೇರಹಳ್ಳಿ ಶಾಖಾ ಮಠದ ಶ್ರೀ ಪುರುಷೋತ್ತಮಾನಂದನಾಥ ಸ್ವಾಮೀಜಿ, ಶಾಸಕ ಎಂ.ಶ್ರೀನಿವಾಸ್, ವಿಧಾನ ಪರಿಷತ್ ಸದಸ್ಯ ಕೆಟಿ.ಶ್ರೀಕಂಠೇಗೌಡ, ಬೊಮ್ಮೇಗೌಡರ ಮಗ, ಮಾಜಿ ಶಾಸಕ ಜಿ.ಬಿ.ಶಿವಕುಮಾರ್, ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ ಜಯಪ್ರಕಾಶಗೌಡ, ಉಪಾಧ್ಯಕ್ಷ ತಗ್ಗಹಳ್ಳಿ ವೆಂಕಟೇಶ್, ಕಾರ್ಯದರ್ಶಿ ಲೋಕೇಶ್ ಚಂದಗಾಲು ಜನರು ಭಾಗವಹಿಸಿದ್ದರು.

ಮೇಲುಕೋಟೆಯಲ್ಲಿ ಯುಗಾದಿ ಉತ್ಸವ



ಮಂಡ್ಯ,ಏ.3- ಪ್ರಖ್ಯಾತ ಮೇಲುಕೋಟೆ ಶ್ರೀಚೆಲುವನಾರಾಯಣಸ್ವಾಮಿ ದೇವಾಲಯದಲ್ಲಿ ಹಿಂದೂ ನೂತನ ವರ್ಷ ಯುಗಾದಿ ಹಬ್ಬ ಮತ್ತು ರಾಜ್ಯ ಸರ್ಕಾರದ ಆದೇಶದಂತೆ "ರಾಜ್ಯ ಧಾರ್ಮಿಕ ದಿನ" ವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ಹೊಸವರ್ಷದ ಆಚರಣೆಯ ನಿಮಿತ್ತ ಮಹಾವಿಷ್ಣುವಿನ ಅನುಗ್ರಹಕ್ಕೆ ಪ್ರಶಸ್ತವಾದ ಶನಿವಾರ ಶುಭಕೃತ್‌ನಾಮ ಸಂವತ್ಸರ ಆರಂಭದಂದು ಶ್ರೀದೇವಿ-ಭೂದೇವಿ ಸಮೇತನಾದ ಶ್ರೀ ಚೆಲುವ ನಾರಾಯಣಸ್ವಾಮಿಗೆ ಬೆಳಗ್ಗೆ ವೇದ ಘೋಷದೊಂದಿಗೆ ವಿಶೇಷ ಅಭಿಷೇಕ ನೆರವೇರಿತು. ದೇವಾಲಯಕ್ಕೆ ಆಗಮಿಸಿ ದರ್ಶನ ಪಡೆದ ಎಲ್ಲಾ ಭಕ್ತರಿಗೆ ಬೇವುಬೆಲ್ಲ ವಿತರಿಸಲಾಯಿತು. ಸಂಜೆ ಚೆಲುವ ನಾರಾಯಣಸ್ವಾಮಿಗೆ ಯುಗಾದಿ ಉತ್ಸವ ನಡೆಸಿ ಪಂಚಾಂಗ ಶ್ರವಣ ಕಾರ್ಯಕ್ರಮ ನೆರವೇರಿಸಲಾಯಿತು.

"ರಾಜ್ಯ ಧಾರ್ಮಿಕ ದಿನಾಚರಣೆ"ಯ ಪ್ರಯುಕ್ತ ದೇವಾಲಯದ ರಾಜಗೋಪುರದ ಮುಂಭಾಗ ಸಂಜೆ ಜೋಡಿ ಹಸುಗಳಿಗೆ ಗೋಪೂಜೆ ನೆರವೇರಿಸಲಾಯಿತು. ಸ್ಥಾನಾಚಾರ್ಯ ಶ್ರೀನಿವಾಸ ನರಸಿಂಹನ್ ಗುರೂಜಿ, ಸ್ಥಾನಾಚಾರ್ಯ ಕರಗಂ ರಂಗಪ್ರಿಯ-ಅರ್ಚಕ ವರದರಾಜ ಭಟ್ಟರ್, ಪಾರುಪತ್ತೇಗಾರ್ ಹಾಗೂ ಪರಿಚಾರಕ ಪಾರ್ಥಸಾರಥಿ ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ಮಂಗಳಮ್ಮ, ದೇವಾಲಯದ ಕಚೇರಿ ಸಿಬ್ಬಂದಿಗಳಾದ ಹೇಮಂತಕುಮಾರ್, ಬಾಲಕೃಷ್ಣ, ಪ್ರಕಾಶ್ ಸೇರಿದಂತೆ ಹಲವರು ಭಾಗಿಯಾಗಿದ್ದರು.

ಗೋಪೂಜೆಯಲ್ಲಿ ಭಾಗವಹಿಸಿದ್ದ ಮೇಲುಕೋಟೆ ಗ್ರಾ.ಪಂ ಅಧ್ಯಕ್ಷ ಸೋಮಶೇಖರ್ ಅರಮನೆ ತೋಟದಲ್ಲಿ ಸಾಂಕೇತಿಕವಾಗಿ ಬೇವಿನ ಸಸಿ ನೆಟ್ಟರು. ಭಕ್ತರಿಗೆ ಬೆಳಗ್ಗೆ ಬೇವು-ಬೆಲ್ಲ ಸಂಜೆ ಲಾಡು ಮತ್ತು ಪ್ರಸಾದ ವಿತರಣೆ ಮಾಡಲಾಯಿತು.



ನಾಗಮಂಗಲದ ಶ್ರೀ ಸೌಮ್ಯಕೇಶವ ದೇವಸ್ಥಾನದಲ್ಲಿ ಗಾಣಿಗರ ಸಮುದಾಯ ವತಿಯಿಂದ ಯುಗಾದಿ ಅಂಗವಾಗಿ ವಿಶೇಷ ಗರುಡೋತ್ಸವ ನಡೆಸಲಾಯಿತು. ನಂತರ ಭಕ್ತಾದಿಗಳಿಗೆ ಪ್ರಸಾದ ವಿತರಣೆ ಮಾಡಲಾಯಿತು.

ಕೆ.ಆರ್.ಪೇಟೆಯಲ್ಲಿ ಸಿದ್ಧಗಂಗಾ ಶ್ರೀಗಳ 115ನೇ ಜನ್ಮ ದಿನಾಚರಣೆ



ಕೆ.ಆರ್.ಪೇಟೆ,ಏ.3(ಶ್ರೀನಿವಾಸ್)- ನಾಡಿನ ತ್ರಿವಿಧ ದಾಸೋಹಿಗಳು ಹಾಗೂ ಜಗದ್ಗುರುಗಳಾದ ಸಿದ್ಧಗಂಗಾ ಮಠದ ಪರಮಪೂಜ್ಯ ಶಿವೈಕ್ಯ ಡಾ.ಶಿವಕುಮಾರ ಸ್ವಾಮೀಜೀಯವರ 115ನೇ ಜನ್ಮ ದಿನಾಚರಣೆಯ ಅಂಗವಾಗಿ ಅಖಿಲ ಭಾರತ ವೀರಶೈವ ಮಹಾಸಭಾ ತಾಲೂಕು ಅಧ್ಯಕ್ಷ ವಿ.ಎಸ್.ಧನಂಜಯಕುಮಾರ್ ನೇತೃತ್ವದಲ್ಲಿ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸಿದ್ಧಗಂಗಾ ಶ್ರೀಗಳ ಭಾವಚಿತ್ರಕ್ಕೆ ಪುಷ್ಪ ನಮನದೊಂದಿಗೆ ಗೌರವ ಸಲ್ಲಿಸಲಾಯಿತು.

ಗವೀಮಠದ ಸ್ವತಂತ್ರ ಸಿದ್ದಲಿಂಗೇಶ್ವರ ಶ್ರೀಮಠದ ಪೀಠಾಧ್ಯಕ್ಷರಾದ ಶ್ರೀ ಸ್ವತಂತ್ರ ಚನ್ನವೀರಸ್ವಾಮೀಜಿ ಅಧ್ಯಕ್ಷತೆಯಲ್ಲಿ ಪ್ರವಾಸಿ ಮಂದಿರ ವೃತ್ತದಿಂದ ತಾಲೂಕು ಕಚೇರಿಯವರೆಗೆ ಸಿದ್ಧಗಂಗಾ ಶ್ರೀಗಳ ಭಾವ ಚಿತ್ರ ಮೆರವಣಿಗೆ ನಡೆಸಿ ಶ್ರೀ ಶಿವ ಕುಮಾರಸ್ವಾಮೀಜಿಯವರಿಗೆ ಮರಣೋತ್ತರ ಭಾರತರತ್ನ ಪ್ರಶಸ್ತಿ ನೀಡಬೇಕು ಎಂಬ ಹಕ್ಕೋತ್ತಾಯದ ಮನವಿಯನ್ನು ತಾಲೂಕು ಉಪತಹಸೀಲ್ದಾರ್ ಹಿರಿಯಣ್ಣರಿಗೆ ಸಲ್ಲಿಸಿದರು. ನಂತರ ಟಿಎಪಿಸಿಎಂಎಸ್ ಸಂಸ್ಥೆಯ ಆವರಣದಲ್ಲಿ ಸಾರ್ವಜನಿಕರಿಗೆ ಅನ್ನದಾನ ಕಾರ್ಯಕ್ರಮ ನಡೆಸಲಾಯಿತು. ಬಳಿಕ ತಾಲೂಕು ಆಸ್ಪತ್ರೆಗೆ ತೆರಳಿ ಸುಮಾರು 100ಕ್ಕೂ ಹೆಚ್ಚು ರೋಗಿಗಳಿಗೆ ಹಣ್ಣು ವಿತರಣೆ ಮಾಡಿ ಬೇಗ ಗುಣಮುಖರಾಗುವಂತೆ ಹಾರೈಸಿದರು.

ಕಾರ್ಯಕ್ರಮದ ಕುರಿತು ಮಾತನಾಡಿದ ಗವಿಮಠದ ಶ್ರೀ ಸ್ವತಂತ್ರ ಚನ್ನವೀರ ಸ್ವಾಮೀಜಿ, ದೇಶದ ಮಹಾನ್ ಜ್ಞಾನಿಗಳಾಗಿ ಹೊರಹೊಮ್ಮಿ ಸಮಾಜಕ್ಕೆ ಉತ್ತಮ ಸಂದೇಶ ಸಲ್ಲಿಸುತ್ತಾ ಬಂದ ಯೋಗಿ, ಅಕ್ಷರ ಸಂತ, ಈ ದಿನ ನಮ್ಮೊಂದಿಗೆ ಇಲ್ಲದಿದ್ದರೂ ಅವರು ನಡೆದು ಬಂದ ಕಾಲಘಟ್ಟಗಳನ್ನು ಸ್ಮರಿಸುವ ಭಾಗ್ಯ ನಮಗೆ ದೊರಕಿರುವುದು ನಮ್ಮ ಸೌಭಾಗ್ಯ. ಅಂತಹ ಸಂಭಾವಿತರ ಸ್ಮರಿಸುವ ಕಾರ್ಯವನ್ನು ಅಖಿಲ ಭಾರತ ವೀರಶೈವ ಮಹಾಸಭಾ ಕುಟುಂಬ ಆಯೋಜಿಸಿರುವುದು ಅತ್ಯಂತ ಸಂತೋಷಕರ ವಿಷಯ ಎಂದು ಹರ್ಷ ವ್ಯಕ್ತಪಡಿಸಿದರು.

ಕಾರ್ಯಕ್ರಮದ ನೇತೃತ್ವ ವಹಿಸಿದ್ದ ಅಖಿಲ ಭಾರತ ವೀರಶೈವ ಮಹಾಸಭಾ ತಾಲೂಕು ಅಧ್ಯಕ್ಷ ವಿ.ಎಸ್.ಧನಂಜಯ ಕುಮಾರ್ ಮಾತನಾಡಿದರು. ಈ ಸಂದರ್ಭದಲ್ಲಿ ಅಖಿಲ ಭಾರತ ವೀರಶೈವ ಮಹಾಸಭಾದ ಪ್ರಧಾನ ಕಾರ್ಯದರ್ಶಿ ಬಿ.ಎಸ್.ಈರಪ್ಪ, ತಾಲೂಕು ಉಪಾಧ್ಯಕ್ಷ ಎಂ.ಪಿ.ಪ್ರಕಾಶ್, ಜಯನಂದಿನಿ, ನಂಜುಂಡಪ್ಪ, ಮಹದೇಶ್, ಖಜಾಂಚಿ ಜಿ.ಎಂ.ಮಹೇಶ್ ಕುಮಾರ್, ಚೋಕನಹಳ್ಳಿ ಪ್ರಕಾಶ್, ತಾಲೂಕು ಮಹಿಳಾ ಘಟಕದ ಅಧ್ಯಕ್ಷೆ ಪುಷ್ಪ ರಮೇಶ್, ಮೀನಾಕ್ಷಿ, ರಾಣಿ ಜಗದೀಶ್, ನಿರ್ದೇಶಕರುಗಳಾದ ಡಿ.ಸಿ.ಕುಮಾರ್, ಎಂ.ಎಸ್.ಶಿವಮೂರ್ತಿ, ವಸಂತಪ್ಪ, ಮೋಹನ್‌ಮೂರ್ತಿ, ಕುಮಾರ್, ಚೋಕನಹಳ್ಳಿ ಅಪ್ಪಾಜಿ, ರಮೇಶ್, ಸೌಮ್ಯ ಲಿಂಗರಾಜ್, ಮುಖಂಡರಾದ ತೋಟಪ್ಪಶೆಟ್ಟಿ ಸೇರಿದಂತೆ ಹಲವು ಪದಾಧಿಕಾರಿಗಳು ಉಪಸ್ಥಿತರಿದ್ದರು.

ಕಿಕ್ಕೇರಿಯಲ್ಲಿ ಕಿಕ್ಕೇರಮ್ಮನ ಸಂಭ್ರಮದ ಜಾತ್ರೋತ್ಸವ



ಕಿಕ್ಕೇರಿ,ಏ.3- ಶಕ್ತಿ ದೇವಿಯಾದ ಕಿಕ್ಕೇರಮ್ಮನವರ ಜಾತ್ರೋತ್ಸವ ಯುಗಾದಿ ಹಬ್ಬದಂದು ವಿದ್ಯುಕ್ತವಾಗಿ ಆರಂಭವಾಯಿತು.

ಕಳೆದ 2 ವರ್ಷಗಳಿಂದ ಕೊರೊನಾ ಆರ್ಭಟದಿಂದ ಸ್ಥಗಿತವಾದ ಜಾತ್ರೆ ಈ ಬಾರಿ ಆರಂಭಗೊಂಡಿದ್ದರಿಂದ ಹೋಬಳಿಯ ಜನರಲ್ಲಿ ಸಂಭ್ರಮ ಮೂಡಿತ್ತು.

ಪಟ್ಟಣದಲ್ಲಿ ಶನಿವಾರ ರಾತ್ರಿ ದೇವಿಗೆ ವಿಶೇಷ ಪೂಜೆ ಸಲ್ಲಿಸಿ, ಅಡ್ಡೆ ದೇವರಾದ ಚಿಕ್ಕಮ್ಮನವರಿಗೆ ವಿವಿಧ ಪುಷ್ಪಾಲಂಕಾರ, ಆಭರಣ ತೊಡಿಸಿ ಮೆರವಣಿಗೆ ಮಾಡಲಾಯಿತು.

ಜಾತ್ರೋತ್ಸವ ಅಂಗವಾಗಿ ಧ್ವಜಪಟ ತಯಾರಿಸಲಾಯಿತು. ಮಾರುತಿ ದೇವರ ಚಿತ್ರ ಬಿಡಿಸಿ ದೇವರಿಗೆ ಪೂಜೆ ಸಲ್ಲಿಸಿ ನಿರ್ವಿಘ್ನವಾಗಿ ಜಾತ್ರೋತ್ಸವ ನಡೆಯಲು ದೇವಿ, ಮಾರುತಿ ದೇವರನ್ನು ಪ್ರಾರ್ಥಿಸಲಾಯಿತು. ಸಾಂಪ್ರದಾಯಿಕವಾಗಿ ವಿಶ್ವಕರ್ಮ ವೃಂದದ ಭಕ್ತರು ಧ್ವಜಪಟವನ್ನು ಗ್ರಾಮದಲ್ಲಿ ಪ್ರದಕ್ಷಿಣೆ ಮಾಡಿ ದೇಗುಲದ ದ್ವಾರಗೋಪುರದಲ್ಲಿ ಸ್ಥಾಪಿಸಲಾಯಿತು.

ದೇವಿಯ ಮೆರವಣಿಗೆ ಹೊಸಬೀದಿ, ರಥಬೀದಿ, ನರಸಿಂಹಸ್ವಾಮಿ ಬೀದಿ, ಬ್ರಹ್ಮೇಶ್ವರ ಬೀದಿಯಲ್ಲಿ ಸಾಗಿತು. ದೇವಿಗೆ ಭಕ್ತರು ಹಣ್ಣು ಕಾಯಿ ಅರ್ಪಿಸಿದರು. ದೇವಿಗೆ ಪಂಜಿನ ಪೂಜೆ, ಮತ್ತಿತರರ ಪೂಜೆಯನ್ನು ಸಲ್ಲಿಸಲಾಯಿತು.

ಅರ್ಚಕ ಕಿಕ್ಕೇರಪ್ಪ, ದೇವಿಯ ಒಕ್ಕಲಿನ ಭಕ್ತರಾದ ಬೂನಾಸಿ, ಕೆಂಚಮ್ಮ, ಲಕ್ಕಮ್ಮ, ಮಾರಮ್ಮನ ವಠಾರದ ಸಮೂಹದವರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ಯುಗಾದಿ ಸಂಭ್ರಮ ರೈತರಿಗೆ ಕಹಿ, ಇಸ್ಪೀಟ್ ಪ್ರಿಯರಿಗೆ ನಿರಾಸೆ

ಭಾರತೀನಗರ.ಏ.3(ಅಣ್ಣೂರು ಸತೀಶ್)- ಭೀಕರ ಬರದ ಬವಣೆ, ಒಣಗುತ್ತಿರುವ ಬೇಸಿಗೆ ಬೆಳೆಗಳು, ಕೃಷಿ ಉತ್ಪನ್ನಗಳಿಗೆ ವೈಜ್ಞಾನಿಕ ಬೆಲೆ ಸಿಗದೆ ಸಂಕಷ್ಟದ ನಡುವೆ ರೈತರ ಪಾಲಿಗೆ ಈ ಬಾರಿ ಯುಗಾದಿ ಕಹಿಯಾಯಿತು. ಜೂಜಾಟಕ್ಕೆ ಪೊಲೀಸರು ನಿರ್ಬಂಧ ಹೇರಿದ ಹಿನ್ನೆಲೆಯಲ್ಲಿ ಜೂಜುಕೋರರಿಗೂ ನಿರಾಸೆಯಾಯಿತು.

ಮಂಡ್ಯ ಜಿಲ್ಲೆಯ ಗ್ರಾಮೀಣ ಪ್ರದೇಶದ ಜನರಿಗೆ ಯುಗಾದಿ ಸಂಭ್ರಮ ಬಲು ಜೋರು. ಒಬ್ಬಟ್ಟು ಊಟ, ಇಸ್ಪೀಟು ಆಟ ಈ ಹಬ್ಬದ ವಿಶೇಷ. ಆದರೆ, ಕೃಷಿ ಕ್ಷೇತ್ರದಲ್ಲಿ ಕಂಡ ಹಿನ್ನಡೆಯ ಪರಿಣಾಮ ಒಬ್ಬಟ್ಟಿನ ಹೂರಣವೂ ಸಿಹಿಯಾಗಿರಲಿಲ್ಲ. ಕಿರಿಕಿರಿ ನಡುವೆ ಇಸ್ಪೀಟು ಆಟ ಆಡುವ ಆಚರಣೆಗೂ ಅಡ್ಡಿ ಉಂಟಾಯಿತು.

ಮುಚ್ಚಿದ ಕ್ಲಬ್‌ಗಳು: ಭಾರತೀನಗರದಲ್ಲಿ ಕ್ಲಬ್‌ಗಳಿಗೆ ಬರವಿರಲಿಲ್ಲ. ಊರು, ಕೇರಿಗೊಂದು ಇಸ್ಪೀಟ್ ಆಟದ ಕ್ಲಬ್‌ಗಳು ಮನರಂಜನಾ ಕೂಟದ ಹೆಸರಲ್ಲಿ ತಲೆ ಎತ್ತಿದ್ದವು. ಕಳೆದ ಮೂರ್‍ನಾಲ್ಕು ವರ್ಷಗಳಿಂದ ಪೊಲೀಸರ ಬಿಗಿ ಕ್ರಮದ ಪರಿಣಾಮ ಬಹುತೇಕ ಕ್ಲಬ್‌ಗಳು ಕದ ಮುಚ್ಚಿವೆ.

ಕ್ಲಬ್‌ಗಳನ್ನು ತೆರೆದು, ಜೂಜಾಟಕ್ಕೆ ಅವಕಾಶ ಮಾಡಿಕೊಳ್ಳಲು ಇಸ್ಪೀಟು ಪ್ರಿಯರು ನಡೆಸಿದ ಪ್ರಯತ್ನಗಳು ಫಲಿಸಿಲ್ಲ. ಇದಕ್ಕಾಗಿ ಮಂತ್ರಿ, ಸಂಸದ, ಶಾಸಕರಾದಿಯಾಗಿ ಅನೇಕರಿಂದ ಒತ್ತಡ ಹೇರಿದರೂ ಅವರ ಆಟ ನಡೆಯಲಿಲ್ಲ.

ಯುಗಾದಿಗೂ ಇಲ್ಲ: ಯುಗಾದಿ ಹಬ್ಬದ ಪ್ರಯುಕ್ತ ಕಡೇಪಕ್ಷ 3 ದಿನದ ಮಟ್ಟಿಗಾದರೂ ಇಸ್ಪೀಟ್ ಆಡಲು ಅವಕಾಶ ಕೊಡುವಂತೆ ಕೋರಿ ಎಲ್ಲ ಕ್ಲಬ್‌ಗಳ ಸದಸ್ಯರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಮನವಿ ಮಾಡಿದರೂ ಪ್ರಯೋಜನವಾಗಲಿಲ್ಲ.

ಇಡೀ ಜಿಲ್ಲೆಯಲ್ಲಿ ಎಲ್ಲೂ ಬಹಿರಂಗವಾಗಿ ಇಸ್ಪೀಟ್ ಸೇರಿದಂತೆ ಜೂಜಾಟಕ್ಕೆ ಅವಕಾಶ ನೀಡಬಾರದು ಎಂದು ಖುದ್ದು ಎಸ್ಪಿಯೇ ಅಧೀನ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಆದೇಶ ನೀಡಿದ್ದರು. ಇದರಿಂದ ಇಸ್ಪೀಟ್ ಪ್ರಿಯರಿಗೆ ಸಂಭ್ರಮ ಕಳೆಗುಂದಿತು.

ಅಗ್ರಹಾರಬಾಚಹಳ್ಳಿಯಲ್ಲಿ ಶ್ರೀ ಲಕ್ಷ್ಮೀದೇವಿ ಜಾತ್ರೆ



ಕೆ.ಆರ್.ಪೇಟೆ,ಏ.3(ಶ್ರೀನಿವಾಸ್)- ತಾಲೂಕಿನ ಅಗ್ರಹಾರಬಾಚಹಳ್ಳಿ ಗ್ರಾಮದಲ್ಲಿ ಗ್ರಾಮದೇವತೆ ಶ್ರೀ ಲಕ್ಷ್ಮೀದೇವಿ ಅಮ್ಮನವರ ವಿಶೇಷ ಪೂಜೆ ಮತ್ತು ಅನ್ನದಾನ ಹಾಗೂ ಪಲ್ಲಕ್ಕಿ ಉತ್ಸವ ಹೇಮಾವತಿ ನದಿ ದಂಡೆಯಲ್ಲಿರುವ ಹೇಮಗಿರಿ ಶ್ರೀ ಕ್ಷೇತ್ರದಲ್ಲಿ ವಿಜೃಂಭಣೆಯಿಂದ ನಡೆಯಿತು.

ಗ್ರಾಮದ ಗೋಪಾಲಿ ನಾಗೇಗೌಡರ ಕುಟುಂಬದ ಜವಾಬ್ದಾರಿಯಲ್ಲಿ ಅನ್ನದಾನ, ಪೂಜಾ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆದವು. ಪವಿತ್ರ ಹೇಮಾವತಿ ನದಿಯಲ್ಲಿ ದೇವರಿಗೆ ಪುಣ್ಯ ಸ್ನಾನ ಮಾಡಿಸಿ, ಹೇಮಗಿರಿ ಶ್ರೀ ಕಲ್ಯಾಣ ವೆಂಕಟರಮಣ ಸ್ವಾಮಿಯವರ ದೇವಾಲಯದ ಆವರಣದಲ್ಲಿ ದೇವರಿಗೆ ಎಡೆ, ಮಡೆ ಅರ್ಪಿಸಿ ವಿಶೇಷ ಪೂಜೆ ಸಲ್ಲಿಸಲಾಯಿತು.

ಕಾರ್ಯಕ್ರಮದ ಅಂಗವಾಗಿ ವಿಶೇಷ ಪೂಜೆ, ಅಭಿಷೇಕ, ಅನ್ನಧಾನ, ದೇವರ ಪಲ್ಲಕ್ಕಿ ಉತ್ಸವ, ಸೋಮನ ಕುಣಿತ, ತಮಟೆ ವಾದನ, ಗುಡ್ಡರ ಕುಣಿತ ಸೇರಿದಂತೆ ಹಲವು ಜಾನಪದ ಕಾರ್ಯಕ್ರಮಗಳೊಂದಿಗೆ ದೇವಿಯ ಪಲ್ಲಕ್ಕಿ ಉತ್ಸವವು ಹೇಮಗಿರಿ ಶ್ರೀ ಕ್ಷೇತ್ರದಿಂದ ಕುಪ್ಪಹಳ್ಳಿ, ಹೆಗ್ಗಡಹಳ್ಳಿ, ಮಲ್ಲೇನಹಳ್ಳಿ, ಮಾಕವಳ್ಳಿ, ಪುರ, ಚಿಕ್ಕೋಸಹಳ್ಳಿ ಗ್ರಾಮಗಳ ಮಾರ್ಗವಾಗಿ ಅಗ್ರಹಾರ ಬಾಚಹಳ್ಳಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ನಡೆಯಿತು. ಗ್ರಾಮದ ಭಕ್ತಾಧಿಗಳು ದೇವರಿಗೆ ಹಣ್ಣು-ಕಾಯಿ ಸಮರ್ಪಿಸಿ ಕೃತಾರ್ಥರಾದರು.

ವಿಶೇಷ ಪೂಜಾ ಕಾರ್ಯಕ್ರಮದಲ್ಲಿ ಗ್ರಾಮದ ಹಲವು ಗಣ್ಯರು ಸೇರಿದಂತೆ ಸಾವಿರಾರು ಮಂದಿ ಭಾಗವಹಿಸಿದ್ದರು.

ಬಲ್ಲೇನಹಳ್ಳಿ ಶ್ರೀ ಆಂಜನೇಯಸ್ವಾಮಿ ಉತ್ಸವ



ಶ್ರೀರಂಗಪಟ್ಟಣ, ಏ.3- ಚಾಂದ್ರಮಾನ ಯುಗಾದಿ ಅಂಗವಾಗಿ ಬಲ್ಲೇನಹಳ್ಳಿ ಶ್ರೀ ಆಂಜನೇಯಸ್ವಾಮಿ ಉತ್ಸವ ವಿಜೃಂಭಣೆಯಿಂದ ನಡೆಯಿತು. ತಾಲೂಕಿನ ಬಾಬುರಾಯನಕೊಪ್ಪಲಿನ ಶ್ರೀ ಗುಂಜಾ ನರಸಿಂಹಸ್ವಾಮಿ ದೇವಾಲಯ ಬಳಿಯ ಕಾವೇರಿ ನದಿ ತೀರದಿಂದ ದೇವರನ್ನು ತೊಳೆದು ಉತ್ಸವ ಮೂರ್ತಿಗೆ ಮಡಿ ಮಾಡಿ ಕಳಸದ ಮೂಲಕ ದೇವರ ತರುವ ಮೆರವಣಿಗೆ ಬಾಬುರಾಯನಕೊಪ್ಪಲು, ಕಿರಂಗೂರು, ಹಳೇ ಕಿರಂಗೂರು, ಗಣಪತಿ ದೇವಾಲಯ, ಕೂಡಲಕುಪ್ಪೆ, ಕೆಂಪೇಗೌಡರ ಕೊಪ್ಪಲು, ಹನುಮಂತ ನಗರ ಮಾರ್ಗವಾಗಿ ಬಲ್ಲೇನಹಳ್ಳಿಗೆ ಸಾಗಿತು. ತಮಟೆ, ಮಂಗಳವಾದ್ಯ, ಪಟದ ಕುಣಿತ ಮೆರವಣಿಗೆ ಮೆರುಗು ತಂದು ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಯಿತು.

ರಸ್ತೆಯುದ್ದಕ್ಕೂ ಹಣ್ಣು ಕಾಯಿ ಪೂಜೆ ಈಡುಗಾಯಿ ಮತ್ತಿತರ ಪೂಜಾ ಸೇವೆಗಳ ನಡುವೆ ಉತ್ಸವ ಜರುಗಿತು. ನಂತರ ಯಜಮಾನರುಗಳ ಮುಖಂಡತ್ವದಲ್ಲಿ ಗ್ರಾಮದಲ್ಲಿ ವಿಶೇಷ ಪೂಜಾ ಕಾರ್ಯಕ್ರಮ ನಡೆಸಿ ಮಹಾ ಮಂಗಳಾರತಿಯೊಂದಿಗೆ ಭಕ್ತರಿಗೆ ಪ್ರಸಾದ ವಿನಿಯೋಗ ಮಾಡಲಾಯಿತು.

ಮಂಡ್ಯದಲ್ಲಿ ಹಲಾಲ್, ಜಟ್ಕಾ ಕಟ್‌ಗಿಂತ ಗುಡ್ಡೆ ಮಾಂಸಕ್ಕೆ ಬಹುಬೇಡಿಕೆ

ಮಂಡ್ಯ,ಏ.3(ಮೋಹನ್‌ರಾಜ್)- ಹಲಾಲ್ ಕಟ್ ಹಾಗೂ ಜಟ್ಕಾ ಕಟ್ ಮಾಂಸದ ವಾರ್ ನಡುವೆ ಭಾನುವಾರ ಯುಗಾದಿ ಹೊಸದುಡುಕಿನ ಹಿನ್ನೆಲೆಯಲ್ಲಿ ಸಕ್ಕರೆ ನಾಡಿನ ಮಂದಿ ಗುಡ್ಡೆ ಮಾಂಸಕ್ಕೆ ಹೆಚ್ಚಿನ ಮೊರೆ ಹೋಗಿದ್ದರು.

ರಾಜಕೀಯ ಕೆಸರೆರೆಚಾಟಕ್ಕೆ ಕಾರಣವಾಗಿರುವ ಹಲಾಲ್ ಕಟ್ ಹಾಗೂ ಜಟ್ಕಾ ಕಟ್ ಮಾಂಸದ ವಿವಾದದ ನಡುವೆ ಮಂಡ್ಯ ಜನ ಎರಡಕ್ಕೂ ತಿಲಾಂಜಲಿ ಹೇಳಿ ರೈತರಿಂದ ಮಾರಾಟವಾಗುವ ಗುಡ್ಡೆ ಮಾಂಸಕ್ಕೆ ಹೆಚ್ಚಿನ ಮೊರೆ ಹೋಗಿದ್ದರು.

ಮಂಡ್ಯ ನಗರ ಪ್ರದೇಶದಲ್ಲಿರುವ ಮಾಂಸದಂಗಡಿಗಳಲ್ಲಿ ಮಾಂಸ ಖರೀದಿಗೆ ಜನ ಮುಗಿಬಿದ್ದರಾದರೂ ಹೆಚ್ಚಿನ ಬೇಡಿಕೆ ಇದ್ದದ್ದು ಮಾತ್ರ ಗುಡ್ಡೆ ಮಾಂಸಕ್ಕೆ. ಮಂಡ್ಯದಲ್ಲಿ ಗುಡ್ಡೆ ಮಾಂಸಕ್ಕೆ ಈಗಲೂ ಸಹ ಬಾರೀ ಬೇಡಿಕೆ ಇದ್ದು, ಗ್ರಾಮೀಣ ಪ್ರದೇಶದಲ್ಲಿ ನಾಟಿ ಮರಿಗಳನ್ನು ಕಡಿದು ಎಲ್ಲಾ ವಿಧದ ಮಾಂಸಗಳನ್ನು ಒಗ್ಗೂಡಿಸಿ, ಕೆ.ಜಿಗೆ ಒಂದು ಗುಡ್ಡೆ ಸಿದ್ಧಪಡಿಸಿ ಮಾರುವುದೇ ಗುಡ್ಡೆ ಮಾಂಸ.

ಮಂಡ್ಯದಲ್ಲಿ ಮಾಂಸ ಖರೀದಿಗೆ ಹೆಸರಾಗಿರುವ ಕಾರವಾಡಿ ರಸ್ತೆ, ಸಾತನೂರು ಮಟನ್‌ಸ್ಟಾಲ್, ಶಿವಳ್ಳಿ, ಗುತ್ತಲು ರಸ್ತೆ, ಮಂಡ್ಯ ಕೊಪ್ಪಲು, ಬಂಡೂರು, ಹಿಟ್ಟನಹಳ್ಳಿ ಕೊಪ್ಪಲು ಹೀಗೆ ಹಲವೆಡೆ ಮಾಂಸಕ್ಕೆ ಜನ ಸಾಲುಗಟ್ಟಿ ನಿಂತಿದ್ದ ದೃಶ್ಯ ಕಂಡು ಬಂತು. ಅದರಲ್ಲೂ ಸಾತನೂರು ಬಳಿ ಟೋಕನ್‌ಗಳನ್ನು ಕೊಟ್ಟು ಮಟನ್ ಖರೀದಿಸುತ್ತಿದ್ದದ್ದು ವಿಶೇಷವಾಗಿತ್ತು.

ಬೇಸಿಗೆ ಶಿಬಿರದಲ್ಲಿ ಬೆಟ್ಟ ಹತ್ತುವ ಚಾರಣ



ಶ್ರೀರಂಗಪಟ್ಟಣ, ಏ.3- ಅಚೀವರ್ಸ್ ಅಕಾಡೆಮಿ ವತಿಯಿಂದ ಬೇಸಿಗೆ ಶಿಬಿರದ ಅಂಗವಾಗಿ ಭಾನುವಾರ ಕರೀಘಟ್ಟ ಬೆಟ್ಟ ಹತ್ತುವ ಚಾರಣ ಹಮ್ಮಿಕೊಳ್ಳಲಾಗಿತ್ತು.

ಉಚಿತ ಕ್ರೀಡಾ ಬೇಸಿಗೆ ಶಿಬಿರದಲ್ಲಿ ವಿದ್ಯಾರ್ಥಿಗಳಿಗೆ ಚಾರಣದ ಮಹತ್ವವನ್ನು ಕುರಿತು ಉಪನ್ಯಾಸ ನೀಡಲಾಯಿತು. ಸ್ವತಃ ವಿದ್ಯಾರ್ಥಿಗಳು ಬೆಟ್ಟವನ್ನು ಹತ್ತಿ ಪ್ರಕೃತಿಯ ಸೌಂದರ್ಯವನ್ನು ಆನಂದಿಸಿದರು.

ಆಯೋಜಕ ಡಾ. ರಾಘವೇಂದ್ರ ಮಾತನಾಡಿ, ಚಾರಣವು ಒಂದು ಹವ್ಯಾಸವಾಗಿದ್ದು, ಇದರಲ್ಲಿ ಬೆಟ್ಟ-ಗುಡ್ಡ ಹತ್ತುವುದು, ನದಿಪಾತ್ರಗಳಲ್ಲಿ ನಡೆಯುವುದು, ಕಾಡುಗಳಲ್ಲಿ ಸಂಚರಿಸುವುದು ಮುಂತಾದುವುಗಳನ್ನು ಒಳಗೊಂಡಿದೆ. ಪ್ರಕೃತಿಯ ಚೆಲುವನ್ನು ಸವಿಯಲು ಇದು ಒಂದು ಉತ್ತಮ ಅವಕಾಶ. ಚಾರಣವು ಧೈರ್ಯ, ಸಾಹಸ, ಆತ್ಮ ಸ್ಥೈರ್ಯ, ನಾಯಕತ್ವ, ಸಂಘ ಶಕ್ತಿ, ಸೂಕ್ತ ಯೋಜನೆ, ಮಾನಸಿಕ ಸ್ಥಿತಿ ಮುಂತಾದವುಗಳನ್ನು ಬೆಳೆಸುವಲ್ಲಿ ಸಹಕಾರಿಯಾಗಿದೆ. ಚಾರಣದಿಂದ ಆರಂಭವಾಗುವ ಈ ಆರೋಗ್ಯಕರ ಚಟುವಟಿಕೆಯು, ಹೆಚ್ಚಿನ ಶ್ರಮದ ಕ್ರೀಡೆಯಾದ ಪರ್ವತಾರೋಹಣಕ್ಕೂ ನಾಂದಿ ಹಾಡುವ ಸಾಧ್ಯತೆ ಇದೆ ಎಂದು ತಿಳಿಸಿದರು.

ವಿದ್ಯಾರ್ಥಿಗಳಾದ ನವೀನ್, ವಂದನ, ಸುಜಯ್, ದೀಕ್ಷಿತ್, ಸತೀಶ್, ಸಂವಿತ್ ಗೌಡ ಅಪೇಕ್ಷ, ಅನನ್ಯ, ಗುರು, ಬಬ್ಲು, ಗೌರಿ, ಲಿಖಿತ್, ಕಾವ್ಯ, ಜೈನ್ ಇನ್ನು ಮುಂತಾದವರು ಭಾಗವಹಿಸಿದರು

ಬೋರಮ್ಮ ನಿಧನ

ಕೆ.ಆರ್.ಪೇಟೆ, ಏ.3(ಶ್ರೀನಿವಾಸ್)- ತಾಲೂಕಿನ ಅಗ್ರಹಾರಬಾಚಹಳ್ಳಿ ಗ್ರಾಮದ ಹಿರಿಯ ಮುಖಂಡರಾದ ದೊಡ್ಡಮೊಗಣ್ಣ ಅವರ ಧರ್ಮಪತ್ನಿ ಶ್ರೀಮತಿ ಬೋರಮ್ಮ (85) ನಿಧನರಾದರು



ಮೃತರು ಪುತ್ರರಾದ ನಿವೃತ್ತ ಉಪ ಪ್ರಾಂಶುಪಾಲ ಡಿ.ರಾಜೇಗೌಡ, ಪ್ರಗತಿಪರ ರೈತ ಜಯರಾಮೇಗೌಡ, ಸೊಸೆ ಶಿಕ್ಷಕಿ ವಿನುತಾ ರಾಜೇಗೌಡ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಮೃತರ ಸ್ವಗ್ರಾಮ ಅಗ್ರಹಾರಬಾಚ ಹಳ್ಳಿಯಲ್ಲಿ ನಡೆಯಿತು. ಮೃತರಿಗೆ ತಾಲೂಕಿನ ವಿವಿಧ ಗಣ್ಯರು ಸಂತಾಪ ಸೂಚಿಸಿದ್ದಾರೆ.

ಮೈಸೂರು ಮಿತ್ರ ಕೊಡಗು ಕಚೇರಿ: ಪೂಜಾ ಆರ್ಕೇಡ್, ಜೂನಿಯರ್ ಕಾಲೇಜು ರಸ್ತೆ, ಮಡಿಕೇರಿ. ದೂರವಾಣಿ: 223517, (ಕ) ಫ್ಯಾಕ್ಸ್: 08272-223517 ಮೊ. 9731469871 E-mail: madikeri@mysurumithra.com

ರೈತರಿಂದ ಸಂಭ್ರಮದ ಹೊನ್ನಾರು ಉತ್ಸವ



ಕುಶಾಲನಗರ, ಏ.3–ಕುಶಾಲನಗರ ಬಳಿ ತೊರೆನೂರು ಗ್ರಾಮದಲ್ಲಿ ಯುಗಾದಿ ಹಬ್ಬದ ಅಂಗವಾಗಿ ಹೊಸ ವರ್ಷ ಆರಂಭದ ದಿನವಾದ ಶನಿವಾರ ರೈತರು ಜನಪದ ಸಂಸ್ಕೃತಿಯ ಪ್ರತೀಕವಾದ ಹೊನ್ನಾರು ಉತ್ಸವ(ಚಿನ್ನದ ಉಳುಮೆ) ಆಚರಿಸುವ ಮೂಲಕ ಸಂಭ್ರಮಿಸಿದರು.

ಹಬ್ಬದ ಹಿನ್ನೆಲೆಯಲ್ಲಿ ತಮ್ಮ ಮನೆ ಹಾಗೂ ಗ್ರಾಮವನ್ನು ಹಸಿರು ತಳಿರು–ತೋರಣಗಳಿಂದ ಅಲಂಕರಿಸಿದ್ದರು. ಜೊತೆಗೆ ತಮ್ಮ ದನ–ಕರುಗಳು, ಎತ್ತುಗಳನ್ನು ಸ್ವಚ್ಛಗೊಳಿಸಿ ಗೋ ಪೂಜೆ ಸಲ್ಲಿಸಿದರು. ಇದೇ ವೇಳೆಗೆ ಕೃಷಿ ಉಪಕರಣಗಳಾದ ನೇಗಿಲು, ನೊಗ ಮತ್ತಿತರ ಪರಿಕರಗಳನ್ನು ಒಪ್ಪೋರಣವಾಗಿಟ್ಟು ಪೂಜೆ ಸಲ್ಲಿಸಿದರು.

ನಂತರ ಗ್ರಾಮಸ್ಥರು ಗ್ರಾಮದ ಬಸವೇಶ್ವರ ದೇವಸ್ಥಾನದ ಬಳಿ ಸಮಾಗಮಗೊಂಡು ದೇವರಿಗೆ ಪೂಜೆ ಸಲ್ಲಿಸಿ ಈಡುಗಾಯಿ ಹಾಕಿ ತಮ್ಮ ಎತ್ತು–ಕರುಗಳ ಜೋಡಿಯೊಂದಿಗೆ (ಜಾನುವಾರುಗಳೊಂದಿಗೆ) ದೇವರ ಜಮೀನಿನತ್ತ ನಡೆದರು. ತೊರೆನೂರು ಗ್ರಾಮದಲ್ಲಿ ಮೊದಲಿಗೆ ಹೊನ್ನಾರು ಉತ್ಸವದಲ್ಲಿ ರೈತ ಟಿ.ಎಲ್.ಚಂದ್ರಶೇಖರ್ ಅವರು ದೇವಾಲಯದ ಜಮೀನಿಗೆ ಮೊದಲ ಹೊನ್ನಾರು (ಚಿನ್ನದ ಉಳುಮೆ) ಉಳುಮೆ ಆರಂಭಿಸಿದರು. ದೇವಸ್ಥಾನದ ಅರ್ಚಕ ಟಿ.ಎಲ್. ಸೋಮಶೇಖರ್ ಪೂಜಾ ವಿಧಿ–ವಿಧಾನಗಳನ್ನು ನಡೆಸಿಕೊಟ್ಟರು.

ಗ್ರಾಮದ ಊರಿನ ಬಸವೇಶ್ವರ ದೇವಾಲಯದಿಂದ ಆರಂಭಗೊಂಡ ಹೊನ್ನಾರು ಉತ್ಸವವು ಗ್ರಾಮದ ಪ್ರಮುಖ ಬೀದಿಯಲ್ಲಿ ಸಾಗಿ ನಂತರ ಗ್ರಾಮದ ಬಸ್ ನಿಲ್ದಾಣದ ಬಳಿಯಿರುವ ಬಸವೇಶ್ವರ ದೇವಾಲಯದ ಅಂಗಳದಲ್ಲಿ ಸಮಾಪ್ತಿಗೊಂಡಿತು.



ನಂತರ ರೈತರು ತಮ್ಮ ತಮ್ಮ ಜಮೀನುಗಳಿಗೆ ತೆರಳಿ ತಮ್ಮ ಜಮೀನಿನಲ್ಲಿ ಹೊನ್ನಾರು ಉಳುಮೆ ಆರಂಭಿಸಿದರು.

ಮಳೆ ಬೆಳೆ ಚೆನ್ನಾಗಿ ಆಗುವ ಮೂಲಕ ಜನ–ಜಾನುವಾರುಗಳಿಗೆ ಉತ್ತಮ ಆರೋಗ್ಯ ಕರುಣಿಸಲಿ ಎಂದು ಭೂಮಿತಾಯಿಗೆ ಪೂಜೆ ಸಲ್ಲಿಸಿದರು. ಗ್ರಾಮಸ್ಥರು ತಮ್ಮ ಜಾನುವಾರುಗಳನ್ನು ಸ್ವಚ್ಛಗೊಳಿಸುವ ಮೂಲಕ ಅವುಗಳನ್ನು ಅಲಂಕೃತ ಗವುಸುಗಳಿಂದ(ಬಟ್ಟೆ) ಅಲಂಕರಿಸಿ ಮೆರವಣಿಗೆ ಮಾಡಿದರು.

ಇದಕ್ಕೂ ಮೊದಲು ರೈತರು ತಮ್ಮ ಮನೆಗಳಲ್ಲಿ ಹಬ್ಬದ ಅಂಗವಾಗಿ ತಯಾರಿಸಿದ್ದ ಹೋಳಿಗೆ ಮತ್ತಿತರ ಭಕ್ಷ್ಯ ಭೋಜನಗಳನ್ನು ಕೂಡ ತಮ್ಮ ರಾಸುಗಳಿಗೆ ತಿನ್ನಿಸಿ ಸಂತಸಪಟ್ಟರು. ತೊರೆನೂರು ಗ್ರಾಮದಲ್ಲಿ ದೇವಾಲಯ ಸಮಿತಿಯ ಅಧ್ಯಕ್ಷ ಹೆಚ್.ಬಿ. ಚಂದ್ರಪ್ಪ ಅವರ ನೇತೃತ್ವದಲ್ಲಿ ಹೊನ್ನಾರು ಉತ್ಸವ ನಡೆಯಿತು. ಪ್ರತಿ ವರ್ಷ ಗ್ರಾಮದಲ್ಲಿ ಹೊನ್ನಾರು ಉತ್ಸವವನ್ನು ಆಚರಿಸಿಕೊಂಡು ಬರಲಾಗುತ್ತಿದೆ ಎಂದು ಸಮಿತಿಯ ಅಧ್ಯಕ್ಷ ಚಂದ್ರಪ್ಪ ಹೇಳಿದರು.

ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್‌ನ ಮಾಜಿ ಅಧ್ಯಕ್ಷ ಟಿ.ಜಿ.ಪ್ರೇಮಕುಮಾರ್ ಮಾತನಾಡಿ, ಜನಪದ ಸಂಸ್ಕೃತಿಯ ಪ್ರತೀಕವಾದ ಹೊನ್ನಾರು ಉತ್ಸವವನ್ನು ಉತ್ತರ ಕೊಡಗಿನ ಗಡಿಭಾಗದ ಗ್ರಾಮಗಳಲ್ಲಿ ಚಾಚು ತಪ್ಪದೇ ಆಚರಿಸಿಕೊಂಡು ಬರಲಾಗುತ್ತಿದೆ. ಇದು ರೈತರು ಯುಗಾದಿ ಸಂದರ್ಭದಲ್ಲಿ ಭೂಮಿಗೆ ಪೂಜೆ ಸಲ್ಲಿಸುವ ಮೂಲಕ ಹೊನ್ನಾರು ಉಳುಮೆ ಆರಂಭಿಸುವ ಮೂಲಕ ಉತ್ತಮ ಮಳೆ ಬೆಳೆಯಾಗಲಿ ಎಂದು ಪ್ರಕೃತಿಯನ್ನು ಪೂಜಿಸಿಕೊಂಡು ಬರುತ್ತಿರುವುದು ಪೂರ್ವಿಕರ ಕಾಲದಿಂದ ಬಂದ ಸಂಪ್ರದಾಯವಾಗಿದೆ ಎಂದರು.

ಉತ್ಸವದಲ್ಲಿ ತೊರೆನೂರು ಗ್ರಾಮದ ಹೊನ್ನಾರು ಉತ್ಸವದಲ್ಲಿ ದೇವಾಲಯ ಸಮಿತಿಯ ಗೌರವಾಧ್ಯಕ್ಷ ಟಿ.ಎಸ್.ಚಂದ್ರಶೇಖರ್, ಉಪಾಧ್ಯಕ್ಷ ಟಿ.ವಿ.ಪ್ರಕಾಶ್, ಕಾರ್ಯದರ್ಶಿ ಟಿ.ಹೆಚ್.ಸೋಮಚಾರಿ, ಖಜಾಂಚಿ ಟಿ.ಸಿ.ಶಿವಕುಮಾರ್, ಸಮಿತಿಯ ಸದಸ್ಯರಾದ ಟಿ.ಎಂ.ಶಿವಪ್ಪ, ಟಿ.ಬಿ.ಮಂಜುನಾಥ್, ಟಿ.ಎ.ರವಿಚಂದ್ರ, ಜಯಪ್ಪ, ಪ್ರಮುಖರಾದ ಟಿ.ಎಲ್.ಮಹೇಶ್, ಟಿ.ಬಿ.ಚಿದಾನಂದ ಮೊದಲಾದವರಿದ್ದರು.

ವಿವಿಧೆಡೆ ಹೊನ್ನಾರು ಉತ್ಸವ: ತೊರೆನೂರು ಸೇರಿದಂತೆ ಶಿರಂಗಾಲ, ಹುಲುಸೆ, ಕೂಡ್ಲೂರು, ಚಿಕ್ಕನಾಯಕನ ಹೊಸಹಳ್ಳಿ ಮುಂತಾದ ಕಡೆಗಳಲ್ಲಿ ರೈತರು ಶನಿವಾರ ಹೊನ್ನಾರು ಉತ್ಸವ ಆಚರಿಸಿದರು. ಹೆಬ್ಬಾಲೆ ಗ್ರಾಮದಲ್ಲಿ ಬುಧವಾರ ದಿನ ಅದ್ಧೂರಿಯಾಗಿ ಹೊನ್ನಾರು ಉತ್ಸವ ಆಚರಿಸಲಾಗುವುದು ಎಂದು ದೇವಾಲಯ ಸಮಿತಿ ಅಧ್ಯಕ್ಷ ಬಸವರಾಜು ತಿಳಿಸಿದ್ದಾರೆ.

ವರ್ಷದ ಹಿಂದೆ ನಡೆದಿದ್ದ ಹುಲಿ ಹತ್ಯೆ ಪ್ರಕರಣ ಬಯಲು

7 ಮಂದಿ ಆರೋಪಿಗಳ ಬಂಧನ

ಹುಲಿಉಗುರು ಮಾರಾಟ ವೇಳೆ ಸಿಕ್ಕಿ ಬಿದ್ದರು





ಮಡಿಕೇರಿ, ಏ.3– ಹುಲಿ ಉಗುರುಗಳನ್ನು ಮಾರಲು ಯತ್ನಿಸುತ್ತಿದ್ದ ಇಬ್ಬರು ಆರೋಪಿಗಳನ್ನು ಬಂಧಿಸಿದ ಸಂದರ್ಭ ಹುಲಿಯ ಹತ್ಯೆ ಪ್ರಕರಣವೊಂದು ಬಯಲಾಗಿದ್ದು, ಮಡಿಕೇರಿಯ ಸಿಐಡಿ ಪೊಲೀಸ್ ಅರಣ್ಯ ಘಟಕದ ಪೊಲೀಸರು ಪ್ರಕರಣ ಭೇದಿಸುವಲ್ಲಿ ಯಶಸ್ವಿಯಾಗಿದ್ದಾರೆ. ಕೃತ್ಯದಲ್ಲಿ ಭಾಗಿಯಾಗಿದ್ದ ಒಟ್ಟು 7 ಮಂದಿಯನ್ನು ಬಂಧಿಸಿದ್ದಾರೆ.

ಆರೋಪಿಗಳಿಂದ 17 ಹುಲಿ ಉಗುರುಗಳು, 1 ಕೋರೆ ಹಲ್ಲು, 6 ಹಲ್ಲಿನ ಚೂರುಗಳು ಸೇರಿದಂತೆ 55 ಬಗೆಯ ಮೂಳೆಗಳ ಸಹಿತ ಹುಲಿಯ ಸಂಪೂರ್ಣ ಅಸ್ಥಿ ಪಂಜರ ಮತ್ತು ಕೃತ್ಯಕ್ಕೆ ಬಳಸಿದ್ದ ಒಂದು ದ್ವಿಚಕ್ರ ವಾಹನ ವಶಕ್ಕೆ ಪಡೆಯಲಾಗಿದೆ.

ಪ್ರಕರಣ ಹಿನ್ನೆಲೆ: ಕುಶಾಲನಗರ ತಾಲೂಕು ಹೆಬ್ಬಾಲೆ ಮರೂರು ಗ್ರಾಮದ ನಿವಾಸಿಗಳಾದ ನವೀನ ಮತ್ತು ಶೇಖರ್ ಹುಲಿಯ 4 ಉಗುರುಗಳು ಹಾಗೂ ಹಲ್ಲಿನ ಚೂರುಗಳನ್ನು ಮಾರಲು ಯತ್ನಿಸುತ್ತಿರುವ ಬಗ್ಗೆ ಮಡಿಕೇರಿಯ ಸಿಐಡಿ ಪೊಲೀಸ್ ಅರಣ್ಯ ಸಂಚಾರಿ ಘಟಕಕ್ಕೆ ಖಚಿತ ಮಾಹಿತಿ ಲಭಿಸಿತ್ತು. ಈ ಮಾಹಿತಿ ಆಧಾರದಲ್ಲಿ ದಾಳಿ ನಡೆಸಿ ಸಂದರ್ಭ ಇಬ್ಬರು ಆರೋಪಿಗಳನ್ನು ಮಾಲು ಸಮೇತ ಸೆರೆ ಹಿಡಿಯಲಾಗಿತ್ತು. ಆರೋಪಿಗಳನ್ನು ಹೆಚ್ಚಿನ ವಿಚಾರಣೆಗೆ ಒಳಪಡಿಸಿದಾಗ 1 ವರ್ಷದ ಹಿಂದೆ ನಡೆದಿದ್ದ ಹುಲಿ ಹತ್ಯೆ ಪ್ರಕರಣ ಬೆಳಕಿಗೆ ಬಂದಿದೆ.

ಹುಲಿ ಹತ್ಯೆ: ಹೆಬ್ಬಾಲೆ ಮರೂರು ಗ್ರಾಮ ನಿವಾಸಿಗಳಾದ ಗಣೇಶ ಮತ್ತು ಯೋಗೇಶ್ ತಮ್ಮ ಜಮೀನಿನಲ್ಲಿ 1 ವರ್ಷದ ಹಿಂದೆ ಕಾಡುಹಂದಿ ಉಪಟಳಕ್ಕೆ ಅಕ್ರಮವಾಗಿ ವಿದ್ಯುತ್ ತಂತಿಬೇಲಿ ಹಾಕಿದ್ದರು. ಈ ಸಂದರ್ಭ ಆಹಾರ ಅರಸಿಕೊಂಡು ಜಮೀನಿನತ್ತ ಬಂದಿದ್ದ ಹುಲಿಯೊಂದು ವಿದ್ಯುತ್ ಸ್ಪರ್ಶದಿಂದ ಸ್ಥಳದಲ್ಲೇ ಸಾವನ್ನಪ್ಪಿತ್ತು. ಮೃತಪಟ್ಟ ಹುಲಿ ಕಳೇಬರವನ್ನು ಗಣೇಶ, ಯೋಗೇಶ್, ರಮೇಶ ಅವರು ಹೊಲದಲ್ಲಿ ಬೆಳಗ್ಗೆ ಗುಂಡಿ ತೆಗೆದು ಹೂತಿದ್ದರು. ನಂತರ ರಮೇಶ, ದೊರೇಶ, ನಟೇಶ ಅವರು ಅಂದೇ ರಾತ್ರಿ ಹುಲಿಯನ್ನು ಗುಂಡಿಯಿಂದ ಹೊರ ತೆಗೆದು ಕಾಲಿನ ಉಗುರುಗಳು, ಹಲ್ಲುಗಳು ಹಾಗೂ ಚರ್ಮದ ಒಂದು ಚಿಕ್ಕಚೂರನ್ನು ತೆಗೆದಿದ್ದರು.

ಕಳೇಬರ ವಶಕ್ಕೆ: ಹುಲಿ ಉಗುರು ಮಾರಾಟದ ಆರೋಪಿಗಳು ನೀಡಿದ ಹೇಳಿಕೆ ಆಧರಿಸಿ ಸ್ಥಳಕ್ಕೆ ತೆರಳಿದ ಪೊಲೀಸ್ ಅರಣ್ಯ ಸಂಚಾರಿ ಘಟಕದ ಸಿಬ್ಬಂದಿ ಜೆಸಿಬಿ ಸಹಾಯದಿಂದ ಹುಲಿ ಹೂತು ಹಾಕಿದ್ದ ಸ್ಥಳದಲ್ಲಿ ಶೋಧ ನಡೆಸಿದರು. ಈ ಸಂದರ್ಭ ಹುಲಿಯ ತಲೆ ಬುರುಡೆ, 4 ಹಲ್ಲುಗಳು, 4 ಕಾಲಿನ ಮೂಳೆ, ವಿವಿಧ ಅಳತೆಯ ಹುಲಿಯ 55 ಮೂಳೆಗಳ ಸಹಿತ ಹುಲಿಯ ಅಸ್ಥಿಪಂಜರವನ್ನು ವಶಕ್ಕೆ ಪಡೆದಿದ್ದಾರೆ.

ಈ ಪ್ರಕರಣದಲ್ಲಿ ಒಟ್ಟು ಹುಲಿಯ 17 ಉಗುರುಗಳು, 1 ಕೋರೆ ಹಲ್ಲು, 6 ಹಲ್ಲಿನ ಚೂರುಗಳ ಸಹಿತ ವಿವಿಧ ಅಳತೆಯ 55 ಮೂಳೆಗಳು ಮತ್ತು ಕೃತ್ಯಕ್ಕೆ ಬಳಸಿದ್ದ 1 ದ್ವಿಚಕ್ರ ವಾಹನವನ್ನು ವಶಕ್ಕೆ ಪಡೆಯಲಾಗಿದೆ. ಆರೋಪಿಗಳ ವಿರುದ್ಧ ವಿವಿಧ ಸೆಕ್ಷನ್‌ಗಳಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಲಾಗಿದೆ ಎಂದು ಅರಣ್ಯ ಸಂಚಾರಿ ದಳ ತಿಳಿಸಿದೆ.

ಸಿಐಡಿ ಪೊಲೀಸ್ ಅರಣ್ಯ ಘಟಕದ ಹೆಚ್ಚುವರಿ ಪೊಲೀಸ್ ಮಹಾನಿರೀಕ್ಷಕ ಕೆ.ವಿ.ಶರತ್‌ಚಂದ್ರ ನಿರ್ದೇಶನದ ಮೇರೆಗೆ ಮಡಿಕೇರಿ ಸಿಐಡಿ ಪೊಲೀಸ್ ಅಧೀಕ್ಷಕ ಚಂದ್ರಕಾಂತ್ ಮಾರ್ಗದರ್ಶನದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಮಡಿಕೇರಿ ಅರಣ್ಯ ಸಂಚಾರಿ ದಳದ ಪಿಎಸ್‌ಐ ಸಿ.ಯು.ಸವಿ, ಸಿಬ್ಬಂದಿ ಶೇಖರ್, ರಾಜೇಶ್, ರಾಘವೇಂದ್ರ, ಯೋಗೇಶ್, ಮೋಹನ, ಸ್ವಾಮಿ ಮತ್ತು ಮಂಜುನಾಥ್, ದೇವಯ್ಯ, ನಂದ ಭಾಗವಹಿಸಿದ್ದರು.

ರಸ್ತೆಯಲ್ಲಿ ಮುರಿದು ಬಿದ್ದಿದ್ದ ಮರ ತೆರವು ವೇಳೆ

ವಿದ್ಯುತ್ ಪ್ರವಹಿಸಿ ಕಾರ್ಮಿಕ ಸಾವು

ಮಡಿಕೇರಿ, ಏ.3– ಕಾಫಿ ತೋಟದ ರಸ್ತೆಯಲ್ಲಿ ಮುರಿದು ಬಿದ್ದಿದ್ದ ಮರವನ್ನು ತೆರವು ಮಾಡುತ್ತಿದ್ದ ವೇಳೆ ಏಕಾಏಕಿ ವಿದ್ಯುತ್ ಪ್ರವಹಿಸಿ ಪಶ್ಚಿಮ ಬಂಗಾಳ ಮೂಲದ ಕಾರ್ಮಿಕ ಸ್ಥಳದಲ್ಲೇ ಮೃತಪಟ್ಟ ಘಟನೆ ಮಕ್ಕಂದೂರುವಿನ ಹೆಮ್ಮೆತ್ತಾಳು ಗ್ರಾಮದಲ್ಲಿ ನಡೆದಿದೆ. ಸುರೇಶ್ ಓರನ್(22) ಮೃತಪಟ್ಟಿರುವ ಕಾರ್ಮಿಕನಾಗಿದ್ದು, ಅಭಿನಾಶ್ ಸಣ್ಣ ಪ್ರಮಾಣದ ವಿದ್ಯುತ್ ಶಾಕ್‌ಗೆ ಒಳಗಾಗಿ ಪ್ರಾಣಾಪಾಯದಿಂದ ಪಾರಾಗಿದ್ದಾನೆ.

ಘಟನೆ ವಿವರ: ಏ.2ರ ಸಂಜೆ ವೇಳೆ ಮಕ್ಕಂದೂರು ವ್ಯಾಪ್ತಿಯಲ್ಲಿ ಭಾರೀ ಗಾಳಿ ಸಹಿತ ಕೆಲಕಾಲ ಮಳೆ ಸುರಿದಿತ್ತು. ಈ ವೇಳೆ ಹೆಮ್ಮೆತ್ತಾಳು ಗ್ರಾಮದ ಖಾಸಗಿ ಕಾಫಿ ತೋಟದ ರಸ್ತೆಯ ಪಕ್ಕದಲ್ಲೇ ಹಾದು ಹೋಗಿದ್ದ ವಿದ್ಯುತ್ ತಂತಿಗಳ ಸಮೀಪ ಮರವೊಂದು ಮುರಿದು ಬಿದ್ದಿತ್ತು. ಮಾತ್ರವಲ್ಲದೆ ಮರದ ಕೊಂಬೆಯೊಂದು ವಿದ್ಯುತ್ ತಂತಿಗಳಲ್ಲಿ ಜೋತಾಡುತ್ತಿತ್ತು. ಪಶ್ಚಿಮ ಬಂಗಾಳ ಮೂಲದ ಸುರೇಶ್ ಓರನ್ ಹಾಗೂ ಅಭಿನಾಶ್ ಮರವನ್ನು ತೆರವು ಮಾಡಲು ಮುಂದಾಗಿದ್ದರು. ಈ ಸಂದರ್ಭ ಏಕಾಏಕಿ ವಿದ್ಯುತ್ ಪ್ರವಹಿಸಿ, ಮರ ಕಡಿಯುತ್ತಿದ್ದ ಸುರೇಶ್ ಓರನ್ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಜೊತೆಯಲ್ಲಿದ್ದ ಅಭಿನಾಶ್ ವಿದ್ಯುತ್ ಸ್ಪರ್ಶದಿಂದ ಅಸ್ವಸ್ಥಗೊಂಡಿದ್ದು, ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ.

ಘಟನಾ ಸ್ಥಳಕ್ಕೆ ಮಡಿಕೇರಿ ಗ್ರಾಮಾಂತರ ಪೊಲೀಸರು, ಚೆಸ್ಕಾಂ ಇಲಾಖೆ ಸಿಬ್ಬಂದಿ ಆಗಮಿಸಿ ಪರಿಶೀಲಿಸಿದರು. ಘಟನೆ ಕುರಿತು ಮೃತ ಸುರೇಶನ ಪತ್ನಿ ಕಿರಣ್ ಎಕ್ಕ ಅವರು ದೂರು ನೀಡಿದ್ದು, ಮಡಿಕೇರಿ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪೊಲೀಸರು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಸ್ನಾನಕ್ಕೆ ನದಿಗೆ ಇಳಿದ ಯುವಕ ಕಾವೇರಿ ಪಾಲು

ಕುಶಾಲನಗರ, ಏ.3– ಯುಗಾದಿ ಹಬ್ಬದಂದು ಸ್ನಾನಕ್ಕೆ ಕಾವೇರಿ ನದಿಗೆ ಇಳಿದ ಯುವಕನೊಬ್ಬ ನೀರು ಪಾಲಾದ ಘಟನೆ ಶನಿವಾರ ಬೆಳಗ್ಗೆ ನಡೆದಿದೆ.

ಪಿರಿಯಾಪಟ್ಟಣ ತಾಲೂಕಿನ ಆವರ್ತಿ ಬಳಿಯ ಸುಂಕದಹಳ್ಳಿ ನಿವಾಸಿ ದರ್ಶನ್(19) ಮೃತ ಯುವಕ. ದರ್ಶನ್ ತನ್ನ ಇಬ್ಬರು ಸ್ನೇಹಿತರೊಂದಿಗೆ ಕುಶಾಲನಗರದ ಕಾಳಮ್ಮ ಕಾಲನಿ ಬಳಿಯ ವಿವೇಕಾನಂದ ಬಡಾವಣೆ ಸಮೀಪ ಕಾವೇರಿ ನದಿಗೆ ಸ್ನಾನಕ್ಕೆ ಆಗಮಿಸಿದ್ದಾನೆ. ಈಜು ಬಾರದ ಮೂವರು ಕೂಡ ನದಿಗಿಳಿದ ಸಂದರ್ಭ 25 ಅಡಿ ಆಳದ ಗುಂಡಿಗೆ ಸಿಲುಕಿದ್ದಾರೆ. ಯುವಕರ ಚೀರಾಟ ಕೇಳಿ ನದಿ ತಟದಲ್ಲಿ ಸ್ನಾನ ಮಾಡುತ್ತಿದ್ದ ಇಬ್ಬರು ಕಾಳಮ್ಮ ಕಾಲನಿಯ ಪ್ರತಾಪ್, ಸುನಿಲ್, ತೇಜು ಎಂಬ ಯುವಕರನ್ನು ರಕ್ಷಿಸಿದ್ದಾರೆ. ಮುಳುಗುತ್ತಿದ್ದ ಇಬ್ಬರು ಯುವಕರನ್ನು ರಕ್ಷಿಸಲಾಯಿತಾದರೂ ಅಷ್ಟರಲ್ಲಿ ದರ್ಶನ್ ನೀರಿನ ಆಳಕ್ಕೆ ಮುಳುಗಿದ ಕಾರಣ ರಕ್ಷಣೆ ಸಾಧ್ಯವಾಗಲಿಲ್ಲ. ಸ್ಥಳೀಯರ ಮಾಹಿತಿ ಮೇರೆಗೆ ಸ್ಥಳಕ್ಕಾಗಮಿಸಿದ ಕುಶಾಲನಗರ ಅಗ್ನಿಶಾಮಕ ಸಿಬ್ಬಂದಿ ಸ್ಥಳೀಯರ ನೆರವಿನಿಂದ ದರ್ಶನ್ ಮೃತದೇಹ ಹೊರತೆಗೆದು ಪೋಷಕರಿಗೆ ಒಪ್ಪಿಸಲಾಯಿತು.

ಹಾಡಹಗಲೇ ಕಾಡಾನೆ ಪ್ರತ್ಯಕ್ಷ: ಭಯಭೀತರಾದ ಕಾರ್ಮಿಕರು



ಸಿದ್ದಾಪುರ, ಏ.3– ಹಾಡಹಗಲೇ ಕಾಡಾನೆಯೊಂದು ಪ್ರತ್ಯಕ್ಷಗೊಂಡ ಹಿನ್ನೆಲೆಯಲ್ಲಿ ಕಾರ್ಮಿಕರು ಭಯಭೀತರಾಗಿ ದಿಕ್ಕಾಪಾಲಾಗಿ ಓಡಿದ ಘಟನೆ ಅಮ್ಮತ್ತಿ–ಪಾಲಿಬೆಟ್ಟ ಮುಖ್ಯರಸ್ತೆಯ ಹಂಚಿಕಾಡು ಬಳಿ ನಡೆದಿದೆ. ಕಾಫಿತೋಟದಲ್ಲಿ ಮಾರ್ಗದಲ್ಲಿ ಕಾಣಿಸಿಕೊಂಡ ಕಾಡಾನೆ ರಸ್ತೆ ದಾಟಲು ಮುಂದಾಗಿದ್ದ ವೇಳೆ ಲಾರಿಯಲ್ಲಿ ಮರದ ದಿಮ್ಮಿಗಳನ್ನು ತುಂಬುತ್ತಿದ್ದ ಕಾರ್ಮಿಕರು ಹಾಗೂ ತೋಟದ ಕಾರ್ಮಿಕರು ಕಾಡಾನೆಯನ್ನು ಕಂಡು ಭಯಭೀತರಾಗಿದ್ದಾರೆ. ರಸ್ತೆಬದಿಯಲ್ಲಿದ್ದ ಕಾರ್ಮಿಕರು ಹಾಗೂ ವಾಹನ ಸವಾರರು ನೋಡುತ್ತಿದ್ದಂತೆಯೇ ಏಕಾಏಕಿ ರಸ್ತೆಗೆ ಬಂದ ಕಾಡಾನೆ ಕೆಲಕಾಲ ಆತಂಕ ಸೃಷ್ಟಿಸಿತು.

ಬಳಿಕ ವಾಹನಗಳ ಹಾರನ್ ಶಬ್ದಕ್ಕೆ ಬೆಚ್ಚಿದ ಕಾಡಾನೆ ಕಾಫಿ ತೋಟದತ್ತ ನುಸುಳಿತು. ತೋಟದ ಕಾರ್ಮಿಕರಿಗೆ ಇತರ ಕಾರ್ಮಿಕರು ಆನೆ ಇರುವ ಬಗ್ಗೆ ಮಾಹಿತಿ ನೀಡಿದ ಸಂದರ್ಭ ಓಡಿ ಪಾರಾಗಿದ್ದಾರೆ. ರಸ್ತೆಯಲ್ಲಿ ಪ್ರತ್ಯಕ್ಷಗೊಂಡ ಕಾಡಾನೆಯ ವಿಡಿಯೋ ವೈರಲ್ ಆಗಿದೆ. ಪಾಲಿಬೆಟ್ಟ, ಅಮ್ಮತ್ತಿ, ಸಿದ್ದಾಪುರ, ಮಾಲ್ದಾರೆ ಸೇರಿದಂತೆ ಇತರ ಭಾಗಗಳಲ್ಲಿ ನಿರಂತರವಾಗಿ ಕಾಡುಪ್ರಾಣಿಗಳ ಹಾವಳಿ ಮಿತಿಮೀರಿದ್ದು ಶಾಶ್ವತವಾಗಿ ತಡೆಗಟ್ಟಬೇಕು ಎಂದು ಸ್ಥಳೀಯರು ಒತ್ತಾಯಿಸಿದ್ದಾರೆ.

ಯುಗಾದಿ ಫುಟ್ಬಾಲ್ ಪಂದ್ಯಾವಳಿಗೆ ಚಾಲನೆ



ಸೋಮವಾರಪೇಟೆ, ಏ.3–ಗೌಡಳ್ಳಿ ಹಿಂದು ಗೆಳೆಯರ ಬಳಗದಿಂದ ಗೌಡಳ್ಳಿ ಬಿ.ಜಿ.ಎಸ್. ಶಾಲಾ ಮೈದಾನದಲ್ಲಿ ಯುಗಾದಿ ಹಬ್ಬದ ಪ್ರಯುಕ್ತ ನಾಲ್ಕನೇ ವರ್ಷದ ಮುಕ್ತ ಫುಟ್ಬಾಲ್ ಪಂದ್ಯಾವಳಿಗೆ ಉದ್ಯಮಿ ಚಾಮೇರ ಪವನ್ ದೇವಯ್ಯ ಶನಿವಾರ ಚಾಲನೆ ನೀಡಿದರು.

ಅದ್ಧೂರಿಯಾಗಿ ಹಮ್ಮಿಕೊಂಡಿರುವ ಪಂದ್ಯಾವಳಿಯಲ್ಲಿ 16 ತಂಡಗಳು ಭಾಗವಹಿಸಿದ್ದವು. ಗ್ರಾಮೀಣ ಜನರು ಯುಗಾದಿ ಹಬ್ಬದ ದಿನದಂದು ಫುಟ್ಬಾಲ್ ಆಟವನ್ನು ಕಣ್ತುಂಬಿಕೊಂಡು ಸಂಭ್ರಮಿಸಿದರು. ಈ ಸಂದರ್ಭದಲ್ಲಿ ಗೌಡಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಕೆ.ಕೆ.ಸುಮಾ, ಬಳಗದ ಅಧ್ಯಕ್ಷ ಜಿ.ಎಸ್.ನಾಗರಾಜು, ಕಾರ್ಯಾಧ್ಯಕ್ಷ ಸುನಿಲ್ ಗೌಡಳ್ಳಿ, ಕಾರ್ಯದರ್ಶಿ ಅಜ್ಜಳ್ಳಿ ನವೀನ್, ಖಜಾಂಚಿ ಹೆಚ್.ಎಂ.ಜಿತೇಂದ್ರ, ಉಪಾಧ್ಯಕ್ಷ ಡಿ.ಬಿ.ಲೋಕೇಶ್ ಇದ್ದರು.



ಗುಡ್ಡೆಹೊಸೂರು ಸಮೀಪದ ಬೊಳ್ಳೂರು ಗ್ರಾಮಕ್ಕೆ ಸೇರಿದ ಸುಣ್ಣದಕೆರೆಯ ಶ್ರೀಚಾಮುಂಡೇಶ್ವರಿ ತಾಯಿಯ ವಾರ್ಷಿಕ ಮಹಾಪೂಜೆಯು ವಿಜೃಂಭಣೆಯಿಂದ ಜರುಗಿತು. ಪೂಜಾ ಕಾರ್ಯದಲ್ಲಿ ಗ್ರಾಮಸ್ಥರು ಮತ್ತು ದೇವಸ್ಥಾನ ಸಮಿತಿ ಸದಸ್ಯರು ಹಾಜರಿದ್ದರು.

ಶ್ರೀ ಮಲೆ ಮಹದೇಶ್ವರ ದೇಗುಲದಲ್ಲಿ ಅಷ್ಟಬಂಧ ಬ್ರಹ್ಮಕಲಶೋತ್ಸವ



ವಿರಾಜಪೇಟೆ, ಏ.3– ವಿರಾಜಪೇಟೆಯ ಮಲೆತಿರಿಕೆಬೆಟ್ಟದ ಶ್ರೀ ಮಲೆಮಹದೇಶ್ವರ ದೇವಾಲಯದಲ್ಲಿ ಭಾನುವಾರದಿಂದ ಆರಂಭಗೊಂಡಿರುವ ದೇವರ ಅಷ್ಟಬಂಧ ಬ್ರಹ್ಮಕಲಶೋತ್ಸವವು ಏ.7ರ ಗುರುವಾರದ ವರೆಗೆ ನಡೆಯಲಿದೆ.


'ಮಲೆಮಹದೇಶ್ವರ ದೇವರ ಅಷ್ಟಬಂಧ ಬ್ರಹ್ಮಕಲಶೋತ್ಸವ'ವನ್ನು ವೇದಮೂರ್ತಿ ಎ.ಜಿ.ಪಂಡರೀಶ ಅರಳಿತ್ತಾಯ ತಂತ್ರಿಗಳ ನೇತೃತ್ವದಲ್ಲಿ ನಡೆಸಲಾಗುತ್ತಿದೆ. ಭಾನುವಾರ ಸಂಜೆ ಬಂಢಾರ ಬಂದಿದ್ದು, ಏ.4ರಂದು ಪ್ರಾತಃಕಾಲ 7ಗಂಟೆಗೆ ಗಣಪತಿಹೋಮ, ಮೃತ್ಯುಂಜಯ ಹೋಮ, ಕಲಶಾಭಿಷೇಕ ಜರುಗಲಿದೆ. ಏ.5ರಂದು ಮಹಾರುದ್ರಹೋಮ, ಮಹಾಪೂಜೆ, ನಂತರ ದುರ್ಗಾಪೂಜೆ, ತಂತ್ರಿಗಳ ಪರಿಗ್ರಹಣ ಸಾಮೂಹಿಕ ಪ್ರಾರ್ಥನೆ ಸೇರಿದಂತೆ ವಿವಿಧ ಪೂಜಾ ಕಾರ್ಯಕ್ರಮ ನಡೆಯಲಿದೆ. ಏ.6ರಂದು ಕಲಾತತ್ವನ್ಯಾಸ ಹೋಮ, ಕಲಾಶಾರಾಧನೆ, ಕಲಶಾಭಿಷೇಕ, ಅಷ್ಟಬಂಧ ಲೇಪನ ಮಹಾಪೂಜೆ ಸಂಜೆ ದೇವರ ನರ್ತನ ನಡೆಯಲಿದೆ. ಉತ್ಸವದಲ್ಲಿ ಅನ್ನಸಂತರ್ಪಣೆ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ದೇವಾಲಯದ ತಕ್ಕ ಮುಖ್ಯಸ್ಥ ಕೊಳುವಂಡ ಕಾರ್ಯಪ್ಪ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಈ ಸಂದರ್ಭದಲ್ಲಿ ದೇಗುಲ ಆಡಳಿತ ಮಂಡಳಿ ಅಧ್ಯಕ್ಷ ಶಂಕರಿ ಪೂವಯ್ಯ, ಕಾರ್ಯದರ್ಶಿ ಬೊಳ್ಳಚಂಡ ಪ್ರಕಾಶ್, ಸಹಕಾರ್ಯದರ್ಶಿ ಚೋಕಂಡ ರಮೇಶ್, ಖಜಾಂಚಿ ಚಾರಿಮಂಡ ಗಣಪತಿ ಹಾಗೂ ಆಡಳಿತ ಮಂಡಳಿ ಸದಸ್ಯರಿದ್ದರು.

ಅಪೆಕ್ಸ್ ಬ್ಯಾಂಕ್ ಜಿ.ಎಂ ಆಗಿ ಮಣವಟ್ಟೀರ ಬೆಳ್ಯಪ್ಪ ನೇಮಕ



ನಾಪೋಕ್ಲು, ಏ.3– ಕರ್ನಾಟಕ ಅಪೆಕ್ಸ್ ಬ್ಯಾಂಕ್ ಜನರಲ್ ಮ್ಯಾನೇಜರ್ ಆಗಿ ಮಣವಟ್ಟೀರ ಬೆಳ್ಯಪ್ಪ(ಜಯ)ನೇಮಕಗೊಂಡಿದ್ದಾರೆ. ಕೊಡಗು ಜಿಲ್ಲೆಯ ನೆಲಜಿ ಗ್ರಾಮದವರಾದ ಇವರು ಉನ್ನತ ಹುದ್ದೆಗೇರಿ ಕೊಡಗಿಗೆ ಕೀರ್ತಿ ತಂದಿದ್ದಾರೆ.

'ಪೊಮ್ಮಾಲೆ ಕೊಡಗ್' ಕೊಡವ ಚಲನಚಿತ್ರದ ಪೋಸ್ಟರ್ ಬಿಡುಗಡೆ



ಮಡಿಕೇರಿ,ಏ.3– ಭಾಷೆ ಮತ್ತು ಸಂಸ್ಕೃತಿಗೆ ಪೂರಕವಾಗಿರುವ ಕೊಡವ ಚಲನಚಿತ್ರಗಳನ್ನು ಪ್ರತಿಯೊಬ್ಬರೂ ವೀಕ್ಷಿಸುವ ಮೂಲಕ ಪ್ರೋತ್ಸಾಹ ನೀಡಬೇಕೆಂದು ವಿಧಾನ ಪರಿಷತ್ ಸದಸ್ಯ ಎಂ.ಪಿ.ಸುಜಾ ಕುಶಾಲಪ್ಪ ಕರೆ ನೀಡಿದರು.

ನಗರದ ಪತ್ರಿಕಾ ಭವನದಲ್ಲಿ ಕೊಡವ ಮಕ್ಕಡ ಕೂಟ ಅರ್ಪಿಸುವ ಸ್ಟಿಕ್ ಎಂಟರ್‌ಟೈನ್‌ಮೆಂಟ್ ಬ್ಯಾನರಡಿಯಲ್ಲಿ ನಿರ್ಮಾಣವಾಗಿರುವ ನಿರ್ದೇಶಕ ಕೊಟ್ಟುಕತ್ತಿರ ಪ್ರಕಾಶ್ ಕಾರ್ಯಪ್ಪ ಅವರ 'ವಿಧಿರ ಕಳಿಲ್' ಕಾದಂಬರಿ ಆಧಾರಿತ 'ಪೊಮ್ಮಾಲೆ ಕೊಡಗ್' ಕೊಡವ ಚಲನಚಿತ್ರದ ಫಸ್ಟ್ ಲುಕ್ ಹಾಗೂ ಪೋಸ್ಟರ್ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಕೊಡವ ಚಲನಚಿತ್ರಗಳ ನಿರ್ಮಾಣದ ಮೂಲಕ ಕೊಡವ ಭಾಷೆ, ಸಂಸ್ಕೃತಿ, ಆಚಾರ, ವಿಚಾರಗಳನ್ನು ಪ್ರೋತ್ಸಾಹಿಸುತ್ತಿರುವುದು ಶ್ಲಾಘನೀಯ. ಒಂದು ಪ್ರದೇಶಕ್ಕೆ ಸೀಮಿತವಾಗಿರುವ ಪುಟ್ಟ ಭಾಷೆಯ ಚಿತ್ರವನ್ನು ನಿರ್ಮಿಸಲು ಹೆಚ್ಚು ಪರಿಶ್ರಮ ಬೇಕಾಗುತ್ತದೆ. ಇದಕ್ಕೆ ತಕ್ಕ ಪ್ರತಿಫಲ ಸಿಗಬೇಕಾದರೆ ಎಲ್ಲರೂ ಸಿನಿಮಾವನ್ನು ನೋಡಬೇಕು ಎಂದರು. ಕೊಡಗಿನವರು ಮಾತ್ರವಲ್ಲದೆ ಹೊರ ಜಿಲ್ಲೆ, ರಾಜ್ಯದ ಮಂದಿ ಕೂಡ ಕೊಡವ ಚಿತ್ರವನ್ನು ವೀಕ್ಷಿಸಿ ಪ್ರೋತ್ಸಾಹಿಸಬೇಕು ಮತ್ತು ಸಹಕಾರ ನೀಡಬೇಕು ಎಂದು ಸುಜಾ ಕುಶಾಲಪ್ಪ ತಿಳಿಸಿದರು. 'ಪೊಮ್ಮಾಲೆ ಕೊಡಗ್' ಚಿತ್ರದ ನಿರ್ದೇಶಕ ಕೊಟ್ಟುಕತ್ತಿರ ಪ್ರಕಾಶ್ ಕಾರ್ಯಪ್ಪ ಮಾತನಾಡಿ, ತಮ್ಮ ಹೋಂ ಬ್ಯಾನರ್‌ನಡಿ ನಿರ್ಮಾಣಗೊಂಡಿರುವ 4ನೇ ಚಿತ್ರ ಇದಾಗಿದ್ದು, ಕನಿಷ್ಠ 20 ಸಾವಿರ ಮಂದಿ ಚಿತ್ರ ವೀಕ್ಷಿಸಿದರೆ ಮುಂದಿನ ಚಿತ್ರ ನಿರ್ಮಾಣಕ್ಕೆ ಸ್ಫೂರ್ತಿ ದೊರೆತಂತಾಗುತ್ತದೆ ಎಂದರು.

ಮೂರು ಕ್ಯಾಮೆರಾಗಳನ್ನು ಬಳಸಿ 'ಪೊಮ್ಮಾಲೆ ಕೊಡಗ್' ಅನ್ನು ಚಿತ್ರೀಕರಿಸಲಾಗಿದ್ದು, ಚಿತ್ರೀಕರಣದ ಸಂದರ್ಭವೇ ಧ್ವನಿ ಮುದ್ರಣವಾಗಿದೆ. ಕೊಡವ ಚಲನಚಿತ್ರ ರಂಗದಲ್ಲೇ ಇದು ಮೊದಲ ಮತ್ತು ವಿನೂತನ ಪ್ರಯತ್ನವಾಗಿದ್ದು, ಚಿತ್ರ ಹೊಸತನದಿಂದ ಕೂಡಿದೆ. ಅಮ್ಮಾಟಂಡ ಕುಟುಂಬದವರು ಐನ್‌ಮನೆಯಲ್ಲಿ ಚಿತ್ರೀಕರಣ ಮಾಡಲು ಸಂಪೂರ್ಣ ಸಹಕಾರ ನೀಡಿದ್ದಾರೆ. ಅವರೆಲ್ಲರಿಗೂ ಕೃತಜ್ಞತೆ ಸಲ್ಲಿಸುವುದಾಗಿ ಪ್ರಕಾಶ್ ಕಾರ್ಯಪ್ಪ ತಿಳಿಸಿದರು.

ಚಿತ್ರದ ನಿರ್ಮಾಪಕಿ ಕೊಟ್ಟುಕತ್ತಿರ ಯಶೋಧ ಪ್ರಕಾಶ್, ಚಿತ್ರದ ಕುರಿತು ನಾಯಕಿ ತೀತಿರ ತನುಜ, ನಟ ಹಾಗೂ ಉದ್ಯಮಿ ಗುಮ್ಮಟ್ಟೀರ ಕಿಶು ಉತ್ತಪ್ಪ ಕಾರ್ಯಕಾರಿ ನಿರ್ಮಾಪಕ ಹಾಗೂ ಕೊಡವ ಮಕ್ಕಡ ಕೂಟದ ಅಧ್ಯಕ್ಷ ಬೊಳ್ಳಜಿರ ಬಿ.ಅಯ್ಯಪ್ಪ ಇತರರು ಈ ಸಂದರ್ಭದಲ್ಲಿದ್ದರು.

ಪ್ರಾಮಾಣಿಕತೆ ಇದ್ದಲ್ಲಿ ಉತ್ತಮ ಸೇವೆ ಸಾಧ್ಯ



ಮಡಿಕೇರಿ, ಏ.3–ಸಿಬ್ಬಂದಿಯೊಂದಿಗೆ ಉತ್ತಮ ಬಾಂಧವ್ಯ, ನಿಷ್ಠೆ, ಬದ್ಧತೆ, ಪ್ರಾಮಾಣಿಕತೆ ಇದ್ದಲ್ಲಿ ಪೊಲೀಸ್ ಇಲಾಖೆಯಲ್ಲಿ ಉತ್ತಮ ಸೇವೆ ಸಲ್ಲಿಸಬಹುದು ಎಂದು ನಿವೃತ್ತ ಮಹಿಳಾ ಎಎಸ್‌ಐ ಮೇರಿ ಇಮಾಕ್ಯುಲೇಟ್.ಎ ಅಭಿಪ್ರಾಯಪಟ್ಟರು.

ಜಿಲ್ಲಾ ಪೊಲೀಸ್ ಕವಾಯತು ಮೈದಾನದಲ್ಲಿ ಕೊಡಗು ಜಿಲ್ಲಾ ಪೊಲೀಸ್ ವಿಭಾಗದಿಂದ ಹಮ್ಮಿಕೊಂಡಿದ್ದ ಕರ್ನಾಟಕ ರಾಜ್ಯ ಪೊಲೀಸ್ ಧ್ವಜ ದಿನಾಚರಣೆ ಹಾಗೂ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಟ್ರೋಫಿ ವಿತರಣಾ ಕಾರ್ಯಕ್ರಮದಲ್ಲಿ ಅವರು, ಪಥಸಂಚಲನ ಪರಿವೀಕ್ಷಣೆ ಮಾಡಿ ಗೌರವ ವಂದನೆ ಸ್ವೀಕರಿಸಿ ಮಾತನಾಡಿದರು.

ಪೊಲೀಸರು ಪ್ರತಿನಿತ್ಯ ಸಾರ್ವಜನಿಕರೊಂದಿಗೆ ಉತ್ತಮ ಸಂಪರ್ಕ ಸಾಧಿಸಬೇಕು. ಸಾರ್ವಜನಿಕ ಸೇವೆಯೇ ಪ್ರಮುಖ ಎಂಬುದನ್ನು ಅರಿತುಕೊಂಡು ಕಾರ್ಯನಿರ್ವಹಿಸಬೇಕು. ಶಿಸ್ತಿನ ಇಲಾಖೆಯಲ್ಲಿ ಆದಷ್ಟು ಮುಂಜಾಗೃತೆ ವಹಿಸಿ ತಪ್ಪು ಆಗದಂತೆ ನೋಡಿಕೊಳ್ಳುವುದು ಅಗತ್ಯ ಎಂದರು. ಪೊಲೀಸ್ ಇಲಾಖೆ ಸಾರ್ವಜನಿಕರ ರಕ್ಷಣೆ, ಕಾನೂನು ಸುವ್ಯವಸ್ಥೆ ಪಾಲನೆಯ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸಿಕೊಂಡು ಬಂದಿದೆ. ಸೇವೆಗೆ ಸೇರಿದ ಅಧಿಕಾರಿಗಳು ಹಾಗೂ ಸಿಬ್ಬಂದಿ ಒತ್ತಡದಿಂದ ಕಾರ್ಯ ನಿರ್ವಹಿಸಬೇಕಾಗಿರುತ್ತದೆ. ಇದರಿಂದ ಆರೋಗ್ಯ ಸಮಸ್ಯೆಗಳಿಗೆ ಬೇಗನೆ ಒಳಗಾಗುವ ಸಂಭವವಿರುತ್ತದೆ ಆ ನಿಟ್ಟಿನಲ್ಲಿ ಪ್ರತಿ ವರ್ಷ ಪೊಲೀಸ್ ಇಲಾಖೆಯಿಂದ ನಡೆಸುವ ಆರೋಗ್ಯ ಶಿಬಿರದಲ್ಲಿ ಪಾಲ್ಗೊಂಡು ಆರೋಗ್ಯ ತಪಾಸಣೆ ಮಾಡಿಸಿ ಕೊಳ್ಳುವಂತೆ ಸಲಹೆ ನೀಡಿದರು.

ಡಿಸಿಆರ್‌ಬಿ ವಿಭಾಗದ ಪೊಲೀಸ್ ಪೇದೆ ಎಂ.ಎನ್.ನಿರಂಜನ್ ಅವರಿಗೆ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಟ್ರೋಫಿ ವಿತರಿಸಿ ಮಾತನಾಡಿದ ಏರ್ ಮಾರ್ಷಲ್ (ನಿವೃತ್ತ) ಕೆ.ಸಿ.ಕಾರ್ಯಪ್ಪ ಅವರು, ಪೊಲೀಸ್ ಇಲಾಖೆಯ ಸೇವೆ ಶ್ಲಾಘನೀಯ. ಆ ನಿಟ್ಟಿನಲ್ಲಿ ಸಮಾಜಮುಖಿಯಾಗಿ ಪೊಲೀಸರು ಕರ್ತವ್ಯ ನಿರ್ವಹಿಸಬೇಕು ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಎ. ಅಯ್ಯಪ್ಪ ಮಾತನಾಡಿ, ಪೊಲೀಸರು ಜನಸೇವೆಗೆ ಅರ್ಪಣಾ ಮನೋಭಾವದಿಂದ ದುಡಿಯುತ್ತಾರೆ. ಈ ವೃತ್ತಿಯಲ್ಲಿ ಶಿಸ್ತು ಕರ್ತವ್ಯ ನಿಷ್ಠೆ ಕಾಣಬಹುದಾಗಿದೆ. ಪೊಲೀಸರು ನಿಷ್ಪಕ್ಷಪಾತವಾಗಿ ಕಾರ್ಯ ನಿರ್ವಹಿಸಲು ಸಾರ್ವಜನಿಕರ ಸಹಕಾರ ಅತ್ಯಗತ್ಯ ಎಂದು ಹೇಳಿದರು.

ಉತ್ತಮ ಸೇವೆ ಸಲ್ಲಿಸಿದ ಪೊಲೀಸರನ್ನು ಸನ್ಮಾನಿಸಲಾಯಿತು. ಆರ್‌ಪಿಐ ಚೆನ್ನನಾಯಕ್ ಪಥಸಂಚಲನದ ನೇತೃತ್ವ ವಹಿಸಿದ್ದರು. ನಿವೃತ್ತ ಡಿಸಿಪಿ ಪೂಣಚ್ಚ, ನಿವೃತ್ತ ಪೊಲೀಸ್ ಅಧೀಕ್ಷಕರಾದ ಎ.ಕೆ.ಸುರೇಶ್, ಉಪ ಪೊಲೀಸ್ ವರಿಷ್ಠಾಧಿಕಾರಿಗಳಾದ ಗಜೇಂದ್ರ ಪ್ರಸಾದ, ಜಯಕುಮಾರ, ಶೈಲೇಂದ್ರ, ನಿವೃತ್ತ ಪೊಲೀಸ್ ಅಧಿಕಾರಿಗಳು, ಸಿಬ್ಬಂದಿ ಇತರರಿದ್ದರು.

ಗೋ ಮಾಂಸ ಸಾಗಣೆ

ಇಬ್ಬರು ಅಸ್ಸಾಂ ಕಾರ್ಮಿಕರ ಸೆರೆ

ಮಡಿಕೇರಿ,ಏ.3– ಅಕ್ರಮವಾಗಿ ಗೋ ಮಾಂಸ ಸಾಗಿಸುತ್ತಿದ್ದ ಇಬ್ಬರು ಅಸ್ಸಾಂ ಕಾರ್ಮಿಕರನ್ನು ಬಜರಂಗ ದಳದ ಕಾರ್ಯಕರ್ತರು ಹಿಡಿದು ಪೊಲೀಸರಿಗೆ ಒಪ್ಪಿಸಿದ ಘಟನೆ ಮಾಲಂಬಿಯಲ್ಲಿ ನಡೆದಿದೆ.

ಹಾಸನ ಜಿಲ್ಲೆಯ ಅರಕಲಗೂಡು ತಾಲೂಕಿನ ಹಂಡ್ರಂಗಿ ಸಮೀಪದ ಗೋರಿಯಿಂದ ಮಡಿಕೇರಿಯ ಮಾಲಂಬಿ ಕಣಿವೆ ಬಸವನಹಳ್ಳಿ ಲೈನ್‌ಮನೆಗೆ ಬೈಕ್‌ನಲ್ಲಿ ಅಕ್ರಮವಾಗಿ ಗೋ ಮಾಂಸ ತರುತ್ತಿದ್ದಾಗ ಬಜರಂಗ ದಳದ ಕಾರ್ಯಕರ್ತರು ಮಾಲಂಬಿ ಹೊಸಳ್ಳಿ ಬಳಿ ಕಾರ್ಮಿಕರನ್ನು ತಡೆದು ಪರಿಶೀಲನೆ ನಡೆಸಿದ್ದಾರೆ. ಈ ಸಂದರ್ಭ ಅಸ್ಸಾಂ ಕಾರ್ಮಿಕರ ಬಳಿ ಗೋ ಮಾಂಸ ಇರುವುದು ಪತ್ತೆಯಾಗಿದೆ. ಬಳಿಕ ಆರೋಪಿಗಳನ್ನು ಪೊಲೀಸರಿಗೆ ಒಪ್ಪಿಸಿದ್ದಾರೆ. ಘಟನೆ ಕುರಿತು ಶನಿವಾರಸಂತೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಎಸ್. ರಾಜು ನಿಧನ



ಮಡಿಕೇರಿ, ಏ.3– ಮಡಿಕೇರಿ ವಿದ್ಯಾನಗರ ನಿವಾಸಿ, ಪೊಲೀಸ್ ಇಲಾಖೆಯಲ್ಲಿ ಎಎಸ್‌ಐ(ವೈರ್‌ಲೆಸ್ ವಿಭಾಗ) ಆಗಿ ಚಿಕ್ಕಬಳ್ಳಾಪುರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಎಸ್.ರಾಜು(35) ಭಾನುವಾರ ನಿಧನರಾದರು. ಮೃತರು, ಪತ್ನಿ, ಪುತ್ರಿ–ಪುತ್ರ, ತಂದೆ–ತಾಯಿ ಹಾಗೂ ಓರ್ವ ಸಹೋದರ ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ಅಂತ್ಯಕ್ರಿಯೆ ನಗರದ ಚೈನ್‌ಗೇಟ್‌ನಲ್ಲಿರುವ ಹಿಂದೂ ರುದ್ರಭೂಮಿಯಲ್ಲಿ ಭಾನುವಾರ ನೆರವೇರಿಸಲಾಯಿತು.

ಮೈಸೂರು ಮಿತ್ರ ವಿಳಾಸ: ನಂದಿನಿ ಗ್ರಾಫಿಕ್ಸ್, ಸಿ.ಹೆಚ್.ಆರ್ ಕಾಂಪ್ಲೆಕ್ಸ್, ಜೋಡಿ ರಸ್ತೆ, ಚಾಮರಾಜನಗರ-571313. ಫ್ಯಾಕ್ಸ್: 08226-222608, ಮೊ. 9242265657 E-mail:chamarajanagar@mysurumithra.com

ಉಘೇ... ಉಘೇ... ಮಾದಪ್ಪ



■ ಮಲೆ ಮಹದೇಶ್ವರ ಬೆಟ್ಟದಲ್ಲಿ ಯುಗಾದಿಯ ಅದ್ದೂರಿ ಮಹಾರಥೋತ್ಸವ ■ ಲಕ್ಷಾಂತರ ಭಕ್ತರಿಂದ ಮಾದಪ್ಪನ ದರ್ಶನ, ರಥಕ್ಕೆ ದವಸ, ಧಾನ್ಯ, ಹಣ್ಣು, ಧವನ ಸಲ್ಲಿಸಿ ಭಕ್ತಿ ಸಮರ್ಪಣೆ

ಹನೂರು, ಏ.3(ಸೋಮು)- ತಾಲೂಕಿನ ಪ್ರಸಿದ್ಧ ಯಾತ್ರಾ ಕ್ಷೇತ್ರವಾದ ಶ್ರೀ ಮಲೆ ಮಹದೇಶ್ವರ ಬೆಟ್ಟದಲ್ಲಿ ಏ.2ರಂದು ಚಾಂದ್ರಮಾನ ಯುಗಾದಿ ಪ್ರಯುಕ್ತ ಮಹಾ ರಥೋತ್ಸವ ಉಘೇ... ಉಘೇ.. ಮಾದಪ್ಪ ಎಂಬ ಭಕ್ತರ ಉದ್ಘೋಷದೊಂದಿಗೆ ನಡೆಯಿತು.

ಯುಗಾದಿ ದಿನವಾದ ಶನಿವಾರ ಬೆಳಗ್ಗೆ 7.30 ರಿಂದ 9ರವರೆಗೆ ನಡೆದ ಮಹಾ ರಥೋತ್ಸವದಲ್ಲಿ ರಾಜ್ಯದ ನಾನಾ ಕಡೆ ಹಾಗೂ ತಮಿಳುನಾಡಿನ ಸೇಲಂ, ಈರೋಡ್‌ನಿಂದ ಸಹಸ್ರಾರು ಭಕ್ತರು ಪಾಲ್ಗೊಂಡು ಭಕ್ತಿ ಸಮರ್ಪಿಸಿದರು. ನಾಲ್ಕು ದಿನ ನಡೆದ ಯುಗಾದಿ ಜಾತ್ರೆಯಲ್ಲಿ ಲಕ್ಷಾಂತರ ಭಕ್ತರು ಪಾಲ್ಗೊಂಡಿದ್ದರು.

ಮರುಕಳುಹಿಸಿದ ಸಂಭ್ರಮ: ಕಳೆದೆರಡು ವರ್ಷಗಳಿಂದ ಕೊರೊನಾ ಕಾರಣದಿಂದ ಯುಗಾದಿ ಮಹಾರಥೋತ್ಸವದಲ್ಲಿ ಭಕ್ತರಿಗೆ ಅವಕಾಶ ಕಲ್ಪಿಸಲಾಗದ ಹಿನ್ನಲೆಯಲ್ಲಿ ಕಳೆಗುಂದಿತು. ಈ ವರ್ಷ ಭಕ್ತರಿಗೆ ಅವಕಾಶ ಕಲ್ಪಿಸಿರುವ ಹಿನ್ನೆಲೆಯಲ್ಲಿ ನೂತನ ವರುಷ ಯುಗಾದಿ ಮಹಾರಥೋತ್ಸವದಲ್ಲಿ ಲಕ್ಷಾಂತರ ಭಕ್ತರು ಜಮಾವಣೆಗೊಂಡು ತಮ್ಮ ಆರಾಧ್ಯ ದೈವ ಮಲೆ ಮಾದಪ್ಪನ ಸ್ಮರಣೆ ಮಾಡಿದರು.

ಬೆಳಗ್ಗೆ 4 ಗಂಟೆಯಿಂದ ಸಾಲೂರು ಮಠದ ಪೀಠಾಧಿಪತಿಗಳಾದ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ ಮಾರ್ಗ ದರ್ಶನದಲ್ಲಿ ವಿಶೇಷ ಪೂಜೆ, ಅಭಿಷೇಕ, ನೈವೇದ್ಯ ಹಾಗೂ ಮಹಾ ಮಂಗಳಾರತಿ ನಡೆಯಿತು. ನಂತರ ಉತ್ಸವ ಮೂರ್ತಿಗೆ ವಿಶೇಷ ಪೂಜೆ ಹಾಗೂ ಅಲಂಕಾರ ಮಾಡಿ ದೇವಸ್ಥಾನದ ಒಳ ಪ್ರಾಕಾರದಲ್ಲಿ ಮೆರವಣಿಗೆ ನಡೆಸಲಾಯಿತು. ಮೆರವಣಿಗೆಯಲ್ಲಿ ನಂದಿ ಧ್ವಜ, ವೀರಗಾಸೆ, ಕಂಸಾಳೆ ಕಲಾವಿದರು ಪಾಲ್ಗೊಂಡಿದ್ದರು.

ನಂತರ ಉತ್ಸವ ಮೂರ್ತಿಯನ್ನು ರಥದಲ್ಲಿ ಪ್ರತಿಷ್ಠಾಪಿಸಿ ಪೂಜೆ ಸಲ್ಲಿಸಲಾಯಿತು. ನಿರ್ವಿಘ್ನವಾಗಿ ನಡೆಯಲಿ ಎಂದು ರಥಕ್ಕೆ ಬೂದು ಕುಂಬಳ ಕಾಯಿ ನಿವಾಳಿಸಿ ಒಡೆಯುತ್ತಿದ್ದಂತೆ ಉತ್ಸವ ಪ್ರಾರಂಭಗೊಂಡಿತು. ರಥೋತ್ಸವ ವೇಳೆ ಭಕ್ತರು ದವಸ, ಧಾನ್ಯ, ಹಣ್ಣು, ಧವನ ಸಲ್ಲಿಸಿ ಭಕ್ತಿ ಸಮರ್ಪಿಸಿದರು.

ಹುಲಿ, ಬಸವ ವಾಹನ, ರುದ್ರಾಕ್ಷಿ ಮಂಟಪಗಳು ಪಾಲ್ಗೊಂಡಿದ್ದವು. ಬೇಡಗಂಪಣ ಹೆಣ್ಣು ಮಕ್ಕಳು ಆರತಿ ಬೆಳಗಿಸಿದರು. ವೀರಗಾಸೆ ಮತ್ತಿತರ ಕಲಾ ತಂಡಗಳು ಉತ್ಸವಕ್ಕೆ ವಿಶೇಷ ಮೆರುಗು ನೀಡಿದವು.

ಸ್ನಾನ ಘಟ್ಟದಲ್ಲಿ ಮಿಂದೆದ್ದ ಭಕ್ತಗಣ: ಮಲೆಮಹದೇಶ್ವರ ಬೆಟ್ಟಕ್ಕೆ ಬರುವ ಹರಕೆ ಹೊತ್ತ ಭಕ್ತರು ಮುಡಿ ಸೇವೆ ಸಲ್ಲಿಸಿ ನಂತರ ನೂತನ ಸ್ನಾನ ಘಟ್ಟದಲ್ಲಿ ಮಿಂದೆದ್ದು, ಮಡಿವಂತಿಕೆಯಿಂದ ಮಾದೇಶ್ವರ ಸ್ವಾಮಿಯ ದರ್ಶನ ಪಡೆದರು.

ಬಿಗಿ ಪೊಲೀಸ್ ಬಂದೋಬಸ್ತ್: ಕೋವಿಡ್ ಕಾರಣದಿಂದ ಕಳೆದೆರಡು ವರ್ಷಗಳಿಂದ ಭಕ್ತರಿಗೆ ಅವಕಾಶ ಕಲ್ಪಿಸಿರಲಿಲ್ಲ. ಈ ಬಾರಿ ಅವಕಾಶ ಕಲ್ಪಿಸದ ಹಿನ್ನೆಲೆಯಲ್ಲಿ ಲಕ್ಷಾಂತರ ಭಕ್ತರ ಆಗಮನದ ಕಾರಣ ಬಿಗಿ ಪೊಲೀಸ್ ಬಂದೂಬಸ್ತ್ ವ್ಯವಸ್ಥೆಯನ್ನು ಕಲ್ಪಿಸಿದ್ದು ಕಂಡು ಬಂದಿತು. ಯಾವುದೇ ಅಹಿತಕರ ಘಟನೆಗಳು ಸಂಭವಿಸದಂತೆ ಮುಂಜಾಗ್ರತಾ ಕ್ರಮವಾಗಿ ಪೊಲೀಸ್ ಇಲಾಖೆ ದೇವಸ್ಥಾನ, ಲಾಡು ಕೌಂಟರ್, ರಥೋತ್ಸವ ನಡೆಯುವ ಸ್ಥಳಗಳಲ್ಲಿ ಹೆಚ್ಚಿನ ಸಿಬ್ಬಂದಿಗಳನ್ನು ನಿಯೋಜಿಸಲಾಗಿತ್ತು.

ರಾಜ್ಯದ ಪ್ರಸಿದ್ಧ ಧಾರ್ಮಿಕ ಕ್ಷೇತ್ರ ಮಲೈ ಮಹದೇಶ್ವರ ಬೆಟ್ಟದಲ್ಲಿ ಕಳೆದ ನಾಲ್ಕು ದಿನಗಳಿಂದ ನಡೆದ ಜಾತ್ರಾ ಮಹೋತ್ಸವಕ್ಕೆ ರಾತ್ರಿ ನಡೆದ ತೆಪ್ಪೋತ್ಸವದ ಮೂಲಕ ತೆರೆ ಬಿತ್ತು. ಲಕ್ಷಾಂತರ ಭಕ್ತರು ಭಕ್ತಿ ಭಾವಗಳಿಂದ ನಮಿಸಿ ಮಾದಪ್ಪನ ರಥೋತ್ಸವವನ್ನು ಕಣ್ತುಂಬಿಕೊಂಡರು. ಭಕ್ತರು ಸರತಿ ಸಾಲಿನಲ್ಲಿ ಸಾಗಿ ಮಾದಪ್ಪನ ದರ್ಶನ ಪಡೆದರು. ಮಲೆ ಮಹದೇಶ್ವರ ಸ್ವಾಮಿ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಜಯವಿಭವ ಸ್ವಾಮಿ ಅವರ ನೇತೃತ್ವದಲ್ಲಿ ಜಾತ್ರಾ ಮಹೋತ್ಸವಕ್ಕೆ ಸಕಲ ಸಿದ್ಧತೆ ಮಾಡಲಾಗಿತ್ತು.

ವಿದ್ಯುತ್ ದೀಪಾಲಂಕಾರ: ಯುಗಾದಿ ಹಬ್ಬದ ಪ್ರಯುಕ್ತ ನಾಲ್ಕು ದಿನಗಳು ನಡೆಯುವ ಜಾತ್ರೆಗೆ ಪ್ರಾಧಿಕಾರದ ವತಿಯಿಂದ ರಾಜಗೋಪುರ, ಮುಖ್ಯದ್ವಾರ ಹಾಗೂ ವಿವಿಧ ದ್ವಾರಗಳಿಗೆ ತಳಿರು ತೋರಣ ಮತ್ತು ವಿವಿಧ ಬಗೆಯ ಹೂಗಳಿಂದ ಅಲಂಕರಿಸಿ, ದೇವಸ್ಥಾನ, ಸಾಲೂರು ಮಠಕ್ಕೆ ಹೋಗುವ ಸ್ಥಳ ಸೇರಿದಂತೆ ಮಲೆಮಹದೇಶ್ವರ ಬೆಟ್ಟದ ವಿವಿಧೆಡೆ ವಿದ್ಯುತ್ ದೀಪಾಲಂಕಾರಗಳಿಂದ ಸಿಂಗರಿಸಲಾಗಿದೆ. ಈ ವೈಭವ ನೋಡುಗರ ಮತ್ತು ನೆರೆದಿದ್ದ ಭಕ್ತ ಸಮೂಹ ಕಣ್ಮನ ಸೆಳೆಯುವಂತೆ ಜಗಮಗಿಸುತ್ತಿದ್ದವು.

ಮಲೆಗಳ ನಂಟು: ಮಲೆ ಮಹಾದೇಶ್ವರ 77 ಮಲೆಗಳ ನಡುವೆ ನೆಲೆಸಿದ್ದಾರೆ ಎಂಬ ನಂಬಿಕೆ ಭಕ್ತರದು. ಇದರಲ್ಲಿ 43 ಮಲೆಗಳು ತಮಿಳುನಾಡಿನಲ್ಲಿರುವುದು ವಿಶೇಷ. ಮಲೆ ಮಹಾದೇಶ್ವರರು ಇಲ್ಲಿಗೆ ಬಂದು ನೆಲೆಸಿದ ಸಂದರ್ಭ ಅವರ ಅನುಯಾಯಿಗಳಾಗಿದ್ದ ಬೇಡಗಂಪಣ ಸಮುದಾಯದವರು ಹೆಚ್ಚಾಗಿ ತಮಿಳುನಾಡಿನ ಬರಗೂರು ಪ್ರದೇಶದವರಾಗಿದ್ದರು. ಇವರನ್ನು ಮಹಾದೇಶ್ವರರು ಪರಿವರ್ತಿಸಿ ನಾಗರಿಕರನ್ನಾಗಿಸಿದರು ಎನ್ನುವುದು ಐತಿಹ್ಯ. ಈಗಲು ಅವರ ಅನುಯಾಯಿಗಳು ತಮಿಳುನಾಡಿನ ಹತ್ತಕ್ಕೂ ಹೆಚ್ಚು ಹಳ್ಳಿಗಳಲ್ಲಿ ನೆಲೆಸಿದ್ದಾರೆ.

ಪೊಲೀಸ್ ಧ್ವಜ ದಿನಾಚರಣೆ: ನಿವೃತ್ತರಿಗೆ ಗೌರವ



ಚಾಮರಾಜನಗರ, ಏ.3- ಜಿಲ್ಲಾ ಪೊಲೀಸ್ ಘಟಕದಿಂದ ನಗರದ ಜಿಲ್ಲಾ ಪೊಲೀಸ್ ಕವಾಯಿತು ಮೈದಾನದಲ್ಲಿ ಆಯೋಜಿಸಲಾಗಿದ್ದ ಪೊಲೀಸ್ ಧ್ವಜ ದಿನಾಚರಣೆ ಕಾರ್ಯ ಕ್ರಮದಲ್ಲಿ ಪೊಲೀಸ್ ಇಲಾಖೆಯಲ್ಲಿ ಸುದೀರ್ಘ ಸೇವೆ ಸಲ್ಲಿಸಿ ನಿವೃತ್ತರಾದ ಅಧಿಕಾರಿ, ಸಿಬ್ಬಂದಿಗೆ ಗೌರವ ವಂದನೆ ಸಲ್ಲಿಸಲಾಯಿತು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಟಿ.ಪಿ.ಶಿವಕುಮಾರ್ ಮಾತನಾಡಿ, ಧ್ವಜ ದಿನವನ್ನು ಸಂಭ್ರಮದಿಂದ ಎಲ್ಲೆಡೆ ಆಚರಿಸಲಾಗುತ್ತಿದೆ. 1965ರಿಂದ ಈವರೆಗೂ ಏ.2ರಂದು ಪ್ರತಿವರ್ಷ ರಾಜ್ಯದ ಎಲ್ಲಾ ಪೊಲೀಸ್ ಘಟಕಗಳಲ್ಲಿ ಧ್ವಜ ದಿನಾಚರಣೆ ಹಮ್ಮಿಕೊಳ್ಳಲಾಗಿದೆ. ಇಲಾಖೆಯಲ್ಲಿ ಸೇವೆ ಸಲ್ಲಿಸಿ ವಯೋನಿವೃತ್ತರಾದ ಪೊಲೀಸ್ ಅಧಿಕಾರಿ, ಸಿಬ್ಬಂದಿ ಸ್ಮರಣೆ ಅವಶ್ಯವಾಗಿದೆ ಎಂದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ನಿವೃತ್ತ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಸಿ.ಎಸ್.ನಟ ರಾಜು ಮಾತನಾಡಿ, ಪ್ರಸ್ತುತ ಪೊಲೀಸ್ ಇಲಾಖೆಯಲ್ಲಿ ಸಾರ್ವಜನಿಕ ಸುರಕ್ಷತೆ ಹಾಗೂ ಆಡಳಿತದಲ್ಲಿ ತಂತ್ರಜ್ಞಾನದ ಅಳವಡಿಕೆಯಿಂದ ಸಾಕಷ್ಟು ಸುಧಾರಣೆಯಾಗಿದೆ. ವಿವಿಧ ಸಂದರ್ಭಗಳಲ್ಲಿ ಬಂದೋಬಸ್ತ್‌ಗಾಗಿ ಜಿಲ್ಲಾ ಕೇಂದ್ರಕ್ಕೆ ಆಗಮಿಸುವ ಪೊಲೀಸ್ ಅಧಿಕಾರಿ, ಸಿಬ್ಬಂದಿಗೆ ವಿಶ್ರಾಂತಿ ಗೃಹದ ಅಗತ್ಯವಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದ ಉಪ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ನಿರ್ದೇಶಕ ಸಂತೋಷ್‌ಕುಮಾರ್ ಮಾತನಾಡಿ, ಭಾರತೀಯ ಸೇನೆಯಲ್ಲಿ ಆಚರಿಸಲಾಗುವ ಮಾದರಿಯಲ್ಲಿ ಧ್ವಜ ದಿನಾಚರಣೆಯನ್ನು ಪೊಲೀಸ್ ಇಲಾಖೆಯಲ್ಲಿಯೂ ಹಮ್ಮಿಕೊಳ್ಳುತ್ತಿರುವುದು ಉತ್ತಮ ಸಂಗತಿ. ಪೊಲೀಸ್ ಧ್ವಜ ಮಾರಾಟ ಮಾಡಿ ಸಂಗ್ರಹಿಸಿದ ನಿಧಿಯನ್ನು ನಿವೃತ್ತ ಪೊಲೀಸ್ ಅಧಿಕಾರಿ, ಸಿಬ್ಬಂದಿಯ ಆರೋಗ್ಯ ರಕ್ಷಣೆಗಾಗಿ ಹಾಗೂ ಅವರ ಮಕ್ಕಳ ಉನ್ನತ ಶಿಕ್ಷಣಕ್ಕಾಗಿ ತೊಡಗಿಸುವುದು ಆರೋಗ್ಯಕರ ಬೆಳವಣಿಗೆಯಾಗಿದೆ ಎಂದು ಅಭಿಪ್ರಾಯಪಟ್ಟರು.

ಉಪ ಪೊಲೀಸ್ ವರಿಷ್ಠಾಧಿಕಾರಿ ಕೆ.ಎಸ್.ಸುಂದರರಾಜು ಮಾತನಾಡಿದರು.

ಆರಂಭದಲ್ಲಿ ಗಣ್ಯರು ಪೊಲೀಸ್ ಧ್ವಜವನ್ನು ಬಿಡುಗಡೆಗೊಳಿಸಿ, ಬಳಿಕ ಸೇವೆಯಿಂದ ನಿವೃತ್ತರಾದ ಅಧಿಕಾರಿ, ಸಿಬ್ಬಂದಿಗೆ ಶಾಲು ಹೊದಿಸಿ, ಫಲತಾಂಬೂಲ ನೀಡಿ ಸನ್ಮಾನಿಸಿದರು. ಕಾರ್ಯಕ್ರಮದಲ್ಲಿ ಆಕರ್ಷಕ ಪೊಲೀಸ್ ಪಥಸಂಚಲನ ಎಲ್ಲರ ಗಮನ ಸೆಳೆಯಿತು.

ಗುಂಡ್ಲುಪೇಟೆ: ಸಂಭ್ರಮದಿಂದ ಯುಗಾದಿ ಆಚರಣೆ

ಗುಂಡ್ಲುಪೇಟೆ, ಏ.3(ಸೋಮ್.ಜಿ)- ಪಟ್ಟಣ ಸೇರಿದಂತೆ ಗ್ರಾಮಾಂತರ ಪ್ರದೇಶಗಳಲ್ಲಿ ಯುಗಾದಿ ಹಬ್ಬವನ್ನು ಸಡಗರ ಸಂಭ್ರಮದಿಂದ ಆಚರಿಸಲಾಯಿತು.

ಕಳೆದ ವರ್ಷ ಕೊರೊನಾ ಕಾರಣದಿಂದ ಯುಗಾದಿ ಸರಳ ಆಚರಣೆಗೆ ಸೀಮಿತವಾಗಿತ್ತು. ಈ ಬಾರಿ ಹಂಗಳ, ದೇವರಹಳ್ಳಿ ಕಬ್ಬಹಳ್ಳಿ ಮುಂತಾದ ಗ್ರಾಮಗಳಲ್ಲಿ ರೈತರು ತಮ್ಮ ಎತ್ತುಗಳಿಗೆ ಪೂಜೆ ಸಲ್ಲಿಸುವ ಮೂಲಕ ವಿಜೃಂಭಣೆಯಿಂದ ಆಚರಿಸಿದರು.

ಹಂಗಳ ಗ್ರಾಮದಲ್ಲಿ 12 ಜೋಡೆತ್ತುಗಳನ್ನು ಹೊನ್ನೇರುಕಟ್ಟಿ ಮೆರವಣಿಗೆ ಮಾಡಲಾಯಿತು. ಮುಂಚೂಣಿಯಲ್ಲಿದ್ದ ಪಟ್ಟದ ಮಠದ ಎತ್ತುಗಳಿಗೆ ಪೂಜೆ ಸಲ್ಲಿಸಿ, ಮಾರಮ್ಮನವರ ದೇವಸ್ಥಾನದ ಸಮಾವೇಶಗೊಂಡ ನಂತರ ವಾದ್ಯ ತಮಟೆಗಳೊಂದಿಗೆ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ದೇವರಹಳ್ಳಿ ಗ್ರಾಮದಲ್ಲಿ ಹೊಸ ಅಂಗವಾಗಿ ಯುವಕರು ಹಾಗೂ ಹಿರಿಯರು ಸೇರಿ ಎತ್ತಿನ ಹಬ್ಬ ಆಚರಿಸಿದರು. ಈ ಅಂಗ ವಾಗಿ 50 ಜೋಡಿ ಎತ್ತುಗಳನ್ನು ಮಂಗಳ ವಾದ್ಯಗಳೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ನಂತರ ಗ್ರಾಮದ ಮಲ್ಲೇಶ್ವರ ಸ್ವಾಮಿ ಯವರ ಉತ್ಸವ ನಡೆಯಿತು. ಉಳಿದ ರೈತರು ತಮ್ಮ ಎತ್ತುಗಳನ್ನು ಪೂಜಿಸಿ ಜಮೀನು ಗಳಲ್ಲಿ ಸಾಂಕೇತಿಕವಾಗಿ ಉಳುಮೆ ಮಾಡಿ ಈ ಬಾರಿ ಸಾಕಷ್ಟು ಮಳೆ ಬಿದ್ದು ಬೆಳೆಗಳು ಸಮೃದ್ಧಿಯಾಗಲಿ ಎಂದು ಪ್ರಾರ್ಥಿಸಿದರು.



ವಿಶೇಷ ಪೂಜೆ: ಪಟ್ಟಣದ ಪುರಾತನ ದೇವಾಲಯವಾದ ಶ್ರೀ ರಾಮೇಶ್ವರಸ್ವಾಮಿ ದೇವಸ್ಥಾನದಲ್ಲಿ ಪ್ರಧಾನ ಅರ್ಚಕ ಶಂಕರನಾರಾಯಣ ಜೋಯಿಸ್ ನೇತೃತ್ವದಲ್ಲಿ ಶಿವಲಿಂಗಕ್ಕೆ ವಿಶೇಷ ಪೂಜೆ ನಡೆಸಲಾಯಿತು.

ನಾಳೆ ಡಾ.ಬಾಬು ಜಗಜೀವನ್‌ರಾಮ್ ಜನ್ಮದಿನಾಚರಣೆ



ಚಾಮರಾಜನಗರ, ಏ.3- ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ನಗರಸಭೆ ಹಾಗೂ ಸಮಾಜ ಕಲ್ಯಾಣ ಇಲಾಖೆ ಸಂಯುಕ್ತ ಆಶ್ರಯದಲ್ಲಿ ಹಸಿರು ಕ್ರಾಂತಿಯ ಹರಿಕಾರ ಹಾಗೂ ಮಾಜಿ ಉಪ ಪ್ರಧಾನಿ ಡಾ.ಬಾಬು ಜಗಜೀವನ್ ರಾಮ್ ಅವರ 115ನೇ ಜನ್ಮ ದಿನಾಚರಣೆ ಸಮಾರಂಭವನ್ನು ಏ.5 ರಂದು ನಗರದಲ್ಲಿ ಹಮ್ಮಿಕೊಳ್ಳಲಾಗಿದೆ.

ಬೆಳಗ್ಗೆ 10 ಗಂಟೆಗೆ ನಗರದ ಪ್ರವಾಸಿ ಮಂದಿರದಿಂದ ಡಾ.ಬಾಬು ಜಗಜೀವನ್‌ರಾಮ್ ಅವರ ಭಾವಚಿತ್ರದ ಮೆರವಣಿಗೆ ಕಲಾ ತಂಡಗಳೊಂದಿಗೆ ಹೊರಡಲಿದೆ. ಬೆಳಗ್ಗೆ 11 ಗಂಟೆಗೆ ನಗರದ ಪೇಟೆ ಪ್ರೈಮರಿ ಶಾಲಾ ಆವರಣದಲ್ಲಿ ವೇದಿಕೆ ಸಮಾರಂಭ ನಡೆಯಲಿದೆ. ಚಿತ್ರದುರ್ಗದ ಆದಿ ಜಾಂಬವ ಮಹಾ ಸಂಸ್ಥಾನ ಮಠ, ಕೋಡಿಹಳ್ಳಿಯ ಶ್ರೀಮದ್ ಕಡಪ ಸಿಂಹಾಸನದ ಶ್ರೀ ಷಡಕ್ಷರಮುನಿ ದೇಶಿಕೇಂದ್ರ ಸ್ವಾಮಿ ಅವರು ದಿವ್ಯಸಾನಿಧ್ಯ ವಹಿಸುವವರು. ವಸತಿ, ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಅವರು ಸಮಾರಂಭ ಉದ್ಘಾಟಿಸುವವರು. ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರು ಅಧ್ಯಕ್ಷತೆ ವಹಿಸುವವರು. ಸಂಸದ ವಿ.ಶ್ರೀನಿವಾಸ ಪ್ರಸಾದ್‌ಅವರು ಉಪಸ್ಥಿತರಿರುವರು.

ಶಾಸಕರಾದ ಆರ್.ನರೇಂದ್ರ, ಎನ್.ಮಹೇಶ್, ಸಿ.ಎಸ್.ನಿರಂಜನ್‌ಕುಮಾರ್, ವಿಧಾನಪರಿಷತ್ ಸದಸ್ಯರಾದ ಮರಿತಿಬ್ಬೇಗೌಡ, ಕೆ.ಟಿ.ಶ್ರೀಕಂಠೇಗೌಡ, ಡಾ॥ ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಕೇಂದ್ರ ಪರಿಹಾರ ಸಮಿತಿ ಅಧ್ಯಕ್ಷ ಎಂ.ರಾಮಚಂದ್ರ, ನಗರಸಭೆ ಅಧ್ಯಕ್ಷೆ ಆಶಾ ನಟರಾಜು, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪಿ.ಬಿ.ಶಾಂತಮೂರ್ತಿ ಕುಲಗಾಣ, ನಗರಸಭೆ ಉಪಾಧ್ಯಕ್ಷೆ ಪಿ.ಸುಧಾ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಚಂದ್ರಶೇಖರ್ ಪಾಲ್ಗೊಳ್ಳುವವರು.

ಬೆಂಗಳೂರಿನ ವಿಶ್ವ ವಿದ್ಯಾಲಯದ ಡಾ.ಬಾಬು ಜಗಜೀವನ್ ರಾಮ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ನಿರ್ದೇಶಕ ಪ್ರೊ.ಡಾ.ಬಿ.ಗಂಗಾಧರ ಅವರು ಮುಖ್ಯ ಭಾಷಣ ಮಾಡುವವರು ಎಂದು ಪ್ರಕಟಣೆ ತಿಳಿಸಿದೆ.

ಮಗು ಸಾವು: ವೈದ್ಯರ ವಿರುದ್ಧ ಪೋಷಕರ ಪ್ರತಿಭಟನೆ



ಚಾಮರಾಜನಗರ, ಏ.3(ಎಸ್‌ಎಸ್)- ವೈದ್ಯರ ನಿರ್ಲಕ್ಷ್ಯದಿಂದ 5 ದಿನಗಳ ಗಂಡು ಮಗು ಸಾವನ್ನಪ್ಪಿದೆ ಎಂದು ಆರೋಪಿಸಿ, ಮಗುವಿನ ಪೋಷಕರು ಭಾನುವಾರ ನಗರದ ಜಿಲ್ಲಾಸ್ಪತ್ರೆಯ ಮುಂಭಾಗ ಪ್ರತಿಭಟನೆ ನಡೆಸಿದರು.

ಆರೋಪವನ್ನು ನಿರಾಕರಿಸಿರುವ ಆಸ್ಪತ್ರೆ ವೈದ್ಯರು, ಮಗುವಿನ ಆರೋಗ್ಯ ಸ್ಥಿತಿ ಹದಗೆಟ್ಟಿತ್ತು ಎಂದು ಹೇಳಿದ್ದಾರೆ.

ಯಳಂದೂರು ತಾಲೂಕು ಅಗರ ಗ್ರಾಮದ ಮಂಜುನಾಥ್, ಶ್ಯಾಮಲಾ ದಂಪತಿಗೆ ಕಳೆದ ಭಾನುವಾರ ಗಂಡು ಮಗುವಾಗಿತ್ತು.

> ‘ನಾನು ವೈದ್ಯರಿಂದ ಮಾಹಿತಿ ಪಡೆದಿದ್ದೇನೆ. ಈ ಪ್ರಕರಣದಲ್ಲಿ ನಿರ್ಲಕ್ಷ್ಯ ಆಗಿಲ್ಲ. ಮಗುವಿನ ಆರೋಗ್ಯ ಸ್ಥಿತಿ ಗಂಭೀರವಾಗಿತ್ತು. ಜಾಂಡಿಸ್ ಬಳಿಕ ಅದು ಇನ್ನಷ್ಟು ತೀವ್ರವಾಗಿದೆ.
> – ಡಾ.ಶ್ರೀನಿವಾಸ, ಜಿಲ್ಲಾ ಸರ್ಜನ್.

ನಾಲ್ಕು ದಿನಗಳ ಕಾಲ ಮಗು ಚೆನ್ನಾಗಿಯೇ ಇತ್ತು ಶನಿವಾರ ಜಾಂಡಿಸ್ ಹಾಗೂ ರಕ್ತದಲ್ಲಿ ಸೋಂಕು ಆಗಿರುವ ಬಗ್ಗೆ ವರದಿ ಬಂತು. ನಂತರ ವೈದ್ಯರು ಮೈಸೂರಿಗೆ ಕರೆದುಕೊಂಡು ಹೋಗುವಂತೆ ಸೂಚಿಸಿದರು. ಶನಿವಾರ ರಾತ್ರಿ ಮೈಸೂರಿಗೆ ಕರೆದುಕೊಂಡು ಹೋದಾಗ ಮಗು ಮೃತಪಟ್ಟಿದೆ ಎಂದು ಹೇಳಲಾಗಿದೆ. ಶನಿವಾರ ಮಧ್ಯಾಹ್ನವೇ ವರದಿ ಬಂದಿದ್ದರೂ ಚಿಕಿತ್ಸೆ ನೀಡಿಲ್ಲ. ಮೈಸೂರಿಗೂ ಕಳುಹಿಸಿಲ್ಲ. ಮಗುವಿನ ಆರೋಗ್ಯ ಸ್ಥಿತಿ ಗಂಭೀರವಾದ ಮೇಲೆ ತಡವಾಗಿ ಮೈಸೂರು ಆಸ್ಪತ್ರೆಗೆ ಕಳುಹಿಸಿದ್ದಾರೆ ಎಂದು ಮಂಜುನಾಥ್ ಅವರ ಚಿಕ್ಕಪ್ಪ ನಂಜುಂಡಯ್ಯ ಅವರು ದೂರಿದರು. ಇಲ್ಲಿನ ವೈದ್ಯರು ಸರಿಯಾಗಿ ಚಿಕಿತ್ಸೆ ನೀಡುತ್ತಿಲ್ಲ. ಪ್ರತಿ ದಿನ ಮೂರ್ನಾಲ್ಕು ಮಕ್ಕಳನ್ನು ಮೈಸೂರಿಗೆ ಕಳುಹಿಸಲಾಗುತ್ತಿದೆ ಎಂದು ಅವರು ಆರೋಪಿಸಿದರು.

ಹೋಳಿ ಸಂಭ್ರಮ...



ಯುಗಾದಿ ಹಬ್ಬದ ನಂತರ ದಿನವಾದ ಭಾನುವಾರ ಚಾಮರಾಜನಗರದ ರಾಮಸಮುದ್ರದ ಹಳ್ಳದ ಬೀದಿಯಲ್ಲಿ ಹೋಳಿ ಹಬ್ಬ ಆಚರಿಸಲಾಯಿತು. ಯುವಕರು, ಮಕ್ಕಳು ಪರಸ್ಪರ ಓಕುಳಿ ಎರಚಿಕೊಂಡು ಸಂಭ್ರಮಿಸಿದರು.

ಗೂಡ್ಸ್ ವಾಹನ ಡಿಕ್ಕಿ: ಬೈಕ್ ಸವಾರ ಸಾವು

ಬೇಗೂರು, ಏ.3(ಕಿರಣ್)- ಬೈಕ್‌ಗೆ ಗೂಡ್ಸ್ ವಾಹನವೊಂದು ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರನೊಬ್ಬ ಸಾವನ್ನಪ್ಪಿರುವ ಘಟನೆ ಸಮೀಪದ ರಾಘವಾಪುರ ಗ್ರಾಮದಲ್ಲಿ ಶನಿವಾರ ನಡೆದಿದೆ.

ಗ್ರಾಮದ ನಿವಾಸಿ ಮಹದೇವಶೆಟ್ಟಿ(49) ಮೃತಪಟ್ಟ ಬೈಕ್ ಸವಾರ. ಇವರು ತಮ್ಮ ಬೈಕ್‌ನಲ್ಲಿ ಬೇಗೂರಿನಿಂದ ಮನೆಗೆ ಅಗತ್ಯವಾದ ಸಾಮಗ್ರಿಗಳನ್ನು ಖರೀದಿಸಿ ವಾಪಾಸ್ ಬರುತ್ತಿರುವಾಗ ರಾಘವಾಪುರ ಗ್ರಾಮದಲ್ಲಿ ಗೂಡ್ಸ್ ವಾಹನ ಡಿಕ್ಕಿ ಹೊಡೆದಿದೆ. ಪರಿಣಾಮ ಮಹದೇವಶೆಟ್ಟಿ ತೀವ್ರ ಗಾಯಗೊಂಡಿದ್ದಾರೆ. ಕೂಡಲೇ, ಅವರನ್ನು ಸ್ಥಳೀಯರು ಆಸ್ಪತ್ರೆಗೆ ದಾಖಲಿಸಿದ್ದಾರೆ. ಆದರೂ, ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ್ದಾರೆ. ಈ ಬಗ್ಗೆ ಬೇಗೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೈಕ್‌ಗೆ ಟ್ರ್ಯಾಕ್ಟರ್ ಡಿಕ್ಕಿ

ಪೊಲೀಸ್ ಪೇದೆ, ಪತ್ನಿಗೆ ಗಾಯ

ಕೊಳ್ಳೇಗಾಲ, ಏ.3(ನಾಗೇಂದ್ರಸ್ವಾಮಿ)- ಮಾಂಬಳ್ಳಿ ಪೊಲೀಸ್ ಠಾಣೆ ಪೇದೆಯೊಬ್ಬರು ತನ್ನ ಪತ್ನಿಯೊಡನೆ ಬೈಕ್‌ನಲ್ಲಿ ತೆರಳುತ್ತಿದ್ದಾಗ ಟ್ರ್ಯಾಕ್ಟರ್ ಡಿಕ್ಕಿ ಹೊಡೆದು ಗಂಭೀರವಾಗಿ ಗಾಯಗೊಂಡಿರುವ ಘಟನೆ ತಾಲೂಕಿನ ದೊಡ್ಡಿಂದುವಾಡಿ ಬಳಿ ಶನಿವಾರ ಸಂಜೆ ನಡೆದಿದೆ.

ಮಾಂಬಳ್ಳಿ ಪೊಲೀಸ್ ಠಾಣೆಯ ಪೇದೆ ವಿಶ್ವನಾಥ್ ಹಾಗೂ ಇವರ ಪತ್ನಿ ಮೀನಾ ಗಂಭೀರವಾಗಿ ಗಾಯಗೊಂಡಿದ್ದು, ಪ್ರಸ್ತುತ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಘಟನೆಯ ವಿವರ: ವಿಶ್ವನಾಥ್ ಹನೂರಿನ ಪೊಲೀಸ್ ಕ್ವಾಟ್ರಸ್‌ನಲ್ಲಿದ್ದ ತನ್ನ ತಂದೆಗೆ ಔಷಧಿ ನೀಡಲು ಪತ್ನಿ ಜೊತೆ ತನ್ನ ಹೊಂಡ ಶೈನ್ ಬೈಕ್‌ನಲ್ಲಿ ತೆರಳಿ, ವಾಪಸ್ ಬರುತ್ತಿದ್ದಾಗ ದೊಡ್ಡಿಂದುವಾಡಿಯ ರಾಜೇಂದ್ರ ಪ್ರಸಾದ್ ಅವರ ಜಮೀನಿನ ಬಳಿ ಕೊಳ್ಳೇಗಾಲದ ಕಡೆಯಿಂದ ಬಂದ ಕೆಎ 54, ಟಿ 1122 ಸಂಖ್ಯೆಯ ಟ್ರ್ಯಾಕ್ಟರ್ ಅವರ ಬೈಕ್‌ಗೆ ಡಿಕ್ಕಿ ಹೊಡೆದಿದೆ.

ಪರಿಣಾಮ ಬೈಕ್‌ನಿಂದ ಕೆಳಗೆ ಬಿದ್ದ ವಿಶ್ವನಾಥ್ ಹಾಗೂ ಅವರ ಪತ್ನಿ ಮೀನಾ ಗಂಭೀರವಾಗಿ ಗಾಯಗೊಂಡಿದ್ದಾರೆ. ಕೂಡಲೇ ಅವರನ್ನು ಸಮೀಪದ ಕಾಮಗೆರೆ ಹೋಲಿ ಕ್ರಾಸ್‌ಗೆ ದಾಖಲಿಸಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ ಬಳಿಕ, ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಈ ಸಂಬಂಧ ಕೊಳ್ಳೇಗಾಲ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು, ಪೊಲೀಸರು ಆರೋಪಿಯನ್ನು ಬಂಧಿಸಿ, ಜಾಮೀನಿನ ಮೇಲೆ ಬಿಡುಗಡೆಗೊಳಿಸಿದ್ದಾರೆ.

ಜಿಲ್ಲಾದ್ಯಂತ ಶ್ರದ್ಧಾ-ಭಕ್ತಿಯಿಂದ ಸಿದ್ದಗಂಗಾ ಶ್ರೀಗಳ ಜಯಂತೋತ್ಸವ

ಚಾಮರಾಜನಗರ, ಯಳಂದೂರು, ಕೊಳ್ಳೇಗಾಲ, ಹನೂರು ಹಾಗೂ ಗುಂಡ್ಲುಪೇಟೆ ಸೇರಿದಂತೆ ಜಿಲ್ಲಾದ್ಯಂತ ತ್ರಿವಿಧ ದಾಸೋಹಿ ಡಾ.ಶಿವಕುಮಾರಸ್ವಾಮಿ ಅವರ 115ನೇ ವರ್ಷದ ಜಯಂತಿಯನ್ನು ಅನ್ನ ದಾಸೋಹ, ಪಾನಕ- ಮಜ್ಜಿಗೆ ವಿತರಣೆ ಮಾಡುವ ಮೂಲಕ ಶ್ರದ್ಧಾ-ಭಕ್ತಿಯಿಂದ ಆಚರಿಸಲಾಯಿತು.

ಬಿಜೆಪಿ ಮುಖಂಡ ಮಲ್ಲೇಶ್‌ರಿಂದ ವಿವಿಧ ಕಡೆ ದಾಸೋಹ, ಪಾನಕ ಮಜ್ಜಿಗೆ, ಲಾಡು ವಿತರಣೆ



ಚಾಮರಾಜನಗರ, ಏ.3- ನಡೆದಾಡುವ ದೇವರು ಎಂದೇ ಖ್ಯಾತಿ ಪಡೆದಿದ್ದ ಲಿಂಗೈಕ್ಯ ಡಾ. ಶ್ರೀ ಶಿವಕುಮಾರಸ್ವಾಮಿ ಅವರ ಜಯಂತಿ ಅಂಗವಾಗಿ ನಗರದಲ್ಲಿ ಬಿಜೆಪಿ ರೈತ ಮುಖಂಡ ಅಮ್ಮನಪುರ ಮಲ್ಲೇಶ್ ಹಾಗೂ ಸ್ನೇಹಿತರ ನೇತೃತ್ವದಲ್ಲಿ 6ಕ್ಕೂ ಹೆಚ್ಚು ಕಡೆ ದಾಸೋಹ ಕಾರ್ಯಕ್ರಮ ಹಮ್ಮಿಕೊಂಡು ಹಬ್ಬದ ಮಾದರಿಯಲ್ಲಿ ಆಚರಿಸಲಾಯಿತು.

ಶುಕ್ರವಾರ ಬೆಳಗ್ಗೆ 9 ಗಂಟೆಗೆ ಆರಂಭವಾದ ಕಾರ್ಯಕ್ರಮ ಮಧ್ಯಾಹ್ನದವರೆಗೂ ಸಾರ್ವಜನಿಕರಿಗೆ ಪ್ರಮುಖ ವೃತ್ತ ಹಾಗೂ ಸ್ಥಳಗಳಲ್ಲಿ ಮಜ್ಜಿಗೆ, ಪಾನಕ, ಲಾಡು ಹಾಗೂ ರೈಸ್‌ಬಾತ್ ವಿತರಣೆ ಮಾಡಲಾಯಿತು. ನಗರದ ಜೋಡಿ ರಸ್ತೆಯಲ್ಲಿರುವ ಅಧ್ಯಕ್ಷ ಹೋಟೆಲ್‌ನಲ್ಲಿ ಅಭಿಮಾನಿಗಳು ಹಾಗೂ ಸಾರ್ವಜನಿಕರಿಗೆ ಬೆಳಗಿನ ಉಪಹಾರ ಮತ್ತು ಮಧ್ಯಾಹ್ನದ ಭೋಜನ ವ್ಯವಸ್ಥೆಯನ್ನು ಉಚಿತವಾಗಿ ಶ್ರೀಗಳ ಹೆಸರಿನಲ್ಲಿ ಮಾಡಲಾಗಿತ್ತು.

ಮೊದಲಿಗೆ ನಗರದ ಅಧ್ಯಕ್ಷ ಹೋಟೆಲ್ ಮುಂಭಾಗ ಸಿದ್ದಗಂಗಾ ಶ್ರೀಗಳ ಭಾವಚಿತ್ರಕ್ಕೆ ನಗರದ ವಿರಕ್ತ ಮಠದ ಶ್ರೀಚೆನ್ನಬಸವ ಸ್ವಾಮೀಜಿ ವಿಶೇಷ ಪೂಜೆ ಸಲ್ಲಿಸಿ, ಪುಷ್ಪಾರ್ಚನೆ ಮಾಡುವ ಮೂಲಕ ದಾಸೋಹ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಬಳಿಕ, ಮಲ್ಲೇಶ್ ಅವರು ಸಾರ್ವಜನಿಕರಿಗೆ ಉಪಹಾರ ಹಾಗೂ ಮಜ್ಜಿಗೆ- ಪಾನಕ ವಿತರಿಸಿದರು.

ನಗರದ ಸಿದ್ದಮಲ್ಲೇಶ್ವರ ವಿರಕ್ತ ಮಠದ ಮುಂಭಾಗ, ರಾಮಸಮುದ್ರದ ಪುಟ್ಟಣ್ಣ ಹೋಟೆಲ್ ಮುಂಭಾಗ, ಅಧ್ಯಕ್ಷ ಹೋಟೆಲ್ ಮುಂಭಾಗ, ಸರ್ಕಾರಿ ಆಸ್ಪತ್ರೆ ನಂದಿನಿ ಕೇಂದ್ರ ಮುಂಭಾಗ, ನಗರಸಭೆ ಎದುರು ಹಾಗೂ ಸಂತೇಮರಳ್ಳಿ ವೃತ್ತದಲ್ಲಿ ದಾಸೋಹ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮದಲ್ಲಿ ನಗರಸಭೆ ಅಧ್ಯಕ್ಷೆ ಆಶಾ ನಟರಾಜು, ಸದಸ್ಯರಾದ ಮನೋಜ್ ಪಟೇಲ್, ಶಿವರಾಜ್, ಮಹದೇವಯ್ಯ, ನಾಗೇಶ್, ರಾಘವೇಂದ್ರ, ಮಂಜುನಾಥ್, ಚಂದ್ರಶೇಖರ್, ಎಪಿಎಂಸಿ ಮಾಜಿ ಅಧ್ಯಕ್ಷ ನಾಗೇಂದ್ರ ಸ್ವಾಮಿ, ಮುಖಂಡರಾದ ನಿಜಗುಣರಾಜು, ಕೊತ್ತಲವಾಡಿ ಕುಮಾರ್, ಶಂಭುಪಟೇಲ್, ಪಿ.ಎನ್.ದಯಾನಿಧಿ, ಶಿವಕುಮಾರ್, ಬಸವಣ್ಣ, ಬಿಸಲವಾಡಿ ಬಸವರಾಜು, ಅರಕಲವಾಡಿ ಮಹೇಶ್, ಸತೀಶ್, ಆಲೂರು ರಮೇಶ್ ಬಾಬು, ಶಮಿತ್ ಕುಮಾರ್, ನಲ್ಲೂರು ಪರಮೇಶ್, ಮರಿಯಾಲ ಮಹೇಶ್ ಇತರರಿದ್ದರು.

ಸಿದ್ದಗಂಗಾ ಶ್ರೀಗಳ ದಾಸೋಹ ವಿಶ್ವಕ್ಕೆ ಮಾದರಿ: ಎಂ.ರಾಮಚಂದ್ರ



ಚಾಮರಾಜನಗರ, ಏ.3- ತ್ರಿವಿಧ ದಾಸೋಹಿ ಡಾ.ಶ್ರೀ ಶಿವಕುಮಾರಸ್ವಾಮಿ ಅವರ 115ನೇ ಜಯಂತಿ ಮಹೋತ್ಸವ ವಿಶ್ವಕ್ಕೆ ದಾಸೋಹದ ಮಹತ್ವವನ್ನು ಸಾರುತ್ತಿದೆ ಎಂದು ಕೇಂದ್ರ ಪರಿಹಾರ ಸಮಿತಿ ಅಧ್ಯಕ್ಷ ಎಂ.ರಾಮಚಂದ್ರ ಗುಣಗಾನ ಮಾಡಿದರು.

ನಗರದ ರಾಮಸಮುದ್ರದ ಅರಳೀಕಟ್ಟೆ ಮುಖ್ಯ ರಸ್ತೆಯಲ್ಲಿ ಆಯೋಜಿಸಿದ್ದ ಸಿದ್ದಗಂಗಾ ಶ್ರೀಗಳ 115ನೇ ಜಯಂತೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಜ್ಜಿಗೆ, ಪಾನಕ ವಿತರಿಸಿ ಅವರು ಮಾತನಾಡಿದರು. ನಡೆದಾಡುವ ದೇವರೆಂದೇ ಪ್ರಸಿದ್ಧಿಯಾಗಿದ್ದು, 21ನೇ ಶತಮಾನದ ಅಭಿನಯ ಬಸವೇಶ್ವರಾಗಿ ವಿಶ್ವಕ್ಕೆ ಶಿಕ್ಷಣ, ಅನ್ನದಾನ, ಆರೋಗ್ಯ ಕ್ಷೇತ್ರದಲ್ಲಿ ಅಪಾರ ಸೇವೆ ಸಲ್ಲಿಸಿದರು. ಜಾತಿ ಬೇಧ ಮಾಡದೇ ಎಲ್ಲಾ ವರ್ಗದವರಿಗೂ ಮಠದಲ್ಲಿ ಶಿಕ್ಷಣ ನೀಡಿ ಭವಿಷ್ಯ ರೂಪಿಸಿದ್ದಾರೆ. ಅವರ ತತ್ವಾದರ್ಶಗಳ ನಮಗೆಲ್ಲ ಮಾದರಿಯಾಗಿದೆ. ಯುವ ಜನಾಂಗ ಸಿದ್ಧಗಂಗಾ ಶ್ರೀಗಳ ಆದರ್ಶಗಳನ್ನು ಮೈಗೂಡಿಸಿಕೊಂಡು ಸೇವಾ ಮನೋಭಾವನೆ ಬೆಳಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಗ್ರಾಮದ ಶ್ರೀಮಠದ ಅಧ್ಯಕ್ಷ ಮಹದೇವ ಸ್ವಾಮೀಜಿ, ಕೋಮುವಾರು ಯಜಮಾನ ಆರ್.ಪುಟ್ಟಮಲ್ಲಪ್ಪ, ನಗರಸಭೆ ಸದಸ್ಯರಾದ ಪ್ರಕಾಶ್, ಮಹದೇವಯ್ಯ, ನಾಗೇಶ್‌ನಾಯಕ, ಮುಖಂಡರಾದ ಆರ್.ಮಹದೇವಸ್ವಾಮಿ, ಭೃಂಗೇಶ್, ನಾಗಣ್ಣ, ಗುರುಮಲ್ಲಪ್ಪ, ಎಂ.ಮಹೇಶ್, ಖಾದಿ ಕುಮಾರ್, ಮಾಸ್ಟರ್ ಆರ್.ಎಸ್.ಲಿಂಗರಾಜು, ಎಂಜಿನಿಯರ್ ಮಾದಪ್ಪ, ನಂದೀಶ್, ಪ್ರಸನ್ನ, ಮುತ್ತಣ್ಣ, ರಾಜಪ್ಪ ಇತರರು ಹಾಜರಿದ್ದರು.

ಯುಗಾದಿ ಮರುದಿನ ಹೊಸತೊಡಕು, ಮಾಂಸದಂಗಡಿಗಳಿಗೆ ಮಾಂಸಪ್ರಿಯರ ಲಗ್ಗೆ



ಮೈಸೂರು,ಏ.3(ಆರ್‌ಕೆಬಿ)– ಯುಗಾದಿ ಹಬ್ಬದ ಮಾರನೇ ದಿನ ಹೊಸತೊಡಕು. ಇದರ ಅಂಗವಾಗಿ ಮೈಸೂರಿನಲ್ಲಿ ಭಾನುವಾರ ಮಾಂಸಪ್ರಿಯರು ಮಾಂಸದಂಗಡಿಗಳ ಮುಂದೆ ಮುಗಿಬಿದ್ದು ಮಾಂಸ ಖರೀದಿಸಿದರು.

ಯುಗಾದಿ ದಿನ ಪೂಜೆಗಳೊಂದಿಗೆ ಆರಂಭವಾದರೆ ಮರು ದಿನ 'ಹೊಸತೊಡಕು' ಎಂಬ ಮಾಂಸಾಹಾರಿ ಖಾದ್ಯಗಳ ಭರ್ಜರಿ ಭೋಜನ ನಡೆಯುತ್ತದೆ. ಸಂಬಂಧಿಕರು, ಅತಿಥಿಗಳಿಗೆ ಮಾಂಸ ವಿತರಿಸುವ ಸಂಪ್ರದಾಯವೂ ಇದೆ. ಅದೇ ರೀತಿ ಈ ವರ್ಷ ಭಾನುವಾರದ ದಿನವೇ ಹೊಸತೊಡಗು ಬಂದಿದ್ದರಿಂದ ಮಾಂಸದಂಗಡಿಗಳ ಮುಂದೆ ಮಾಂಸಪ್ರಿಯರ ದಂಡು ತುಂಬಿತ್ತು. ಸರತಿ ಸಾಲಿನಲ್ಲಿ ನಿಂತು ಮಾಂಸ ಖರೀದಿಸಿದರು.

ಇಂದು ಮಾಂಸದ ದರ 600ರಿಂದ 650ರವರೆಗೆ ಇತ್ತು. ಕೆಲವೆಡೆ 450 ರೂ.ಗಳಿಗೂ ಉಂಡೆ ಮಾಂಸ ಸ್ಥಳದಲ್ಲಿ ಕತ್ತರಿಸಿ ಮಾರಾಟ ಮಾಡಲಾಗುತ್ತಿತ್ತು. ಅದಕ್ಕೂ ಜನರು ಮುಗಿಬಿದ್ದು ಖರೀದಿಸಿದರು.

ಮೈಸೂರಿನ ಪ್ರಮುಖ ಪ್ರದೇಶಗಳಾದ ಕೆ.ಜಿ.ಕೊಪ್ಪಲು, ಕುಂಬಾರ ಕೊಪ್ಪಲು, ಹೆಬ್ಬಾಳ, ಗೋಕುಲಂ, ಮಂಡಿ ಮೊಹಲ್ಲಾ ಮತ್ತು ಎನ್.ಆರ್.ಮೊಹಲ್ಲಾ ಇನ್ನಿತರೆ ಕಡೆಗಳಲ್ಲಿ ಮಟನ್ ಮತ್ತು ಚಿಕನ್ ಸ್ಟಾಲ್‌ಗಳಲ್ಲಿ ಬೆಳಗ್ಗೆಯಿಂದ ಜನರು ಸಾಲುಗಟ್ಟಿ ನಿಂತು ಮಾಂಸ ಖರೀದಿಸಿದರು.

ಇದರಲ್ಲಿ ಜನರು ಕುರಿ ಮಾಂಸಕ್ಕೆ ಆದ್ಯತೆ ನೀಡಿದರು. ಅಲ್ಲಿ ಮಾಂಸ ಸಿಗುವುದು ತಡವಾಗುವುದೆಂದು ಅನೇಕರು ನಗರದ ಹೊರವಲಯದಕ್ಕೆ ಧಾವಿಸಿದರು. ಅಲ್ಲಿ ಗುಡ್ಡೆ ಮಾಂಸ ಮಾರಾಟ ನಡೆಯುತ್ತಿತ್ತು. ಮಾಂಸವನ್ನು ಗುಡ್ಡೆಯಾಗಿಟ್ಟು ಮಾರಾಟ ಮಾಡಲಾಗುತ್ತದೆ.

ಮೈಸೂರಿನ ಶಾಂತಿನಗರ ಮಹದೇವಪುರ ಮುಖ್ಯ ರಸ್ತೆಯ (ಅಜೀಜ್‌ಸೇಠ್ ಮುಖ್ಯ ರಸ್ತೆ) ಮುಸ್ಲಿಂ ವ್ಯಾಪಾರಿಯ ಅಂಗಡಿಯೊಂದರಲ್ಲಿ ಸಕಲೆಂಟು ಜಾತಿ ಹಾಗೂ ಸಹಬಾಳ್ವೆ ಸಂಘ, ಕರ್ನಾಟಕ ರಾಜ್ಯ ರೈತ ಸಂಘ, ದಲಿತ ಸಂಘರ್ಷ ಸಮಿತಿ ಆಶ್ರಯದಲ್ಲಿ ಮುಖಂಡರು ಕುರಿ ಮಾಂಸ ಖರೀದಿಸಿದರು. ಜಾತಿ ಮತ್ತು ಸಮುದಾಯಗಳ ನಡುವೆ ಶಾಂತಿ ಸೌಹಾರ್ದತೆಯ ಘೋಷಣೆ ಕೂಗಿದರು.

ಸಾಹಿತಿ ದೇವನೂರ ಮಹಾದೇವ, ಪ್ರಗತಿಪರ ಹೋರಾಟಗಾರ ಪ.ಮಲ್ಲೇಶ್ ಇನ್ನಿತರರು ಮಾಂಸ ಖರೀದಿಸಿದರು. ಕರ್ನಾಟಕ ರೈತಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ, ಗುರುಪ್ರಸಾದ್ ಕೆರಗೋಡು, ಆಲಗೂಡು ಶಿವಕುಮಾರ್, ಶಂಭುಲಿಂಗಸ್ವಾಮಿ, ಪಿ.ಮರಂಕಯ್ಯ, ಕೆ.ವಿ.ದೇವೇಂದ್ರ, ಮಹೇಶ್, ಬ್ರಾಡ್‌ವೇ ಕಿರಣ್ ಇನ್ನಿತರರು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ 'ಕೋಮುವಾದ ಅಳಿಯಲಿ, ಕರ್ನಾಟಕ ಉಳಿಯಲಿ' ಎಂಬ ಘೋಷಣೆಗಳನ್ನು ಕೂಗಿದರು.

ಮೈಸೂರಿನ ಕೆ.ಜಿ.ಕೊಪ್ಪಲು ಬಡಾವಣೆಯ ಮಾಂಸದಂಗಡಿಗೆ ಭೇಟಿ ನೀಡಿದ ಸಾಹಿತಿ ಕೆ.ಎಸ್.ಭಗವಾನ್, ವಿಚಾರವಾದಿ ಮಹೇಶ್‌ಚಂದ್ರ ಗುರು ಇನ್ನಿತರರು ಮಾಂಸ ಖರೀದಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮು ನೇತೃತ್ವದಲ್ಲಿ ಮಾಂಸ ಖರೀದಿಸಲು ಬಂದಿದ್ದ ಗ್ರಾಹಕರಿಗೆ ಬೇವು ಬೆಲ್ಲ ವಿತರಿಸಿ, ಶಾಂತಿ ಸಹಬಾಳ್ವೆಯ ಸಂದೇಶ ಸಾರಿದರು. ಮಾಂಸದಂಗಡಿಗಳ ಮುಂದೆ ಹೆಚ್ಚು ಜನ ಸೇರಿದ್ದ ಹಿನ್ನೆಲೆಯಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.

ಜನ ಸಮುದಾಯ ಒಡೆಯಲು ಸರ್ಕಾರದಿಂದಲೇ ಕುಮ್ಮಕ್ಕು

'ಮಾಂಸ ತಿನ್ನದವರೇ ಮಾಂಸ ಹೀಗೆ ಕತ್ತರಿಸಿ, ಹಾಗೆ ಕತ್ತರಿಸಿ ಎನ್ನುತ್ತಿದ್ದಾರೆ': ಸಾಹಿತಿ ದೇವನೂರ ಮಹಾದೇವ ಕಿಡಿ

ಮೈಸೂರು: ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕುಸಿದಿದೆ. ದ್ವೇಷ ಹೆಚ್ಚಿಸಿ ಜನ ಸಮುದಾಯಗಳನ್ನು ಒಡೆಯಲು ಸರ್ಕಾರವೇ ಕುಮ್ಮಕ್ಕು ನೀಡುತ್ತಿದೆ ಎಂದು ಸಾಹಿತಿ ದೇವನೂರ ಮಹದೇವ ಕಿಡಿಕಾರಿದರು.



ಸಕಲೆಂಟು ಜಾತಿ ಸಹಬಾಳ್ವೆ ಸಂಘ, ಕರ್ನಾಟಕ ರಾಜ್ಯ ರೈತ ಸಂಘ, ದಲಿತ ಸಂಘರ್ಷ ಸಮಿತಿ ವತಿಯಿಂದ ಮೈಸೂರಿನ ಶಾಂತಿನಗರ (ಮಹದೇವಪುರ ಮುಖ್ಯ ರಸ್ತೆ)ದಲ್ಲಿರುವ ಸೈಯ್ಯದ್ ರಿಜ್ವಾನ್ ಅವರ ಅಂಗಡಿಯಲ್ಲಿ ಶಾಂತಿ ಸೌಹಾರ್ದತೆ, ಸಹಬಾಳ್ವೆ ಸಂದೇಶ ಸಾರುವ ಕಾರಣಕ್ಕಾಗಿ ಮಾಂಸ ಖರೀದಿಸಿ, ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.

ವೋಟ್ ಬ್ಯಾಂಕಿಗಾಗಿ ಜನರನ್ನು ಒಡೆದು, ದ್ವೇಷವನ್ನು ಎಲ್ಲೆಡೆ ಹಬ್ಬಿಸಲಾಗುತ್ತಿದೆ. ದ್ವೇಷವೇ ಸರ್ಕಾರಕ್ಕೆ ಶಕ್ತಿವರ್ಧಕವಾಗಿದೆ ಎಂದು ಆರೋಪಿಸಿದರು. ವಿರೋಧ ಪಕ್ಷಗಳು ಮಂಕಾಗಿ ಕುಳಿತಿರುವ ಈ ಹೊತ್ತಿನಲ್ಲಿ ಎಲ್ಲಾ ಜಾತಿಗಳಲ್ಲೂ ವಿವೇಕ ಇರುವವರು ಮಾತನಾಡಬೇಕು. ಕ್ರಿಯಾಶೀಲರಾಗಬೇಕು ಎಂದು ಕರೆ ನೀಡಿದರು.

ಹಳೇ ಪೇಪರ್, ಖಾಲಿ ಸೀಸ ಕೊಳ್ಳುತ್ತಿದ್ದ ಹೊಟ್ಟೆಪಾಡಿನ ಜನರು ಕಲುಷಿತ ವಾತಾವರಣಕ್ಕೆ ಹೆದರಿ ಹೊರಗಡೆ ಕಾಣಿಸುತ್ತಿಲ್ಲ. ಇವರಿಂದ ಪರಿಸರ ಉಳಿಯುತ್ತಿತ್ತು. ಮಠಗಳಲ್ಲಿರುವ ಮರಿಗಳು (ಶಿಷ್ಯಂದಿರು) ಈ ಕೆಲಸ ಮಾಡಲಿ. ಕನಿಷ್ಠ ದೇಶ ಸೇವೆಯಾದರೂ ಆಗುತ್ತದೆ ಎಂದು ಹೇಳಿದರು.

ಜಾತ್ರೆಗಳಲ್ಲಿ ಮುಸ್ಲಿಮರನ್ನು ನಿಷೇಧಿಸುವ ಮೂಲಕ ಬಡವರ ಹೊಟ್ಟೆ ಮೇಲೆ ಹೊಡೆಯಲಾಗಿದೆ. ಇದು ಧರ್ಮ ಅಲ್ಲ. ಇಂದು ಧರ್ಮದ ಮುಖವಾಡದಲ್ಲಿ ಅಧರ್ಮವೇ ಕುಣಿದು ಕುಪ್ಪಳಿಸುತ್ತಿದೆ. ಜನಸಮುದಾಯದ ವಿವೇಕವನ್ನು ಕಡಿಮೆ ಮಾಡುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು. ಮಾಂಸ ತಿನ್ನದವರೇ ಮಾಂಸ ಕತ್ತರಿವುದರ ಬಗ್ಗೆ ಹೆಚ್ಚು ಮಾತನಾಡುತ್ತಿದ್ದಾರೆ. ಹಾಗೆ ಕತ್ತರಿಸಬಾರದು. ಹೀಗೆ ಕತ್ತರಿಸಬಾರದು ಎಂದು ಅಪ್ಪಣೆ ಕೊಡಿಸಲು ಅವರು ಯಾರು ಎಂದು ಪ್ರಶ್ನಿಸಿದ ಅವರು, ತಿನ್ನೋದೆ ಪ್ರಾಣಿ ವಧೆ, ಇನ್ನು ಮಾನವತೆ ಪ್ರಶ್ನೆ ಎಲ್ಲಿ ಎಂದು ಪ್ರಶ್ನಿಸಿದರು.

ಮೈಸೂರಿನ ಎನ್‌ಸಿಸಿ ಎಎ ಸದಸ್ಯರಿಂದ 'ಪುನೀತ್ ಸಾಗರ್ ಅಭಿಯಾನ'

ಕುಕ್ಕರಹಳ್ಳಿ ಕೆರೆ ಪ್ರದೇಶದಲ್ಲಿ ಸ್ವಚ್ಛತಾ ಕಾರ್ಯ; 100 ಕೆಜಿಯಷ್ಟು ಪ್ಲಾಸ್ಟಿಕ್ ತ್ಯಾಜ್ಯ ಸಂಗ್ರಹ



ಮೈಸೂರು, ಏ.3(ಆರ್‌ಕೆಬಿ)– ಪುನೀತ್ ಸಾಗರ್ ಅಭಿಯಾನದ ಅಂಗವಾಗಿ ಮೈಸೂರಿನ ಎನ್‌ಸಿಸಿ ಎಎ ಸದಸ್ಯರು ಭಾನುವಾರ ಮೈಸೂರಿನ ಕುಕ್ಕರಹಳ್ಳಿ ಕೆರೆ ಪ್ರದೇಶವನ್ನು ಸ್ವಚ್ಛಗೊಳಿಸುವ ಕಾರ್ಯಕ್ರಮ ನಡೆಸಿದರು.

ಒಟ್ಟು ಆರು ಅಧಿಕಾರಿಗಳು, 15 ಪಿಐ, 22 ಎನ್‌ಸಿಸಿ ಎಎ ಸದಸ್ಯರು ಮತ್ತು 60 ಸಿಡಿಟಿಗಳು ಅಭಿಯಾನದಲ್ಲಿ ಭಾಗವಹಿಸಿ, ಕೆರೆಯ ಸುತ್ತಮುತ್ತಲಿನ ಪ್ರದೇಶವನ್ನು ಸ್ವಚ್ಛಗೊಳಿಸಿದರು.

ಸುಮಾರು 100 ಕೆಜಿಯಷ್ಟು ಪ್ಲಾಸ್ಟಿಕ್ ತ್ಯಾಜ್ಯವನ್ನು ಸಂಗ್ರಹಿಸಲಾಯಿತು. ವೈದ್ಯರು, ಇಂಜಿನಿಯರ್‌ಗಳು, ಉದ್ಯಮಿಗಳು ಸೇರಿದಂತೆ ಒಳಗೊಂಡಂತೆ ಪ್ರಸ್ತುತ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿರುವ ಹಳೆಯ ವಿದ್ಯಾರ್ಥಿಗಳು ಮಾತ್ರ ಭಾಗವಹಿಸುವ ಇಂತಹ ಮೊದಲ ಕಾರ್ಯಕ್ರಮ ಇದಾಗಿದೆ. ಕಾರ್ಯಕ್ರಮದಲ್ಲಿ ಗ್ರೂಪ್ ಕಮಾಂಡರ್ ಕರ್ನಲ್ ಆರ್.ಆರ್.ಮೆನನ್, ಆಡಮ್ ಅಧಿಕಾರಿ ಕರ್ನಲ್ ಶ್ರೀನಿವಾಸ್, ತರಬೇತಿ ಅಧಿಕಾರಿ ಕರ್ನಲ್ ದೀಪಕ್ ಸಂಘಿ, ಪ್ರಮೋದ್, ಎನ್‌ಸಿಸಿ ಎಎ ಸಂಯೋಜಕಿ ಡಾ.ಸುಷ್ಮಾ ಕೃಷ್ಣಮೂರ್ತಿ, ಬಿ.ಆರ್.ರಾಜೇಶ್, ಎನ್‌ಸಿಸಿ 13ನೇ ಕರ್ನಾಟಕ ಬೆಟಾಲಿಯನ್‌ನ ಎಂ.ಮಮತಾ ಪ್ರಸಾದ್ ಇನ್ನಿತರರು ಉಪಸ್ಥಿತರಿದ್ದರು.

'ಕಲಾಂಜಲಿ'ಯಲ್ಲಿ ಭರತನಾಟ್ಯ, ಗತಿ ನಾಟಕ ಪ್ರದರ್ಶನ

ಮೈಸೂರು, ಏ.3– ಮೈಸೂರಿನ ಕುವೆಂಪುನಗರದ ಗಾನಭಾರತಿ, ವೀಣೆ ಶೇಷಣ್ಣ ಭವನದಲ್ಲಿ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಮತ್ತು ಶ್ರೀ ನಟರಾಜ ಪರ್ಫಾರ್ಮಿಂಗ್ ಆರ್ಟ್ಸ್ ಸೆಂಟರ್ ವತಿಯಿಂದ ಏರ್ಪಡಿಸಿದ್ದ 'ಕಲಾಂಜಲಿ' ಕಾರ್ಯಕ್ರಮವನ್ನು ಬಿ.ಎಂ.ರಾಮಚಂದ್ರ ಉದ್ಘಾಟಿಸಿದರು.



ವಿದುಷಿ ನಾಗಶ್ರೀ ಫಣೀಂದ್ರ ಕುಮಾರ್ ಶಿಷ್ಯೆ ವಿದುಷಿ ಹರ್ಷಿತ ಡಿ.ಅಯ್ಯಂಗಾರ್ ಭರತನಾಟ್ಯ ಹಾಗೂ ಎಸ್.ಎನ್.ಸೇತುರಾಮ್ ರಚಿಸಿ ಎನ್.ಧನಂಜಯ್ ನಿರ್ದೇಶಿಸಿರುವ 'ಗತಿ' ನಾಟಕ ಪ್ರದರ್ಶನಗೊಂಡಿತು. ಕಾರ್ಯಕ್ರಮದಲ್ಲಿ ಎಚ್.ಎಸ್.ಉಮೇಶ್, ಸುಶೀಲೇಂದ್ರರಾವ್ ಕುಲಕರ್ಣಿ, ಬಿ.ಸಿ.ಭವ್ಯ, ಶ್ರೀ ನಟರಾಜ ಪರ್ಫಾರ್ಮಿಂಗ್ ಆರ್ಟ್ಸ್ ಸೆಂಟರ್ ಕಾರ್ಯದರ್ಶಿ ಆರ್.ಫಣೀಂದ್ರಕುಮಾರ್ ಉಪಸ್ಥಿತರಿದ್ದರು.

ಮಾನವ ಸಾಗಾಣಿಕೆಯಂತಹ ಅಮಾನವೀಯ ಕೃತ್ಯಗಳ ಹತ್ತಿಕ್ಕುವ ಕಾನೂನು ಪರಿಣಾಮಕಾರಿಯಾಗಿ ಜಾರಿ ಆಗಬೇಕಿದೆ

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ, ಹಿರಿಯ ನ್ಯಾಯಾಧೀಶ ದೇವರಾಜ್ ಭೂತೆ ಅಭಿಮತ

ಮೈಸೂರು, ಏ.3(ಎಸ್‌ಬಿಡಿ)– ಮಾನವ ಸಾಗಾಣಿಕೆಯಂತಹ ಅಮಾನವೀಯ ಕೃತ್ಯಗಳನ್ನು ಮಟ್ಟ ಹಾಕುವ ಕಾನೂನುಗಳಿದ್ದು, ಅವು ಪರಿಣಾಮಕಾರಿಯಾಗಿ ಜಾರಿಯಾಗಬೇಕಿದೆ ಎಂದು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯೂ ಆದ ಹಿರಿಯ ಸಿವಿಲ್ ನ್ಯಾಯಾಧೀಶ ದೇವರಾಜ್ ಭೂತೆ ಹೇಳಿದರು.

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸಹಯೋಗದೊಂದಿಗೆ ಒಡನಾಡಿ ಸೇವಾ ಸಂಸ್ಥೆಯಲ್ಲಿ ಏರ್ಪಡಿಸಲಾಗಿದ್ದ 'ಮಾನವ ಸಾಗಾಣಿಕೆಯ ಮಜಲುಗಳು' ಅರಿವು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಪ್ರಸ್ತುತ ಸಮಾಜದಲ್ಲಿ ಮಾನವ ಸಾಗಾಣಿಕೆ, ಲೈಂಗಿಕ ಶೋಷಣೆ ಇನ್ನಿತರ ಅಪರಾಧಗಳು ವಿವಿಧ ರೂಪಗಳನ್ನು ಪಡೆದುಕೊಳ್ಳುತ್ತಿವೆ. ಜಗತ್ತಿನಲ್ಲಿ ಗಂಟೆಗೆ 15 ಮಹಿಳೆಯರು ಮಾನವ ಸಾಗಾಣಿಕೆ ಕೃತ್ಯಕ್ಕೆ ತುತ್ತಾಗುತ್ತಿದ್ದಾರೆ. ಸಾಮಾಜಿಕ, ಆರ್ಥಿಕ ಪರಿಸ್ಥಿತಿ, ಅಸಹಾಯಕತೆಯಿಂದ ನೊಂದಿರುವ ಮಹಿಳೆಯರನ್ನು ವಂಚಿಸಲಾಗುತ್ತಿದೆ. ಇಂತಹ ಅಮಾನವೀಯ ಕೃತ್ಯಗಳನ್ನು ಮಟ್ಟ ಹಾಕುವಂತಹ ಕಾನೂನುಗಳು ನಮ್ಮಲ್ಲಿ ಸಾಕಷ್ಟಿದ್ದರೂ ಅವು ಪರಿಣಾಮಕಾರಿಯಾಗಿ ಜಾರಿಯಾಗುತ್ತಿಲ್ಲ ಎಂದು ವಿಷಾದ ವ್ಯಕ್ತಪಡಿಸಿದರು.

ವಿದ್ಯಾವರ್ಧಕ ಕಾನೂನು ಕಾಲೇಜು ಹಾಗೂ ಅಧ್ಯಯನ ಸಂಸ್ಥೆ ನಿರ್ದೇಶಕ ಕೆ.ಬಿ.ವಾಸುದೇವ್ ಮಾತನಾಡಿ, ಭಾರತ ದೇಶವನ್ನು ಮಾನವ



ಹಕ್ಕುಗಳ ಪ್ರಪಂಚ ಎನ್ನುತ್ತೇವೆ. ಆದರೆ ಜಗತ್ತು ಬದಲಾಗಿದ್ದು, ಆಧುನಿಕತೆ ನೆಪದಲ್ಲಿ ಮಹಿಳೆಯರು ಮತ್ತು ಮಕ್ಕಳ ಮೇಲೆ ಲೈಂಗಿಕ ಶೋಷಣೆ ನಡೆಯುತ್ತಿದೆ. ಮಹಿಳಾ ಸಬಲೀಕರಣ ಹಾಗೂ ಎಲ್ಲಾ ರೀತಿಯ ಹಕ್ಕುಗಳನ್ನು ನೀಡಿದ್ದೇವೆ ಎಂದು ಭಾಷಣಗಳಲ್ಲಿ ಕೇಳುತ್ತೇವೆ. ಆದರೆ ನಿಜವಾಗಿ ಮಹಿಳೆಯರನ್ನು ವಸ್ತುಗಳಂತೆ ಕಾಣುವ ಮನಸ್ಸುಗಳು ಹೆಚ್ಚಾಗಿವೆ. ಇಂತಹ ಸಂದರ್ಭದಲ್ಲಿ ಎಲ್ಲಾ ರೀತಿಯ ಅಡೆತಡೆಗಳನ್ನು ಮೀರಿ ಸ್ಟ್ಯಾನ್ಲಿ–ಪರಶು ಕಳೆದ ಮೂರು ದಶಕಗಳಿಂದ ಮಹಿಳೆಯರು ಮತ್ತು ಮಕ್ಕಳ ರಕ್ಷಣಾ ಸೇವೆಯಲ್ಲಿ ತೊಡಗಿರುವುದು ಅಭಿನಂದನಾರ್ಹ ಎಂದು ಶ್ಲಾಘಿಸಿದರು.

ಒಡನಾಡಿ ಸಂಸ್ಥೆ ನಿರ್ದೇಶಕ ಸ್ಟ್ಯಾನ್ಲಿ ಮಾತನಾಡಿ, ಮಾನವ ಕಳ್ಳ ಸಾಗಾಣಿಕೆ ತಡೆಯಲು ಸಾರ್ವಜನಿಕರ ಸಹಕಾರ ಅತೀಮುಖ್ಯ. ಇಂತಹ ಕೃತ್ಯಗಳ ಬಗ್ಗೆ ತಿಳಿದ ತಕ್ಷಣ ಮಾಹಿತಿ ನೀಡಿದರೆ ಸಾಗಾಣಿಕೆದಾರರ ಮೇಲೆ ದಾಳಿ ಮಾಡಿ, ಸಂತ್ರಸ್ತರ ರಕ್ಷಿಸಬಹುದು. ನನ್ನ ಪ್ರಕಾರ ಮಾಹಿತಿ ಕೊಟ್ಟವನೇ ದೇವರಾಗುತ್ತಾನೆ. ಮಹಿಳೆಯರನ್ನು ನಿರ್ಜೀವವಾದ ಭೋಗದ ವಸ್ತುವಾಗಿ ಅಳೆಯುವ ಹೀನ ಮನಸ್ಥಿತಿ ಇರುವವರ ವಿರುದ್ಧ ಹೋರಾಡುತ್ತಲೇ ಇರುತ್ತೇವೆ. ಇಲ್ಲವಾದರೆ ನಾವು ಸತ್ತ ಸ್ಥಿತಿಯಲ್ಲಿ ಇರಬೇಕಾಗುತ್ತದೆ ಎಂದರು.

ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರೂ ಆದ ಒಡನಾಡಿಯ ಮತ್ತೊರ್ವ ನಿರ್ದೇಶಕ ಪರಶುರಾಮ್ ಮಾತನಾಡಿ, ಮಾನವ ಕಳ್ಳ ಸಾಗಾಣಿಕೆ ತಡೆಯಬೇಕಿದ್ದ ಆಯೋಗಗಳು ನಿಷ್ಕ್ರಿಯವಾಗಿವೆ. ಜವಾಬ್ದಾರಿ ನಿರ್ವಹಿಸಬೇಕಾದವರು ಟಿಎ, ಡಿಎ(ಭತ್ಯೆ)ಗೆ ಬಾಯಿ ತೆರೆದುಕೊಂಡು ಕಾಯುವ ಹೀನಾಯ ಸ್ಥಿತಿಯಲ್ಲಿದ್ದಾರೆ. ಇಂತಹ ವ್ಯವಸ್ಥೆಯ ವಿರುದ್ಧ ಯುವ ಜನರು ಸಿಡಿದೇಳುವುದು ಅನಿವಾರ್ಯವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಮಂಜುಳಾ ಪಾಟೀಲ್, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಪ್ಯಾನಲ್ ವಕೀಲ ಸುಂದರ್ ರಾಜ್, ವಕೀಲ ಮಂಜುನಾಥ್, ಮಹಿಳಾ–ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿಗಳು, ಸಾಂತ್ವನ ಕೇಂದ್ರದ ಆಪ್ತ ಸಮಾಲೋಚಕರು ಇನ್ನಿತರರಿದ್ದರು.

ಸಮಾಜಕ್ಕೆ ನಾವೇನು ಮಾಡಿದ್ದೇವೆಂಬುದು ಮುಖ್ಯ: ಶಾಸಕ ಜಿಟಿಡಿ

ಅನಗಳ್ಳಿ ಗ್ರಾಮದಲ್ಲಿ ಬುದ್ಧ, ಡಾ.ಅಂಬೇಡ್ಕರ್ ಪುತ್ಥಳಿ ಅನಾವರಣ



ಮೈಸೂರು, ಏ.3(ಆರ್‌ಕೆಬಿ)– ಸಮಾಜಕ್ಕೆ ನಾವು ಏನು ಮಾಡಿದ್ದೇವೆ ಎಂಬುದನ್ನು ನೋಡಬೇಕೇ ಹೊರತು ಸಮಾಜ ನನಗೆ ಏನು ಮಾಡಿದೆ ಎನ್ನುವುದು ಅಲ್ಲ ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಹೇಳಿದರು.

ಮೈಸೂರು ತಾಲೂಕಿನ ಅನಗಳ್ಳಿ ಗ್ರಾಮದಲ್ಲಿ ಜೈ ಭೀಮ್ ಯುವಕರ ಸಂಘ ಏರ್ಪಡಿಸಿದ್ದ ತಥಾಗತ ಭಗವಾನ್ ಗೌತಮ ಬುದ್ಧರೂಪ ಅನಾವರಣ ಹಾಗೂ ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರ ಪುತ್ಥಳಿ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಪುತ್ಥಳಿ ಅನಾವರಣಗೊಳಿಸಿ ಅವರು ಮಾತನಾಡಿದರು.

ವಿಶ್ವದಲ್ಲೇ ಅತ್ಯುತ್ಕೃಷ್ಟ ಸಂವಿಧಾನವನ್ನು ನಮ್ಮ ಭಾರತ ಹೊಂದಿದೆ ಎಂದರೆ ಅದಕ್ಕೆ ಬಾಬಾ ಸಾಹೇಬ್ ಅಂಬೇಡ್ಕರ್ ಅವರೇ ಪ್ರಧಾನ ಶಿಲ್ಪಿ. ಸೃಜನಶೀಲ ವ್ಯಕ್ತಿತ್ವದ ಕ್ರಿಯಾಶೀಲ ವ್ಯಕ್ತಿ ಎಂದೇ ಹೆಸರಾಗಿದ್ದ ಅವರು ಭಾರತ ಕಂಡ ಅದ್ಭುತ ಶಕ್ತಿ ಎಂದರು.

ಅನ್ಯಾಯ, ಅಸಮಾನತೆ ಹಾಗೂ ಶೋಷಣೆಗಳ ವಿರುದ್ಧ ಹೋರಾಡಿದ ಡಾ.ಅಂಬೇಡ್ಕರ್ ಚಿಂತನೆಗಳು ಇಂದಿಗೂ ಅಮರ. ದಮನಿತರ ದನಿಯಾಗಿ, ಶೋಷಿತರಿಗೆ ಕಿವಿಯಾಗಿ, ಅವರೆಲ್ಲರಿಗೂ ಸ್ವಾಭಿಮಾನದ ಬದುಕಿನ ದಾರಿ ತೋರಿಸಿದ ಧೀಮಂತ ನಾಯಕ ಎಂದು ಹೇಳಿದರು.

ಯುವಕರಲ್ಲಿ ಶಿಕ್ಷಣ, ಸಂಘಟನೆ, ಒಗ್ಗಟ್ಟು ಇರಬೇಕು. ಯುವಕರಲ್ಲಿ ಹೋರಾಟದ ಪರಿಕಲ್ಪನೆ ಬೆಳೆಯಬೇಕು. ಯುವಕರಿಗೆ ಅಂಬೇಡ್ಕರ್ ವಿಚಾರದಾರೆ, ಬುದ್ಧನ ಶಾಂತಿ ತತ್ವ, ತಾಳ್ಮೆಯನ್ನು ಹೇಳಿಕೊಡುವ ಕೆಲಸಗಳಾಗಬೇಕು ಎಂದರು.

ಹುಟ್ಟು ಸಾವಿನ ನಡುವೆ ಮಾಡಿದ ಒಳ್ಳೆ ಕೆಲಸಗಳು ಯಾವತ್ತೂ ಶಾಶ್ವತವಾಗಿ ಉಳಿಯುತ್ತದೆ. ಸಮಾಜಕ್ಕೆ ಏನು ನೀಡುತ್ತೇವೆ ಎಂಬುದನ್ನು ನೋಡಬೇಕೇ ಹೊರತು ಸಮಾಜ ನನಗೆ ಏನು ನೀಡುತ್ತದೆ ಎನ್ನುವುದನ್ನು ಮರೆಯಬೇಕು. ಇದಕ್ಕೆ ಡಾ. ಪುನೀತ್ ರಾಜ್‌ಕುಮಾರ್ ನಿದರ್ಶನ ಎಂದರು.

ಅಕ್ಕಮಹಾದೇವಿ, ಅಲ್ಲಮಪ್ರಭು ದಾರಿಯಲ್ಲೇ ಸಾಗಿದರು ಬಸವಣ್ಣ, ಸಾಹಿತ್ಯ ಕ್ಷೇತ್ರಕ್ಕೆ ವಚನಗಳ ಮೂಲಕ ಅಪೂರ್ವವಾದ ಕೊಡುಗೆ ನೀಡಿರುವ ಇವರ ಪರಿಕಲ್ಪನೆಯನ್ನು ಎಲ್ಲರೂ ಪಾಲಿಸಬೇಕು ಎಂದು ನುಡಿದರು. ಕಾರ್ಯಕ್ರಮದಲ್ಲಿ ಕರ್ನಾಟಕ ಭಿಕ್ಕು ಮಹಾ ಸಂಘದ ಉಪಾಧ್ಯಕ್ಷ ಬೋಧಿ ರತ್ನ ಭಂತೇಜಿ, ಮಾಜಿ ಸಂಸದ ಆರ್.ಧ್ರುವನಾರಾಯಣ್, ಜಿಪಂ ಮಾಜಿ ಅಧ್ಯಕ್ಷ ಕೆ.ಮರೀಗೌಡ, ಮಾಜಿ ಮೇಯರ್ ಪುರುಷೋತ್ತಮ, ಗ್ರಾಪಂ. ಸದಸ್ಯರಾದ ಬಸವೇಗೌಡ, ಗುರುಸ್ವಾಮಿ, ಮಹದೇವ ಸ್ವಾಮಿ, ಮಲ್ಲೇಶ್, ಸುಗ್ರೀವ ಇನ್ನಿತರರು ಉಪಸ್ಥಿತರಿದ್ದರು.

ಒಂದನೇ ಪುಟದಿಂದ

ಪ್ರವಾಸೋದ್ಯಮ ಅಭಿವೃದ್ಧಿ ಕೈಬಿಡಿ

ಮೇಜರ್ ಜನರಲ್ (ನಿವೃತ್ತ) ಡಾ.ಎಸ್.ಜಿ.ಒಂಬತ್ಕೆರೆ ಮಾತನಾಡಿ, ಸಾಂಸ್ಕೃತಿಕ ಮತ್ತು ಧಾರ್ಮಿಕ ಪ್ರವಾಸೋದ್ಯಮ ಹೊಂದಿರುವ ಚಾಮುಂಡಿ ಬೆಟ್ಟದಲ್ಲಿ ಇನ್ನೊಂದು ತರದ ಪ್ರವಾಸೋದ್ಯಮದ ಅಭಿವೃದ್ಧಿಯೇ ಹೆಚ್ಚಾಗಿ ಆಗುತ್ತಿದ್ದು, ಅದು ಲಾಭ–ವಾಣಿಜ್ಯ ಕೇಂದ್ರೀತ ಪ್ರವಾಸೋದ್ಯಮವಾಗಿದೆ. ಇದಕ್ಕೆ ಸರ್ಕಾರವೇ ಹೆಚ್ಚು ಒತ್ತು ನೀಡುತ್ತಿದೆ. ಇದಕ್ಕೆ ಪೂರಕವಾಗಿ ರೋಪ್ ವೇ ಅನ್ನು ಇದೀಗ ಮೂರನೇ ಬಾರಿಗೆ ಸರ್ಕಾರ ಪ್ರಸ್ತಾಪಿಸಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಸರ್ಕಾರದ ದೃಷ್ಟಿಯಲ್ಲಿ ಚಾಮುಂಡಿಬೆಟ್ಟದ ಅಭಿವೃದ್ಧಿ ಎಂದರೆ ಲಾಭ ಮತ್ತು ವಾಣಿಜ್ಯ ಆಧಾರಿತ ಅಭಿವೃದ್ಧಿಯಾಗಿದೆ. ಈ ರೀತಿಯ ಅಭಿವೃದ್ಧಿಯಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ನಾವು ಸರ್ಕಾರಕ್ಕೆ ಮನವರಿಕೆ ಮಾಡಿಕೊಡಬೇಕಿದೆ. ಬೆಟ್ಟ ಪವಿತ್ರ ಕ್ಷೇತ್ರ. ಇದನ್ನು ಉಳಿಸಿಕೊಳ್ಳಲು ಅನಗತ್ಯವಾದ ಲಾಭಾಧಾರಿತ ಪ್ರವಾಸೋದ್ಯಮ ಕೈಬಿಡಬೇಕು ಎಂದು ಒತ್ತಾಯಿಸಿದರು.

ಲಾಭ–ವಾಣಿಜ್ಯ ಕೇಂದ್ರಿತ ಪ್ರವಾಸೋದ್ಯಮದಿಂದ ಪರಿಸರದ ಮೇಲೆ ದುಷ್ಪರಿಣಾಮ ಉಂಟಾಗಲಿದೆ. ಮಾ.29ರಂದು ಸುಪ್ರೀಂಕೋರ್ಟ್‌ನಲ್ಲಿ ಮೂರು ನ್ಯಾಯಮೂರ್ತಿಗಳನ್ನು ಒಳಗೊಂಡ ನ್ಯಾಯಪೀಠವು ಒಂದು ತೀರ್ಪು ನೀಡಿದ್ದು, ಈ ತೀರ್ಪಿನಲ್ಲಿರುವ ಅಂಶಗಳು ನಮ್ಮ ಹೋರಾಟಕ್ಕೆ ಬಲ ನೀಡಲಿವೆ. ಪರಿಸರ ಎಂಬುದು ನಾಗರಿಕ ಹಕ್ಕುಗಳಿಗಿಂತಲೂ ಮುಖ್ಯವಾದುದು. ನಾಗರಿಕ ಹಕ್ಕುಗಳು ಪರಿಸರಕ್ಕೆ ಅಧೀನವಾಗಿವೆ. ಸರ್ಕಾರ ಪರಿಸರ ಉಳಿಸಬೇಕು. ಅದೇ ಸಂವಿಧಾನದ ಆಶಯ ಎಂಬಿತ್ಯಾದಿ ಅಂಶಗಳನ್ನು ಸದರಿ ತೀರ್ಪಿನಲ್ಲಿ ಹೇಳಲಾಗಿದೆ. ಇದೇ ಅಂಶಗಳ ಆಧಾರದಲ್ಲಿ ನಾವು ನ್ಯಾಯಾಲಯಕ್ಕೂ ಹೋಗಬಹುದು. ಜೊತೆಗೆ ಮುಖ್ಯಮಂತ್ರಿಗಳಿಗೆ ಸಲ್ಲಿಸಲು ಉದ್ದೇಶಿಸಿರುವ ಮನವಿ ಪತ್ರದಲ್ಲಿ ಇವುಗಳನ್ನು ಉಲ್ಲೇಖಿಸಬಹುದು ಎಂದು ಸಲಹೆ ನೀಡಿದರು.

ವನ್ಯಜೀವಿ ತಜ್ಞ ಕೃಪಾಕರ ಮಾತನಾಡಿ, ಚಾಮುಂಡಿ ಬೆಟ್ಟ ಲಕ್ಷಾಂತರ ವರ್ಷಗಳಿಂದ ಬಿರುಗಾಳಿ–ಮಳೆಗಾಳಿ ಎಲ್ಲವನ್ನೂ ತಡೆದುಕೊಂಡು ನಿಂತಿದೆ. ಆದರೆ ಈಗ ಮಾನವನಿಂದ ತನ್ನನ್ನು ತಾನು ಉಳಿಸಿಕೊಳ್ಳುವ ಪ್ರಮೇಯ ಉದ್ಭವಿಸಿದೆ. ಸಾಮಾನ್ಯವಾಗಿ ನಾವು ಬೆಟ್ಟ, ಗುಡ್ಡ ಕಾಡು ಬಹಳ ಬಲಿಷ್ಠ ಎಂದುಕೊಳ್ಳುತ್ತೇವೆ. ಯಾವುದೇ ಪ್ರತಿರೋಧ ತಡೆದುಕೊಳ್ಳುತ್ತವೆ ಎಂದು ಭಾವಿಸುತ್ತೇವೆ. ಆದರೆ ಅದು ತಪ್ಪು ಎಂದು ಹೇಳಿದರು.

ಜಲತಜ್ಞ ಪ್ರೊ.ಯು.ಎನ್.ರವಿಕುಮಾರ್ ಮಾತನಾಡಿ, ಚಾಮುಂಡಿಬೆಟ್ಟದ ಜಲಾನಯನ ವ್ಯಾಪ್ತಿ ಸುಮಾರು 16 ಚದರ ಕಿ.ಮೀ. ಇದೆ. ಚಾಮುಂಡಿಬೆಟ್ಟ 1,500 ಎಕರೆಯಷ್ಟು ವಿಸ್ತೀರ್ಣ ಹೊಂದಿದೆ. ಬೆಟ್ಟ ಕುರುಚಲು ಕಾಡಿನ ಲಕ್ಷಣ ಹೊಂದಿದೆ. ಇದರ ಸಂರಕ್ಷಣೆಗೆ ಮಹಾರಾಜರ ಕಾಲದಿಂದಲೂ ಸಾಕಷ್ಟು ಪ್ರಯತ್ನ ಆಗಿದೆ. 1930–40ರ ದಶಕದಲ್ಲಿ ಬೆಳೆದ ಮರಗಳನ್ನು ಬೇರುಸಹಿತ ತಂದು ನೆಡುವ ಪ್ರಯತ್ನ ನಡೆದಿತ್ತು. ಈ ಪೈಕಿಗೆ ಕೆಲವು ಮಾತ್ರ ಉಳಿದವು. ಕುರುಚಲು ಪ್ರದೇಶ ಕಂಡರೆ ಕಾಡು ಬೆಳೆಸಬೇಕೆಂದು ಪ್ರಯತ್ನಿಸುವುದು ಸಾಮಾನ್ಯ. ಆದರೆ ಆಯಾಯ ಪ್ರದೇಶಕ್ಕೆ ಸ್ವಾಭಾವಿಕ ಕಾಡು ಹೇಗೆ ಇರುತ್ತದೋ ಅದರಂತೆಯೇ ಬಿಡಬೇಕು ಎಂದರು.

ನೈಸರ್ಗಿಕ ಸಂಪನ್ಮೂಲಗಳಾದ ಮಣ್ಣು, ನೀರು, ಸಸ್ಯ ಒಳಗೊಂಡಂತೆ ಜೀವರಾಶಿಯ ಜೊತೆಗೆ ಮನುಷ್ಯರನ್ನೂ ಸೇರಿದಂತೆ ಈ ಎಲ್ಲದಕ್ಕೂ ಪೂರಕವಾಗಿ ಜಲಾನಯನ ಪ್ರದೇಶದ ಅಭಿವೃದ್ಧಿ ಮಾಡಬೇಕು. ಆದರೆ ಬೆಟ್ಟದ ವಿಚಾರದಲ್ಲಿ ಆಗುತ್ತಿರುವ ಅಭಿವೃದ್ಧಿ ಕೇವಲ ಮನಷ್ಯ ಕೇಂದ್ರೀಕೃತವಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಚಾಮುಂಡಿ ಬೆಟ್ಟದ ರಚನೆಯು ಮೇಲ್ಭಾಗದಲ್ಲಿ ಮಟ್ಟವಾದ ಪ್ರದೇಶವಿದೆ. ಕೆಳಗೆ ಇಳಿಜಾರು ಇದ್ದರೆ, ಇನ್ನೂ ಕೆಳಭಾಗದಲ್ಲಿ ಇಳಿಜಾರು ಕಡಿಮೆ ಪ್ರದೇಶ ಹೊಂದಿದೆ. ಮೇಲ್ಭಾಗದಲ್ಲಿ ಸಾಕಷ್ಟು ನೀರು ನಿಲ್ಲಲು ಅವಕಾಶವಿದೆ. ಮಣ್ಣಿನಲ್ಲಿ ಶೇಖರಣೆಯಾಗಿ ನಿಧಾನವಾಗಿ ನೀರು ಹರಿಯುತ್ತದೆ. ಹಾಗಾಗಿ ಪ್ರವಾಹದ ಹಾವಳಿ ಇಲ್ಲಿ ಇಲ್ಲ ಎಂದರು.

ಬೆಟ್ಟಕ್ಕೆ ಬಫರ್ ಜೋನ್ ಗುರುತಿಸುವುದೂ ಅಗತ್ಯವಾಗಿದೆ. ಬೆಟ್ಟದ ಜಲಾನಯನ ಪ್ರದೇಶದ ಇನ್ನೊಂದು ವಿಶೇಷತೆ ಬೆಟ್ಟದ ಕೆಳಗಡೆಯ ಸುತ್ತಮುತ್ತ ಕಾರಂಜಿ ಕೆರೆ ಸೇರಿದಂತೆ 20 ಕೆರೆಕಟ್ಟೆಗಳಿವೆ. ಇವು ಬೆಟ್ಟದಿಂದ ಬಂದ ನೀರನ್ನು ಹಿಡಿದು ಇಂಗಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಿವೆ. ಬೆಟ್ಟದ ವಿಚಾರದಲ್ಲಿ ಪರಿಸರಕ್ಕೆ ಪೂರಕ ಮತ್ತು ಸುಸ್ಥಿರ ಅಭಿವೃದ್ಧಿಗೆ ಆದ್ಯತೆ ನೀಡಬೇಕು ಎಂದು ಹೇಳಿದರು.

ಭೂಗರ್ಭ ಶಾಸ್ತ್ರಜ್ಞ ಪ್ರೊ.ಜನಾರ್ಧನ ಮಾತನಾಡಿ, ನೈಸರ್ಗಿಕ, ಭೌತಿಕ ಮತ್ತು ರಾಸಾಯನಿಕ ಪ್ರಕ್ರಿಯೆಗಳ ಹಿನ್ನೆಲೆಯಲ್ಲಿ ಚಾಮುಂಡಿ ಬೆಟ್ಟ ತನ್ನ ಶಕ್ತಿ ಕಳೆದುಕೊಳ್ಳುತ್ತಿದೆ. ಹೀಗೆ ಕ್ಷೀಣಿಸುವ ಸಂದರ್ಭದಲ್ಲಿ ಭೂಮಿ ಘಾಸಿಗೊಳಿಸುವ ಕಾಮಗಾರಿ ಕೈಗೊಂಡರೆ ಬೆಟ್ಟದ ಮಣ್ಣು ಅವುಗಳ ತೂಕ ತಡೆಯುವ ಶಕ್ತಿ ಕಳೆದುಕೊಳ್ಳುತ್ತವೆ. ವಾಹನಗಳ ಭರಾಟೆ ತೆಡುಕೊಳ್ಳುವ ಶಕ್ತಿಯೂ ಇಲ್ಲವಾಗಿದ್ದು, ಈ ಬಗ್ಗೆಯೂ ಆಲೋಚಿಸುವುದು ಅಗತ್ಯವಾಗಿದೆ. ಬೆಟ್ಟದಲ್ಲಿ ಪಶ್ಚಿಮ ಮುಖದಲ್ಲಿ ಮಾತ್ರ ಭೂ ಕುಸಿತ ಉಂಟಾಗುತ್ತಿದೆ. ಮುಂದೆ ಉಂಟಾಗಬಹುದಾದ ಭೂ ಕುಸಿತ ತಡೆಯಲು ಉದ್ದೇಶಿತ ಕಾಮಗಾರಿಗಳ ಪ್ರಕ್ರಿಯೆನ್ನು ಕೂಡಲೇ ಕೈಬಿಡಬೇಕು. ಬೆಟ್ಟದಲ್ಲಿ ಸ್ಥಿರ ಮತ್ತು ಅಸ್ಥಿರ ವಲಯಗಳನ್ನು ಗುರಿಸುವ ಕಾರ್ಯ ಆಗಬೇಕು ಎಂದರು.

ಗೂಗಲ್ ಮೀಟ್ ಮೂಲಕ ಪರಿಸರ ತಜ್ಞ ನಾಗೇಶ್ ಹೆಗಡೆ, ಪರಿಸರ ಹೋರಾಟಗಾರರೂ ಆದ ಲೇಖಕಿ ರೂಪಾ ಹಾಸನ, ಪಶ್ಚಿಮ ಘಟ್ಟದ ಪರಿಸರ ಹೋರಾಟಗಾರ ಶಶಿಧರ ಶೆಟ್ಟಿ ತಮ್ಮ ಅಭಿಪ್ರಾಯ ಮಂಡಿಸಿದರು. ಪರಿಸರ ಬಳಗ ಮತ್ತು ಚಾಮುಂಡಿ ಬೆಟ್ಟ ಉಳಿಸಿ ಸಮಿತಿ ಸಂಸ್ಥಾಪಕ ಸದಸ್ಯ ಪರಶುರಾಮೇಗೌಡ ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರಗತಿಪರ ಚಿಂತಕ ಪ್ರೊ.ಕಾಳೇಗೌಡ ನಾಗವಾರ, ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಡಾ.ಪ್ರಧಾನ ಗುರುದತ್ ಸೇರಿದಂತೆ ಇತರರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಗಣ್ಯರಿಂದ ಶುಭಾಶಯ

ಶುಭಾಶಯ ಹೇಳಿದ್ದಾರೆ. "ರಂಜಾನ್ ಮುಬಾರಕ್! ಈ ಪವಿತ್ರ ಮಾಸವು ಎಲ್ಲರಿಗೂ ಉತ್ತಮ ಆರೋಗ್ಯ, ಶಾಂತಿ ಮತ್ತು ಸಮೃದ್ಧಿಯನ್ನು ತರಲಿ," ಎಂದು ಟ್ವೀಟ್ ಮಾಡಿದ್ದಾರೆ.

ಆರೋಗ್ಯ ಸಚಿವ ಡಾ.ಕೆ.ಸುಧಾಕರ್, ರಂಜಾನ್‌ನ ಈ ಪವಿತ್ರ ತಿಂಗಳು ಎಲ್ಲರಿಗೂ ಶಾಂತಿ ಮತ್ತು ಸಂತೋಷವನ್ನು ತರಲಿ. ಸರ್ವಶಕ್ತನು ನಮ್ಮೆಲ್ಲರ ಜೀವನವನ್ನು ಸಮೃದ್ಧಿ ಮತ್ತು ಬೆಳಕಿನಿಂದ ತುಂಬಲಿ ಎಂದು ಹಾರೈಸಿದ್ದಾರೆ. ಮಾಜಿ ಮುಖ್ಯಮಂತ್ರಿ ಹೆಚ್ ಡಿ ಕುಮಾರಸ್ವಾಮಿ, ಪವಿತ್ರ ರಂಜಾನ್ ಭಕ್ತಿ, ಸಹನೆ, ಸೇವೆಯ ಮಹೋನ್ನತ ಸಂದೇಶ ಹೊತ್ತು ತಂದಿದೆ. ಹಸಿವುಮುಕ್ತ ಸಮಾಜ ಸೃಷ್ಟಿಗೆ ಉಪವಾಸವು ಉಪಯುಕ್ತ ಪ್ರೇರಣೆ. ಭಾವೈಕ್ಯತೆ, ಸಮೃದ್ಧ, ಸೌಹಾರ್ದತೆಯೊಂದಿಗೆ ಕರುನಾಡು ಇನ್ನಷ್ಟು ಬೆಳಗಲಿ ಎಂಬ ಪ್ರಾರ್ಥನೆಯೊಂದಿಗೆ ಸಮಸ್ತ ಮುಸ್ಲಿಂ ಬಾಂಧವರಿಗೆ ರಂಝಾನ್ ಮಾಸಾರಂಭದ ಶುಭಾಶಯಗಳನ್ನು ಕೋರುತ್ತೇನೆ ಎಂದು ಟ್ವೀಟ್ ಮೂಲಕ ಶುಭಾಶಯ ತಿಳಿಸಿದ್ದಾರೆ.

ಸಂಬಂಧಿಕರಿಂದ ಅಣ್ಣನ ಕೊಲೆ

ಯುವತಿಯ ಸಂಬಂಧಿಕರು ಕಳೆದ ವಾರ ವಿನೋದನ ಮೇಲೆ ಹಲ್ಲೆ ನಡೆಸಿ ಆತನ ಬೈಕ್ ಜಖಂಗೊಳಿಸಿದ್ದರು. ಯುಗಾದಿ ಹಬ್ಬಕ್ಕಾಗಿ ಊರಿಗೆ ಬಂದಿದ್ದ ಚಿಕ್ಕರಾಜು ಶನಿವಾರ ರಾತ್ರಿ 9.30ರ ಸುಮಾರಿನಲ್ಲಿ ತನ್ನ ತಮ್ಮನ ಮೇಲೆ ಹಲ್ಲೆ ನಡೆಸಿದ ವಿಚಾರವಾಗಿ ಹೊಸೂರು ಬಡಾವಣೆಯ ರಾಮ ಮಂದಿರದ ಬಳಿ ಯುವತಿಯ ಸಂಬಂಧಿಕರೊಂದಿಗೆ ಮಾತನಾಡಿದ್ದಾನೆ ಎಂದು ಹೇಳಲಾಗಿದ್ದು, ಈ ವೇಳೆ ಪರಿಸ್ಥಿತಿ ವಿಕೋಪಕ್ಕೆ ತಿರುಗಿ ಯುವತಿ ಕಡೆಯವರು ಚಿಕ್ಕರಾಜುವನ್ನು ಚಾಕುವಿನಿಂದ ಇರಿದಿದ್ದಾರೆ. ತೀವ್ರವಾಗಿ ಗಾಯಗೊಂಡ ಆತನನ್ನು ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯೆ ಮೃತಪಟ್ಟಿದ್ದಾನೆ.

ಈ ಸಂಬಂಧ ಯುವತಿಯ ಸಂಬಂಧಿಕರಾದ ಕರಿಯಪ್ಪ, ಕಿರಣ, ಅಭಿಷೇಕ್, ಮಹೇಶ್, ಪ್ರಸಾದ್ ಹಾಗೂ ವಿನೋದ್ ಎಂಬುವರ ವಿರುದ್ಧ ಚಿಕ್ಕರಾಜು ತಮ್ಮ ವಿನೋದ್ ಗುಂಡ್ಲುಪೇಟೆ ಪಟ್ಟಣ ಠಾಣೆಗೆ ದೂರು ಸಲ್ಲಿಸಿದ್ದಾನೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ಆರೋಪಿಗಳಿಗಾಗಿ ಹುಡುಕಾಟ ನಡೆಸಿದ್ದಾರೆ. ಘಟನಾ ಸ್ಥಳಕ್ಕೆ ಎಎಸ್‌ಪಿ ಸುಂದರ ರಾಜ್, ಡಿವೈಎಸ್‌ಪಿ ಪ್ರಿಯದರ್ಶಿನಿ ಸಾಣೆಕೊಪ್ಪ, ಗುಂಡ್ಲುಪೇಟೆ ಠಾಣೆ ಇನ್ಸ್‌ಪೆಕ್ಟರ್ ಮಹದೇವ ಸ್ವಾಮಿ, ಸಿಬ್ಬಂದಿಗಳಾದ ಹಸಗೂಲಿ ರವಿ, ಮಹೇಶ್, ಚಿನ್ನಸ್ವಾಮಿ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಪಾಕಿಸ್ತಾನ ಸಂಸತ್ ವಿಸರ್ಜನೆ

ಇಮ್ರಾನ್ ಖಾನ್ ಬಹುಮತ ಕಳೆದುಕೊಂಡಿದ್ದಾರೆ. ಇದಕ್ಕೂ ಮುನ್ನ ಪಾಕಿಸ್ತಾನದ ಪ್ರಧಾನ ಮಂತ್ರಿ ಇಮ್ರಾನ್ ಖಾನ್ ವಿರುದ್ಧದ ಅವಿಶ್ವಾಸ ನಿರ್ಣಯವನ್ನು ಪಾಕ್ ಸಂಸತ್‌ನ ಉಪ ಸ್ಪೀಕರ್ ತಿರಸ್ಕರಿಸಿದ್ದು, ಇದು ಅಸಂವಿಧಾನಿಕ ಎಂದು ಘೋಷಿಸಿದರು.

ಪ್ರಧಾನಿ ವಿರುದ್ಧದ ಅವಿಶ್ವಾಸ ನಿರ್ಣಯ ಮಂಡನೆ ಸಂವಿಧಾನದ ವಿಧಿ–5ಕ್ಕೆ ವಿರುದ್ಧವಾಗಿದೆ ಎಂದು ಹೇಳಿ ಪಾಕಿಸ್ತಾನ ನ್ಯಾಷನಲ್ ಉಪ ಸ್ಪೀಕರ್ ಖಾಸಿಂ ಖಾನ್ ಸೂರಿ ಕಲಾಪವನ್ನು ಅನಿರ್ದಿಷ್ಟಾವಧಿಗೆ ಮುಂದೂಡಿದರು.

ಕೂಡಲೇ ರಾಷ್ಟ್ರವನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ ಇಮ್ರಾನ್ ಖಾನ್, ಸಂಸತ್ ವಿಸರ್ಜನೆಗೆ ರಾಷ್ಟ್ರಾಧ್ಯಕ್ಷರಿಗೆ ಪತ್ರ ಬರೆದಿರುವುದಾಗಿ ತಿಳಿಸಿದ್ದರು. ಪ್ರಜಾಸತಾತ್ಮಕ ಹಾದಿಯಲ್ಲಿ ಚುನಾವಣೆ ನಡೆಯಲಿ, ಚುನಾವಣೆಗೆ ಸಜ್ಜಾಗುವಂತೆ ಪಾಕಿಸ್ತಾನದ ಜನರಿಗೆ ಕರೆ ನೀಡುವುದಾಗಿ ಹೇಳಿದ್ದರು. ಅವಿಶ್ವಾಸ ನಿರ್ಣಯ ತಿರಸ್ಕಾರ ಮಾಡಿರುವುದನ್ನು ಇಮ್ರಾನ್ ಖಾನ್ ಸ್ವಾಗತಿಸಿದ್ದಾರೆ. ದೇಶ ಈಗ ಹೊಸ ಚುನಾವಣೆಗೆ ಸಜ್ಜಾಗಬೇಕಿದೆ. ಅವಿಶ್ವಾಸ ನಿರ್ಣಯ ವಾಸ್ತವದಲ್ಲಿ ವಿದೇಶಿ ಅಜೆಂಡಾ ಆಗಿದೆ ಎಂದು ಇಮ್ರಾನ್ ಖಾನ್ ಹೇಳಿದ್ದಾರೆ. ಸ್ಪೀಕರ್ ನಿರ್ಧಾರ ವಿಚಾರದಲ್ಲಿ ಪ್ರತಿಯೊಬ್ಬ ಪಾಕಿಸ್ತಾನಿ ಪ್ರಜೆಯನ್ನು ಅಭಿನಂದಿಸುತ್ತೇನೆ. ವಿದೇಶಿ ಪಿತೂರಿಯಿಂದ ನನ್ನ ವಿರೋಧ ಅವಿಶ್ವಾಸ ನಿರ್ಣಯ ಮಂಡಿಸಲಾಗಿದೆ. ಯಾರು ಆಡಳಿತ ನಡೆಸಬೇಕು ಎಂಬುದನ್ನು ಪಾಕಿಸ್ತಾನದ ಜನರು ನಿರ್ಧರಿಸಲಿದ್ದಾರೆ ಎಂದು ಇಮ್ರಾನ್ ಖಾನ್ ಹೇಳಿದರು. ಸಂಸತ್‌ನಲ್ಲಿ ಅವಿಶ್ವಾಸ ನಿರ್ಣಯ ಮೇಲಿನ ಮತದಾನ ವೇಳೆಯಲ್ಲಿ ಇಮ್ರಾನ್ ಖಾನ್ ಸಂಸತ್‌ನಲ್ಲಿ ಇರಲಿಲ್ಲ.

ಯುಗಾದಿಯಿಂದ ಯುಗಾದಿಗೆ ವರ್ಷ ಭವಿಷ್ಯ 2022-23







॥ ಶ್ರೀ ಸಾಯಿನಾಥಾಯ ನಮಃ ॥

ವಿ.ಕೇಶವಮೂರ್ತಿ

ಜ್ಯೋತಿಷ್ಯ ವಿದ್ವಾಂಸರು,
ಕಲ್ಪದ್ರುಮ ಜ್ಯೋತಿಷ ಅಧ್ಯಯನ ಕೇಂದ್ರ # 533, 6ನೇ ಕ್ರಾಸ್,
ಬೋಗಾದಿ 2ನೇ ಹಂತ, ಮೈಸೂರು.
9740973224 /9739548720

ಆಯುಃ ಕರ್ಮಣಿ ವಿದ್ಯಾಚ ।
ವಿತ್ತಂ ಮರಣಮೇವ ಚ ।
ಪಂಚಾತಾನಿ ಸೃಜಂತಿ ।
ಗರ್ಭಸ್ಥಿತ್ಯಾ ದೇಹಿನಃ ॥

ಅರ್ಥ:- ಆಯುಸ್ಸು, ಕರ್ಮ, ವಿದ್ಯೆ, ಹಣ ಮತ್ತು ಮರಣ ಈ ಐದು ವಿಷಯಗಳನ್ನು ಬ್ರಹ್ಮ ಗರ್ಭದಲ್ಲಿದ್ದಾಗಲೇ ಸೃಷ್ಟಿಸಿರುತ್ತಾನೆ.

ಮೇಷ: ಚು, ಚೆ, ಚೊ, ಲ, ಲಿ, ಲು, ಲೆ, ಲೊ, ಅ



ನಾಯಕತ್ವ ಹಾಗೂ ದುಡುಕು ನಿಮ್ಮ ರಾಶಿ ಜನ್ಯಗುಣ. **'ದ್ವಾದಶೇ ಧ್ವನಿ ವಿಲೋಮ ದುಃಖ'** ಶಾಸ್ತ್ರ ವಾಕ್ಯದಂತೆ, ದ್ವಾದಶದಲ್ಲಿ ಸಂಚರಿಸುವ ಗುರುವಿನಿಂದ ಹಲವು ತೆರನಾದ ದುಃಖ ಪ್ರಸಂಗಗಳೂ, ನ್ಯಾಯ ಮಾರ್ಗದಲ್ಲೇ ನಡೆದರೂ ಅಸಫಲತೆಯೂ ಉಂಟಾಗುತ್ತದೆ. ಸಂಪತ್ತಿನ ಹೇತುವಿನಿಂದ ನಷ್ಟ, ಕಾರ್ಯ-ಕಲಾಪಗಳಲ್ಲಿ ಅನವಶ್ಯಕ ವಿಘ್ನಗಳು ಎದುರಾಗಲಿದೆ. ಬಂಧುಗಳೊಡನೆ ವಿವಾದಗಳು, ಗುರು ಜನರಲ್ಲಿ ವಿರೋಧವೂ, ಶತ್ರುಗಳಿಂದ ಅಪಮಾನವೂ ಉಂಟಾಗಲಿದೆ. ಆರೋಗ್ಯದಲ್ಲಿ ವ್ಯತ್ಯಯ, ವೈದ್ಯೋಪಚಾರಕ್ಕೆ ಹಣ ವ್ಯಯ.

ಶ್ರೀ ಶನಿದೇವನು ಸಂವತ್ಸರಾರಂಭದಿಂದ ಜೂನ್ 2022ರವರೆಗೆ ಲಾಭ ಸ್ಥಾನ ಸಂಚಾರ ಸಮಯದಲ್ಲಿ ಅಭೀಷ್ಟ ಸಿದ್ಧಿ, ಧನ-ಧಾನ್ಯ ಲಾಭ. ಕಬ್ಬಿಣ, ಸಿಮೆಂಟ್, ಎಣ್ಣೆ ವ್ಯಾಪಾರಿಗಳಿಗೆ ಹೆಚ್ಚಿನ ಆದಾಯವಾಗುವುದು. ಅನೇಕ ರೀತಿಯ ಸುಖ ಪ್ರಾಪ್ತಿಯಾಗುವುದು. ಸ್ವಭಾವದಲ್ಲಿ ತೀಕ್ಷ್ಣತೆ ಇರುತ್ತದೆ. ಜುಲೈನಿಂದ ಡಿಸೆಂಬರ್‌ವರೆಗೆ ವಕ್ರಿಯಾಗಿ ದಶಮದಲ್ಲಿ ಭ್ರಮಣೆ ಮಾಡುವಾಗ ಮನಸ್ತಾಪಗಳು, ಪದಭ್ರಷ್ಟತೆ, ಸ್ಥಾನ ಲಾಭವಾದರೂ ಧನಕ್ಷಯವನ್ನು ಅನುಭವಿಸುವಿರಿ. ದುಷ್ಕರ್ಮ ಪ್ರವೃತ್ತಿಯ ಕಾರಣ ನಿಮ್ಮ ಪ್ರತಿಷ್ಠೆಗಳಿಗೆ ಭಂಗ ಉಂಟಾಗುವುದು. ಜನವರಿ 2023 ರಿಂದ ಸಂವತ್ಸರದ ಅಂತ್ಯದವರೆಗೆ ಅನೇಕ ವಿಧದಿಂದ ಸುಖ-ಧನ ಪ್ರಾಪ್ತಿಯಾಗುತ್ತದೆ. ವೈಭವದ ಜೀವನ ನಡೆಸುವಿರಿ.

ರಾಹು ಫಲ: **ಜನ್ಮಸ್ಥ ರಾಹು ಕಾರಣ, ಮಾನಸಿಕ ಅಶಾಂತಿ, ಸ್ಥಾನ ಚ್ಯುತಿ, ಅನಾರೋಗ್ಯ, ಧನ ಚಿಂತೆ, ಚಂಚಲತೆ, ಸಾಮಾಜಿಕ ಚಟುವಟಿಕೆಗಳಲ್ಲಿ ನಷ್ಟ, ಶಿರೋವೇದನೆ.**

ಕೇತು ಫಲ: **ದಾಂಪತ್ಯದಲ್ಲಿ ವಿರಸ. ವಿವಾಹದಲ್ಲಿ ವಿಳಂಬ. ಶ್ರೀ ಕಾಲಭೈರವ ಸ್ತೋತ್ರ ಪಠಿಸಿ.**

ವೃಷಭ: ಇ, ಉ, ಎ, ಒ, ವ, ವಿ, ವು, ವೆ, ವೊ



ಕಷ್ಟ ಸಹಿಷ್ಣುತೆ ನಿಮ್ಮ ರಾಶಿ ಜನ್ಯ ಸ್ವಭಾವ. ಶುಭ ಪ್ರದಾತನಾದ ಶ್ರೀ ಗುರು **'ಅರ್ಕಗಸ್ತತ್ಪದೋ ಭವತಿ ಲಾಭಗೋ ಗುರುಃ'** ಎಂಬ ಋಷಿ ವಾಣಿಯಂತೆ ಏಕಾದಶ ದಲ್ಲಿ ಗೋಚರಿಸು ವಾಗ ಯಶಃ, ಕೀರ್ತಿ, ಲಾಭಗಳು ನಿಮ್ಮನ್ನು ಅರಸಿ ಬರುವುದು. ಕೈಗೊಂಡ ಮಹತ್ವದ ಕೆಲಸ-ಕಾರ್ಯಗಳಲ್ಲಿ ಜಯವನ್ನು ಸಾಧಿಸುವಿರಿ. ಧನ-ಧಾನ್ಯ, ಐಶ್ವರ್ಯ ಲಾಭ. ಹಲವರಿಗೆ ಪುತ್ರ ಸಂತಾನದ ಸಂತಸ. ಆರೋಗ್ಯದಲ್ಲಿ ಸುಧಾರಣೆ ಹಾಗೂ ಹಳೆಯ ಕಾಯಿಲೆಯಿಂದ ಬಿಡುಗಡೆ ಆಗುವುದು. ಸಾಮಾಜಿಕವಾಗಿ ನಿಮ್ಮ ಸ್ಥಾನಮಾನಗಳಲ್ಲಿ ವೃದ್ಧಿಯಾಗುವುದು. ಮನೆಯಲ್ಲಿ ಮಂಗಳ ಕಾರ್ಯ ಜರುಗುವ ಸಂಭವ. ಹೊಸ ಮಿತ್ರರು, ವಾಹನಗಳು ಪ್ರಾಪ್ತವಾಗುತ್ತವೆ.

ವಾಯಸ ವಾಹನನಾದ ಶ್ರೀ ಶನಿರಾಜ ಯುಗಾದಿಯಿಂದ ವರ್ಷ ಪೂರ್ತಿ ದಶಮ-ನವಮ ಭಾವಗಳಲ್ಲಿ ಗೋಚರಿಸುವಾಗ ವೃಥಾ ಅಪವಾದಗಳು, ಮನಸ್ಸಿಗೆ ಭಯ, ಕೃಷಿಕರಿಗೆ ಶ್ರಮಕ್ಕೆ ತಕ್ಕ ಪ್ರತಿಫಲ ದೊರಕದು. ಧಾರಾ, ಪುತ್ರರಲ್ಲಿ ಕಲಹ ಪ್ರಸಂಗಗಳು. ಧಾರ್ಮಿಕ ಕಾರ್ಯಗಳಲ್ಲಿ ವಿಘ್ನ.

ವೈಶ್ವದೇವಾದಿ ಸತ್ಕರ್ಮಾನುಷ್ಠಾನ ಹೀನತೆ, ಜನವೈರ, ಹೃದ್ರೋಗಾದಿ ಬಂಧನಗಳು ಉಂಟಾಗಬಹುದು. ಪಿತೃ ಸಮಾನ ವ್ಯಕ್ತಿಯೊಬ್ಬರ ವಿಯೋಗದಿಂದ ದುಃಖ ಉಂಟಾಗುತ್ತದೆ. ಶ್ರೀ ಶನಿದೇವನ ಶಾಂತಿಗೆ ದಶರಥ ಶನಿ ಸ್ತೋತ್ರ ಪಠಿಸಿ.

ರಾಹು ಫಲ: **ಅನಾವಶ್ಯಕ ಸಂಚಾರಗಳು, ಅಧಿಕ ಖರ್ಚುಗಳು, ಧನ ನಷ್ಟ, ಚೋರರಿಂದ ಹಾನಿ, ನಿದ್ರಾನಾಶ, ಧರ್ಮಲೋಪ ಕಾರ್ಯ.**

ಕೇತು ಫಲ: **ಧನ ಸಂಚಯ, ಶತ್ರು ನಾಶ, ಕರ್ಮದಲ್ಲಿ ಪ್ರಗತಿ, ನೂತನ ಉದ್ಯಮ.**

ಮಿಥುನ: ಕ, ಕಿ, ಕು, ಘ, ಜ್ಞ, ಛ, ಕೆ, ಕೊ, ಹ



ಚತುರರೂ, ದ್ವಿಸ್ವಭಾವ ಗುಣವುಳ್ಳವರೂ ಆದ ನಿಮಗೆ ಸುರ ಗುರು ಬೃಹಸ್ಪತಿಯು **'ಸ್ಥಾನಕಲ್ಯ ಧನಹಾದಶರ್ಕ'** ಎಂಬ ಶಾಸ್ತ್ರವಾಕ್ಯದಂತೆ ಸಂವತ್ಸರ ಪೂರ್ತ ದಶಮ ಭಾವದಲ್ಲಿ ಕೆಲವು ಸಮಯ ಋಜುವಾಗಿಯೂ, ಕೆಲವು ಸಮಯ ವಕ್ರಿಯಾಗಿಯೂ ಸಂಚರಿಸುತ್ತಾರೆ. ಇದರ ಫಲವಾಗಿ ವೃತ್ತಿ ಬದಲಾವಣೆ, ಕಾರ್ಯ ನಿಮಿತ್ತ ಅಧಿಕ ಸಂಚಾರಗಳು ಉಂಟಾಗುತ್ತವೆ. ಪರಸ್ಥಳದಲ್ಲಿ ವಾಸ ಮಾಡಿ ಪರದಾಡುವಿರಿ. ಮಕ್ಕಳಿಗೆ ಸಂಕಷ್ಟಗಳು ಬರುವ ಸಾಧ್ಯತೆ ಇರುತ್ತದೆ. ನೀವಿರುವ ಸ್ಥಾನಮಾನಗಳಿಗೆ ಚ್ಯುತಿ ಉಂಟಾದೀತು. ಹಾಕಿದ ಬಂಡವಾಳಕ್ಕೆ ಹಾನಿ ಉಂಟಾಗುವುದು. ಗುರು-ಹಿರಿಯರ ಸಲಹೆಯಂತೆ ನಡೆದು ಶುಭವನ್ನು ಹೊಂದಬಹುದು. **ಶ್ರೀ ಗುರು ಶಾಂತಿಗೆ ಕಡಲೆಕಾಳು ದಾನ ಮಾಡಿ.**

ವಿಷ್ಣು ಭಕ್ತನಾದ ಶನಿಮಹಾತ್ಮನು ಸಂವತ್ಸರ ಪ್ರಾರಂಭಕ್ಕೆ ನವಮ, ಕೆಲ ಸಮಯ ವಕ್ರಿಯಾಗಿ ಅಷ್ಟಮ ನಂತರ ಪುನಃ ನವಮ ಭಾವಗಳಲ್ಲಿ ಗೋಚರಿಸುವುದರಿಂದ ಅಷ್ಟೇನು ಸುಖ ಸಮಯವೆಂದು ಹೇಳಲಾಗದು. ಸ್ತ್ರೀ, ಪುತ್ರಾದಿಗಳಿಂದ ದೂರವಿದ್ದು, ಮಾರ್ಗಗಳಲ್ಲಿ ಅಲೆದಾಡುತ್ತಾ ಕಷ್ಟ ಪಡುತ್ತಾರೆ. ಪ್ರಯಾಣ ಸಮಯಗಳಲ್ಲಿ ತೊಂದರೆಗಳು ಎದುರಾಗುತ್ತವೆ. ಆತುರದ ವಾಹನ ಚಾಲನೆಯಿಂದ ಅಪಘಾತ ಸಂಭವಿಸಬಹುದು. ಪೊಲೀಸ್ ಇಲಾಖೆಯಿಂದ ಸಂಕಟಗಳು ಒದಗಬಹುದು. ದೇವತಾ ಕಾರ್ಯಗಳಲ್ಲಿ ಅಡಚಣೆಗಳು ಉಂಟಾಗಲಿದೆ. ಅನಾರೋಗ್ಯವೂ ಕಾಡಿಸುತ್ತದೆ. ದವಾಖಾನೆ ಖರ್ಚುಗಳು ಹೆಚ್ಚಾದೀತು.

ರಾಹು ಫಲ: **ಧನ-ಧಾನ್ಯ ವೃದ್ಧಿ, ಯತ್ನ ಕಾರ್ಯಗಳಲ್ಲಿ ಸಿದ್ಧಿ ಉಂಟಾಗುವುದು. ಆಕಸ್ಮಿಕ ಧನ ಲಾಭವಾದರೂ, ಜಾಮೀನು ವ್ಯವಹಾರದಿಂದ ನಷ್ಟ ಸಂಭವಿಸುತ್ತದೆ.**

ಕೇತು ಫಲ: **ಮಾನಸಿಕ ಅಶಾಂತಿ, ಸಂತಾನ ಚಿಂತೆ, ಉದರ ವ್ಯಾಧಿ.**

ಕಟಕ: ಹಿ, ಹು, ಹೆ, ಹೊ, ಡ, ಡಿ, ಡು, ಡೆ, ಡೊ



ಸದಾ ದುಂಬಿಯಂತೆ ಕಾರ್ಯತತ್ಪರ ಗುಣದ ನಿಮಗೆ ಶುಭಕೃತ್ ಸಂವತ್ಸರದಲ್ಲಿ ದೇವಗುರು ಬೃಹಸ್ಪತಿಯು **'ನೈಪುಣ್ಯಾಜ್ಞಾ ಪುತ್ರ ಕರ್ಮಾರ್ಥ ಸಿದ್ಧಿ ಧರ್ಮೇ ಜೀವಃ'** ಋಷಿ ವಾಣಿಯಂತೆ ಭಾಗ್ಯ ಸ್ಥಾನದಲ್ಲಿ ಪರಿಭ್ರಮಿಸಿ ಹೆಚ್ಚಿನ ಶುಭ ಫಲಗಳನ್ನೇ ನೀಡಲಿದ್ದಾನೆ. ಯತ್ನ ಕಾರ್ಯಗಳಲ್ಲಿ ಯಶಸ್ಸು, ವಿಜಯಗಳನ್ನು ಪಡೆಯುವಿರಿ. ನಿಮ್ಮ ನಿಪುಣತೆ ಹಾಗೂ ಪ್ರಾಬಲ್ಯದಿಂದ ಅಧಿಕಾರ, ಸ್ಥಾನ-ಮಾನಗಳನ್ನು ದಕ್ಕಿಸಿಕೊಳ್ಳುವಿರಿ. ಧನ-ಧಾನ್ಯ ಲಾಭವಾಗಿ ಗೃಹ, ನಿವೇಶನ ಹೊಂದಲು ಅವಕಾಶವಿರುತ್ತದೆ. ಸಕಲ ಸೌಭಾಗ್ಯಗಳ ಪ್ರಾಪ್ತಿಯ ಜೊತೆಗೆ ವಿವಾಹಾಕಾಂಕ್ಷಿಗಳಿಗೆ ಸೂಕ್ತ ಬಾಳಸಂಗಾತಿ ದೊರೆಯುವರು. ನಿಮ್ಮ ಪುತ್ರರ ಕೆಲಸ ಕಾರ್ಯಗಳಲ್ಲಿ ಜಯ ದೊರಕುವುದು.

ಕಲಿಯುಗ ದಂಡಾಧಿಕಾರಿ ಎನಿಸಿದ ಶ್ರೀ ಶನಿಯು ಸಂವತ್ಸರದ ಆರಂಭದಿಂದ ಜುಲೈವರೆಗೆ ಸಪ್ತಮ ಸಂಚಾರ ಸಮಯದಲ್ಲಿ ವ್ಯಾಪಾರಿಗಳಿಗೆ ಪಾಲುದಾರಿಕೆ ವ್ಯವಹಾರಗಳಲ್ಲಿ ಕಲಹ, ನಷ್ಟಗಳು ಸಂಭವಿಸುವುದು. ಪತಿ-ಪತ್ನಿಯರಲ್ಲಿ ವಿರಸ ಉಂಟಾಗುವುದು. ಕಷ್ಟಕರವಾದ ಪ್ರಯಾಣಗಳು. ಜನವರಿ 2023 ರಿಂದ ಅಷ್ಟಮಕ್ಕೆ ಬಂದಾಗ ಪ್ರಯತ್ನ ಪೂರ್ವಕವಾಗಿ ಮಾಡಿದ ಕೆಲಸಗಳಲ್ಲಿ ಭಂಗ ಉಂಟಾಗುವುದು. ಎಲ್ಲರಲ್ಲಿಯೂ ವಿರೋಧವನ್ನು ಎದುರಿಸಬೇಕಾಗುವುದು. ಒಟ್ಟಿನಲ್ಲಿ ಈ ವರ್ಷ ಶನಿ ಸಂಚಾರ ನಿಮಗೆ ತ್ರಾಸದಾಯಕವಾಗಿದ್ದರೂ ಶ್ರೀ ಗುರು ಶುಭನಿರುವುದರಿಂದ ಅಧೀರರಾಗುವ ಅಗತ್ಯವಿಲ್ಲ. ಶ್ರೀ ಶನಿ ಶಾಂತಿಗೆ ಶ್ರೀ ಮಾರುತಿ ಮಂದಿರಕ್ಕೆ ಎಳ್ಳೆಣ್ಣೆ ನೀಡಿ. ಮೃತ್ಯುಂಜಯ ಮಂತ್ರ ಜಪಿಸಿ.

ರಾಹು ಫಲ: **ಕರ್ಮಚಿಂತೆ, ಕಲಹ, ಉದ್ಯಮ ಸ್ಥಾಪನೆ ಹಾಗೂ ಪ್ರಗತಿ, ಯತ್ನ ಕಾರ್ಯ ಸಿದ್ಧಿ.**

ಕೇತು ಫಲ: **ವಾಹನ ವ್ಯವಹಾರದಲ್ಲಿ ನಷ್ಟ. ಸಂಬಂಧಿಕರೊಂದಿಗೆ ಕಲಹ, ಸ್ಥಾನ ಚ್ಯುತಿಯ ಭಯ.**

ಸಿಂಹ: ಮ, ಮಿ, ಮು, ಮೆ, ಮೊ, ಟ, ಟಿ, ಟು, ಟೆ



ಕಷ್ಟದಲ್ಲೂ ವೈಭೋಗ ಅರಸುವ ಸ್ವಭಾವದವರಾದ ನಿಮಗೆ ದೇವಗುರುವು ಸಂವತ್ಸರದ ಹೆಚ್ಚು ಸಮಯ ಅಷ್ಟಮದಲ್ಲೇ ಭ್ರಮಿಸುವ ಪರಿಣಾಮ **'ಬಂಧಂ ವ್ಯಾಧಿಂಚಾಷ್ಟಮೇ ಶೋಕಮುಗಂ ಮಾರ್ಗಕ್ಲೇಶಂ'** ಎಂಬ ಶಾಸ್ತ್ರಾರ್ಥದಂತೆ ನೀವು ಹಲವು ರೀತಿಯ ಅಗ್ನಿ ಪರೀಕ್ಷೆಗಳನ್ನು ಎದುರಿಸಬೇಕಾಗುವುದು. ಅಷ್ಟಮ ಗುರು ಎಂದರೆ 'ಕಷ್ಟಮ' ಗುರು ಎಂದೇ ಅರ್ಥ. ಶಾರೀರಿಕವಾಗಿ ವ್ಯಾಧಿ, ಅನಾರೋಗ್ಯಗಳು ಕಾಡಿಸುವುದು. ಕೋಪ-ತಾಪಗಳಿಂದ ಮನಸ್ಸು ಜರ್ಝರಿತವಾಗುವುದು. ಮನೆಯಲ್ಲಿ ಹಾನಿಕಾರಕ ಸಂಗತಿಗಳು ಘಟಿಸಬಹುದು. ಪ್ರಯಾಣ ಸಮಯದಲ್ಲಿ ಮಾರ್ಗ ಮಧ್ಯೆ ಅಡ್ಡಿ-ಆತಂಕಗಳು ಉಂಟಾಗುವುದು. ಹೀಗೇ ಆಗಬೇಕೇಂದು ಬಯಸದೇ ಆಗಿದ್ದನ್ನು ಒಪ್ಪಿಕೊಳ್ಳುವುದು ಜಾಣತನ. ಶ್ರೀ ಗುರು ಶಾಂತಿಗೆ ಕಡಲೆ ಕಾಳು ದಾನ. **ಅರಳೀ ವೃಕ್ಷ ಪ್ರದಕ್ಷಿಣೆ.**

ನೀಲಾಂಜನ ಸಮಾಭಾಸನಾದ ಶ್ರೀ ಶನಿದೇವನು ಸ್ವಲ್ಪ ಸಮಯ ಸಪ್ತಮದಲ್ಲೂ, ಸ್ವಲ್ಪ ಸಮಯ ವಕ್ರಿಯಾಗಿ ಷಷ್ಠದಲ್ಲೂ ಸಂಚರಿಸಿ ಮಿಶ್ರ ಫಲದಾಯಕನಾಗಿರುತ್ತಾನೆ. ಕೆಲ ಸಮಯ ಅನಾರೋಗ್ಯ ಕಾಡಿದರೆ, ಕೆಲ ಸಮಯ ರೋಗ-ರುಜಿನಗಳಿಂದ ವಿಮೋಚನೆ ಉಂಟಾಗುತ್ತದೆ. ಶತ್ರುಗಳು ಪರಾಜಯಗೊಳ್ಳುವರು. ಸಾಲ-ಸೋಲಗಳಿಂದ ವಿಮುಕ್ತಿಯನ್ನು ಹೊಂದುವಿರಿ. ಸತಿ-ಪತಿಯರು ಪರಸ್ಪರ ಸೋತು ಗೆದ್ದರೆ ಗೃಹ ಶಾಂತಿಗೆ ಭಂಗ ಬರದು. ಆತುರ ವಾಹನ ಚಾಲನೆ ತೊಂದರೆಗೆ ಆಹ್ವಾನ ಕೊಟ್ಟಂತೆ. ಶ್ರೀ ಶನಿ ಮಹಾರಾಜನ ಶಾಂತಿಗೆ ಹನುಮಾನ್ ಚಾಲೀಸ ಪಠಿಸಿ. **ಮಾರುತಿ ಮಂದಿರಕ್ಕೆ ಎಳ್ಳೆಣ್ಣೆ ದಾನ ಮಾಡಿ.**

ರಾಹು ಫಲ: **ಸಹೋದರರೊಡನೆ ಭೇದಾಭಿಪ್ರಾಯ. ಗೃಹದಲ್ಲಿ ಶುಭ ಸಮಾರಂಭಗಳು, ತೀರ್ಥಯಾತ್ರೆ, ಹಿರಿಯರೊಬ್ಬರ ವಿಯೋಗ.**

ಕೇತು ಫಲ: **ಸಾಹಸ ಪ್ರವೃತ್ತಿ ಕ್ರೀಡೆಯಲ್ಲಿ ಜಯ, ನೂತನ ಉದ್ಯಮ ಪ್ರಾರಂಭ**

ಕನ್ಯಾ: ಟೊ, ಪ, ಪಿ, ಪು, ಷ, ಣ, ಠ, ಪೆ, ಪೊ



ಬಹುಮುಖ ಪ್ರತಿಭೆ ಹಾಗೂ ಸ್ನೇಹ ಸ್ವಭಾವದವರಾದ ನಿಮಗೆ **'ಶಯನಂ ರತಿ ಭೋಗಂ ಧನಮಶನಂ ಕುಸುಮಾನ್ಯುಪವಾಹ್ಯಂ'** ಎಂಬ ಋಷಿ ವಾಣಿಯಂತೆ ಸಪ್ತಮ ಭಾವದ ಗುರುವು ಶಯನ ಸುಖ, ಧನ ಲಾಭ, ಭೋಜನ ಸುಖ, ಪುಷ್ಪಹಾರಾದಿಗಳಿಂದ ಸನ್ಮಾನ, ಲಾಲಿತ್ಯದ ಮಾತು, ಉತ್ತಮ ಬುದ್ಧಿ ಶಕ್ತಿಗಳನ್ನು ನೀಡುವನು. ಗುರು ಕೃಪೆಯಿಂದ ಕಾಲ ಕರ್ಮ ಕಾರಣಗಳು ಕೂಡಿ ಬಂದಿರುವ ಕಾರಣ ಆಸ್ತಿ-ಪಾಸ್ತಿ ಗಳಿಕೆ. ಮನೆಯಲ್ಲಿ ವಿವಾ ಹಾದಿ ಶುಭ ಕಾರ್ಯಾನುಕೂಲವೂ, ಯತ್ನ ಕಾರ್ಯಗಳಲ್ಲಿ ಸಿದ್ಧಿಯೂ ಉಂಟಾಗುವುದು. ಆರೋಗ್ಯ ಭಾಗ್ಯ, ಅಧಿಕಾರಿಗಳ ಅನುಗ್ರಹ, ಪ್ರಭು ಜನರ ಸನ್ಮಾನಗಳಿಗೆ ಭಾಜನರಾಗುವಿರಿ. ಸತ್ಕರ್ಮಾಚರಣೆ ಹಾಗೂ ಯಾತ್ರೆಗಳು ಉಂಟಾಗಲಿದೆ.

ರವಿ ನಂದನನಾದ ಶ್ರೀ ಶನಿದೇವನು ಜೂನ್ 2022ರವರೆಗೆ ಷಷ್ಠದಲ್ಲಿ ನಂತರ ನವೆಂಬರ್ 2022ರವರೆಗೆ ಪಂಚಮದಲ್ಲಿ ನಂತರ ಸಂವತ್ಸರದ ಅಂತ್ಯದವರೆಗೆ ಮತ್ತೆ ಷಷ್ಠದಲ್ಲಿ ಗೋಚರಿಸಲಿದ್ದಾನೆ. ಪಂಚಮದಲ್ಲಿ ಸಂಚರಿಸುವಾಗ ಆಪ್ತ ಬಂಧು ವರ್ಗದವರಲ್ಲಿ ಕಲಹಗಳು, ಜಗಳಗೂ ಸಂಭವಿಸುತ್ತವೆ. ಧನ ಸಂಪತ್ತಿನ ಅವನತಿ. ಪುತ್ರರಿಂದ ಆಸ್ತಿ ವಿವಾದಗಳು ಉಂಟಾಗುವುದು. ಇದಕ್ಕೆಲ್ಲ ಉಪಶಮನವೆಂಬಂತೆ ಷಷ್ಠದಲ್ಲಿದ್ದಾಗ ಶುಭ ಫಲಗಳು. ರೋಗಾದಿ ವಿಹೀನರಾಗಿ, ಸಾಲ-ಸೋಲಗಳಿಂದ ವಿಮುಕ್ತಿಯನ್ನು ಹೊಂದುವಿರಿ. ಶತ್ರುಗಳು ಹಿಂದೆ ಸರಿಯುವರು. ಕೃಷಿಕರಿಗೆ ಉತ್ತಮ ಫಸಲು, ಬೆಲೆ ದೊರೆಯುತ್ತದೆ. ಆಪ್ತ ಬಂಧು ವರ್ಗದವರ ಆದರ, ಗೃಹ ನಿರ್ಮಾಣಕ್ಕೆ ನಾಂದಿ.

ರಾಹು ಫಲ: **ಆಕಸ್ಮಿಕ ಧನ ಪ್ರಾಪ್ತಿ, ಮರಣ ಶಾಸನದಿಂದ ಧನ ಲಭಿಸಬಹುದು. ಅಗ್ನಿ, ವಿಷಾಹಾರಗಳಿಂದ ಎಚ್ಚರವಾಗಿರಿ.**

ಕೇತು ಫಲ: **ಶಾರೀರಿಕ ಪೀಡೆಗಳು, ಸ್ತ್ರೀಯರಿಂದ ತೊಂದರೆ.**

ತುಲಾ: ರ, ರಿ, ರು, ರೆ, ರೂ, ತ, ತಿ, ತು, ತೆ



ವ್ಯವಹಾರ ಕುಶಲತೆ ನಿಮ್ಮ ಜನ್ಮಗತ ಗುಣ. ನಿಮಗೆ ಷಷ್ಠದಲ್ಲಿ ಪರಿಭ್ರಮಣ ಮಾಡುವ ಗುರುವು ಅಶುಭ ಫಲದಾಯಕನಾಗಿದ್ದಾನೆ. **'ನ ಸಖೀ ವದನಂ ತಿಲಕೋಜ್ವಲಂ ನ ಭವನಂ ಶಿಖಿ ಕೋಕಿಲಾ ನಾದಿತಂ'**, ಅಂದರೆ ಸುಂದರ ವನಿತೆಯ ನಗೆಮುಖ ಕಾಣಲೂ ಇಷ್ಟಪಡುವುದಿಲ್ಲ. ನವಿಲಿನ ಕೇಕೆ, ನರ್ತನ, ಕೋಗಿಲೆಯ ಮಧುರ ಧ್ವನಿ ಕೂಡ ಬೇಕೆನಿಸುವುದಿಲ್ಲ. ಅಸಂತುಷ್ಟವಾದ ಮನಸ್ಸು, ಸಂಶಯ ಪ್ರವೃತ್ತಿ, ವೈರಿಗಳಿಂದ ತೊಂದರೆ, ಕೈಬರಿದಾಗಿ ಸಾಲ ಮಾಡಬೇಕಾದ ಪರಿಸ್ಥಿತಿ. ಆಗಾಗ ಅನಾರೋಗ್ಯದಿಂದ ಔಷಧೋಪಚಾರಕ್ಕೆ ಹಣ ವ್ಯಯವಾಗುವುದು. ಜ್ಞಾತಿ ಜನರಿಂದ ಅಕಾರಣವಾದ ವಿರೋಧವನ್ನು ಎದುರಿಸಬೇಕಾಗುತ್ತದೆ. **ಶ್ರೀ ಗುರು ಗ್ರಹ ಶಾಂತಿಗೆ ಔದುಂಬರ ವೃಕ್ಷ ಪ್ರದಕ್ಷಿಣೆ, ಕಡಲೇಕಾಳು ದಾನ.** 'ಓಂ ಬ್ರಂ ಬೃಹಸ್ಪತಯೇ ನಮಃ' ಎಂಬ ಮಂತ್ರ ಜಪಿಸಿ.


ಈ ಸಂವತ್ಸರದಲ್ಲಿ ಛಾಯಾನಂದನನಾದ ಶ್ರೀ ಶನಿದೇವನೂ ಕೂಡ ಶುಭಪ್ರದನಾಗಿರದೆ ನಾನಾ ರೀತಿಯ ಕ್ಲೇಶಗಳನ್ನು ಎದುರಿಸಬೇಕಾಗುತ್ತದೆ. ಮನಸ್ಸು ಅಸಾಧುವಾಗಿ ವರ್ತಿಸುವುದು. ಮನಸ್ಸಿನ ಮೇಲೆ ನಿಯಂತ್ರಣ ವಿರಿಸಿ. ಅಡ್ಡ ಮಾತುಗಳು ಮನಸ್ಸಿನ ಶಾಂತಿ ಕೆಡಿಸುವುದು. ಆಸ್ತಿ ವಿಚಾರಗಳಲ್ಲಿ ವಿವಾದಗಳು ಉಂಟಾಗುವುದು. ಪೊಲೀಸ್ ಹಾಗೂ ನ್ಯಾಯಾಲಯ ವಿಚಾರಗಳಲ್ಲಿ ವಿರುದ್ಧ ಫಲ ಬಂದೀತು. ಸುತರ ವಿರೋಧವನ್ನು ಎದುರಿಸಬೇಕಾದೀತು. **ಶ್ರೀ ಶನಿ ಶಾಂತಿಗೆ ಶನಿವಾರ ಏಕ ಭುಂಜನ, ಶಮೀವೃಕ್ಷ ಪ್ರದಕ್ಷಿಣೆ.**

ರಾಹು ಫಲ: **ವಾತ ರೋಗ, ಯತ್ನಕಾರ್ಯ ಭಂಗ, ದಾಂಪತ್ಯದಲ್ಲಿ ವಿರಸ, ಪ್ರಯಾಣದಿಂದ ಹಾನಿ. ಎಲೆಕ್ಟ್ರಾನಿಕ್ಸ್ ವ್ಯಾಪಾರದಲ್ಲಿ ಪ್ರಗತಿ.**

ಕೇತು ಫಲ: ವಿಚಾರ ಹೀನತೆ, ಚಿತ್ತ ಭ್ರಮೆ, ನರ ದೌರ್ಬಲ್ಯ.

ರಾಹು-ಕೇತು ಶಾಂತಿಗೆ ಕರಿ ಉದ್ದು, ಹುರುಳಿಕಾಳು ದಾನ.

ವೃಶ್ಚಿಕ: ತೊ, ನ, ನಿ, ನು, ನೆ, ನೊ, ಯ, ಯಿ, ಯು




ಗೋಪ್ಯತೆ ನಿಮ್ಮ ರಾಶಿ ಗುಣವಾಗಿದ್ದು, ಸಕಲರನ್ನು ಸಲಹುವ ಶ್ರೀ ಗುರು ಸಂವತ್ಸರ ಪೂರ್ತ ಶುಭ ಪಂಚಮ ಭಾವದಲ್ಲಿ ಭ್ರಮಣೆ ಮಾಡುವುದರ ಪರಿಣಾಮ **'ಜನಯುತಿ ಚ ತನಯ ಭುವನಮುಪಗತಃ ಪರಿಜನ ಶುಭ ಸುತ ಕರಿ ತುರಗ ವೃಷಾನ್'** ಎಂಬ ಜ್ಯೋತಿಷ ಪ್ರಣೀತದಂತೆ ಜನರ ಸಹಕಾರ, ಮಕ್ಕಳ ಭಾಗ್ಯೋದಯ, ಭೂಮಿ, ಭವನ, ಆನೆ, ಅಶ್ವ, ಹಸು ಹೊಂದುವ ಯೋಗವಿದೆ. ಅದರ ಅರ್ಥವೇನೆಂದರೆ ಸಂಪತ್ತು ಹೊಂದುವಿರಿ. ಸಕಲ ಸೌಭಾಗ್ಯಗಳು ನಿಮ್ಮ ಪಾಲಿಗಿದೆ. ಮನೆಯಲ್ಲಿ ವಿವಾಹ, ಉಪನಯನಾದಿ ಮಂಗಳ ಕಾರ್ಯಗಳು ಜರುಗುವುದು. ಧರ್ಮ ಕಾರ್ಯಗಳಲ್ಲಿ ಭಾಗವಹಿಸಿ ಗುರು ಜನರ ಆಶೀರ್ವಾದಕ್ಕೆ ಭಾಜನರಾಗುವಿರಿ.

ಶನಿ ಮಹಾತ್ಮನು ಸಂವತ್ಸರದ ಆರಂಭದ ಮೂರು ತಿಂಗಳು ಚತುರ್ಥದಲ್ಲೂ, ನಂತರ 5 ತಿಂಗಳು ತೃತೀಯದಲ್ಲೂ ನಂತರ ಮುಂದಿನ ಯುಗಾದಿಯವರೆಗೆ ಪುನಃ ಚತುರ್ಥದಲ್ಲೂ ಸಂಚರಿಸುವನು. ಚತುರ್ಥದಲ್ಲಿದ್ದಾಗ ವ್ಯಾಪಾರ, ಉದ್ಯೋಗಗಳಲ್ಲಿ ನಷ್ಟ, ಯತ್ನ ಕಾರ್ಯಗಳು ಕುಂಠಿತಗೊಳ್ಳುವುದರಿಂದ ಮನೋವ್ಯಾಕುಲತೆ. ನಿಮ್ಮ ಆರೋಗ್ಯದಲ್ಲಿ ಏರು-ಪೇರುಗಳು ಉಂಟಾದೀತು. ತೃತೀಯದಲ್ಲಿ ಭ್ರಮಿಸುವಾಗ ಕುಟುಂಬದಲ್ಲಿ ನೆಮ್ಮದಿ, ಸೌಖ್ಯದ ವಾತಾವರಣ, ಸ್ಥಾನ ಲಾಭ ವೃತ್ತಿ ಲಾಭ ಕೃಷಿಯಿಂದ ಲಾಭವನ್ನು ಹೊಂದುವಿರಿ. ಪ್ರಭಾವಶಾಲಿಗಳೆನಿಸಿ ಶತ್ರುಗಳ ಮೇಲೆ ವಿಜಯವನ್ನು ಸಾಧಿಸುತ್ತೀರಿ. ಸೇವಕರು ಆಜ್ಞಾನುವರ್ತಿಗಳಾಗಿರುತ್ತಾರೆ. **ಶ್ರೀ ಶನಿ ಶಾಂತಿಗೆ ಶಮೀ ವೃಕ್ಷ ಪ್ರದಕ್ಷಿಣೆ.**

ರಾಹು ಫಲ: **ಶತ್ರುನಾಶ, ಕರ್ಮದಲ್ಲಿ ಪ್ರಗತಿ, ಆರ್ಥಿಕಾಭಿವೃದ್ಧಿ ಕ್ರೀಡೆಯಲ್ಲಿ ಜಯ.**

ಕೇತು ಫಲ: **ತೀರ್ಥಯಾತ್ರೆ ತತ್ವ ವಿಚಾರ ಚಿಂತನೆ ಶಾರೀರಿಕ ಪೀಡೆ ಸ್ನಾಯು ದೌರ್ಬಲ್ಯ**

ಧನುಸ್ಸು: ಯೆ, ಯೊ, ಬ, ಬಿ, ಬು, ಧ, ಭ, ಢ, ಬೆ




ನೇರ ನುಡಿ ಹಾಗೂ ಉಪಕಾರಿ ಗುಣದ ನಿಮಗೆ ಸಂವತ್ಸರ ಪೂರ್ತ ಚತುರ್ಥದಲ್ಲಿ ಪರಿಭ್ರಮಿಸುವ ದೈವಗುರು **'ಜೀವೇ ಶಾಂತಿ ಪೀಡಿತ ಚಿತ್ತಸ್ಚ ಸಂವಿದೇನ್ನೈವ ಗ್ರಾಮೇ ನಾಪಿ ವನೇಮತ್ತ ಮಯೂರೇ'** ಅಂದರೆ ಸಾಮಾಜಿಕವಾಗಿ, ಆರ್ಥಿಕವಾಗಿ ಅನೇಕ ಕ್ಲೇಶಗಳನ್ನು ಅನುಭವಿಸಿ ಮನಃಪೀಡೆಗೆ ಒಳಗಾಗುತ್ತಾರೆ. ಗ್ರಾಮದಲ್ಲಾಗಲೀ, ನವಿಲಿರುವ ವನದಲ್ಲಾಗಲೀ ಶಾಂತಿ ದೊರಕದು ಎಂದರ್ಥ. ಚಿತ್ತ ಚಾಂಚಲ್ಯ, ಶತ್ರು ಜನರಿಂದ ತೊಂದರೆ, ಬಂಧು-ಬಳಗದವರೊಂದಿಗೆ ವಿವಾದಗಳು, ಕೂಡಿಟ್ಟ ಹಣ ಅಪವ್ಯಯವಾಗುವುದು. ಎತ್ತ ಹೋದರೂ ಮನಸ್ಸಿಗೆ ನೆಮ್ಮದಿ ಸಿಗದು. ಚತುಷ್ಪಾದ ಪ್ರಾಣಿಗಳಿಂದ ತೊಂದರೆ ಸಂಭವಿಸಬಹುದು. ಯತ್ನ ಕಾರ್ಯಗಳು ಕುಂಟುತ್ತಾ ಸಾಗುತ್ತವೆ. ಮನಸ್ಸು ಅಸಾಧುವಾಗಿ ವರ್ತಿಸುತ್ತದೆ. ಮನೆಯಲ್ಲಿ ವೈಮನಸ್ಸುಗಳು ಉಂಟಾಗುವುದು. ಹಣಕಾಸಿನ ಪರಿಸ್ಥಿತಿ ಮಧ್ಯಮವಾಗಿರುತ್ತದೆ.

ಛಾಯಾಪುತ್ರನಾದ ಶನಿದೇವನ ಸಾಡೇಸಾತಿಯ ಕಡೆಯ ಚರಣದಲ್ಲಿ ನೀವಿದ್ದೀರಿ. ದ್ವಿತೀಯ ಭಾವದ ಸಂಚಾರವಿದ್ದು ಹಲವು ಮೂಲಗಳಿಂದ ಐಶ್ವರ್ಯವನ್ನು ಪಡೆದುಕೊಂಡರೂ ಸುಖವನ್ನು ಅನುಭವಿಸಲಾರಿರಿ. ಅಕಾರಣವಾಗಿ ಎಲ್ಲರಲ್ಲಿಯೂ ವಿರೋಧವನ್ನು ಎದುರಿಸಬೇಕಾಗುವುದು. ಯತ್ನ ಕಾರ್ಯಗಳು ಆಮೆ ಗತಿಯಲ್ಲಿ ಸಾಗುವುದು. ನಿಮ್ಮ ಸ್ಥಾನಮಾನಗಳಿಗೆ ಕುಂದು ಬರುವುದು. **ಶ್ರೀ ಶನಿ ಪ್ರೀತ್ಯರ್ಥ ಕರಿ ಎಳ್ಳು ದಾನ, ದೀನರ ಸೇವೆ.**

ರಾಹು ಫಲ: **ವಿದ್ಯಾಭ್ಯಾಸದಲ್ಲಿ ಪ್ರಗತಿ, ಸಂತಾನ ಚಿಂತೆ, ಧನ ವ್ಯಯ, ಆರ್ಥಿಕ ಸಂಕಷ್ಟಗಳು.**

ಕೇತು ಫಲ: **ಆಕಸ್ಮಿಕ ಧನ ಲಾಭ, ಧರ್ಮ ಕ್ಷೇತ್ರಕ್ಕೆ ಪ್ರಯಾಣ.**

ಮಕರ: ಬೊ, ಜ, ಜಿ, ಸಿ, ಶು, ಶೆ, ಶೊ, ಗ, ಗಿ



ಕುಶಾಗ್ರಮತಿಗಳಾದ ನಿಮಗೆ ಸಂವತ್ಸರ ಪೂರ್ತಿ ತೃತೀಯ ಸ್ಥಾನ ಗೋಚಾರದ ಶ್ರೀ ಗುರುವು **'ಸ್ಥಾನ ಭ್ರಂಶಾತ್ಕಾರ್ಯ ವಿಘಾತಶ್ಚ ತೃತೀಯೇ'** ಎಂಬ ಜ್ಯೋತಿರ್ವಾಣಿಯಂತೆ ಸ್ಥಾನ ನಾಶ, ಪದಚ್ಯುತಿ. ಕೈಗೊಂಡ ಕಾರ್ಯಗಳಲ್ಲಿ ವಿಘ್ನತೆಗಳು ಉಂಟಾಗುತ್ತವೆ. ಇಷ್ಟ ಜನರ ವಿಯೋಗದಿಂದ ಸ್ವ-ಸ್ಥಳವನ್ನು ಬಿಟ್ಟು ಪರಸ್ಥಳ ವಾಸವನ್ನು ಅನುಭವಿಸಬೇಕಾಗುವುದು. ಜನರ ವಿರೋಧದ ಜೊತೆಗೆ ನಾನಾ ರೀತಿಯ ಕಷ್ಟಗಳು ನಿಮ್ಮನ್ನು ಅಗ್ನಿ ಪರೀಕ್ಷೆಗೆ ಒಡ್ಡಲಿದೆ. ನೆರೆಹೊರೆಯಲ್ಲಿ ಅಕಾರಣವಾದ ಕಲಹಗಳಿಂದ ಮಾನಸಿಕವಾಗಿ ನಲುಗುವಿರಿ. ಆರೋಗ್ಯವೂ ಅಷ್ಟಕ್ಕಷ್ಟೆ, ವೈದ್ಯಕೀಯ ಖರ್ಚುಗಳು ಕೈಮೀರುವುದು. **ಶ್ರೀ ಗುರು ಶಾಂತಿಗೆ 'ಓಂ ಬ್ರಂ ಬೃಹಸ್ಪತಯೇ ನಮಃ' ಮಂತ್ರ ಜಪಿಸಿ. ಔದುಂಬರ ವೃಕ್ಷ ಪ್ರದಕ್ಷಿಣೆ.** ಶ್ರೀ ಶನಿಮಹಾರಾಜನ ಈ ಸಂವತ್ಸರದಲ್ಲಿ ನಿಮ್ಮ ಜನ್ಮರಾಶಿ ಹಾಗೂ ದ್ವಿತೀಯ ಸ್ಥಾನದಲ್ಲಿ ಸಂಚರಿಸುವ ಪರಿಣಾಮ ಇದು ಸಾಡೇಸಾತಿಯ ಸಮಯವಾಗಿದೆ. ಪರಿಣಾಮ ಎಲ್ಲರಲ್ಲಿಯೂ ವಿರೋಧ, ಭೀತಿಯ ಪ್ರಸಂಗಗಳು ಘಟಿಸಲಿದೆ. ಸ್ವಂತ ಬಂಧು ಜನರನ್ನು ತೊರೆದು ಅನ್ಯ ಸ್ಥಳದಲ್ಲಿ ವಾಸಿಸಬೇಕಾಗುತ್ತದೆ. ಆಸ್ತಿ ವಿಷಯಗಳು ನಿಮ್ಮ ಅನುಕೂಲಕ್ಕೆ ಇರದು. ಆಗಾಗ ಕಾಯಿಲೆಗಳು ಕಾಡುತ್ತದೆ. ವಾಹನ ಚಾಲನೆ ಮೋಜಿಗಲ್ಲ ಎಂಬ ಅರಿವಿದ್ದರೆ ನಿಮಗೂ, ಮನೆ ಮಂದಿಗೂ ಕ್ಷೇಮ. ವಾಮ ಮಾರ್ಗದಿಂದ ಧನ ಸಂಪಾದನೆ ಆದರೂ ಮಾನಸಿಕ ಸುಖವಿರದು.

ಶ್ರೀ ಶನಿ ಶಾಂತಿಗೆ 'ಓಂ ಐಂ ಹ್ರೀಂ ಶನೈಶ್ಚರಾಯ ನಮಃ' ಮಂತ್ರ ಜಪಿಸಿ. ಶನಿವಾರ ಶಮೀ ವೃಕ್ಷ ಪ್ರದಕ್ಷಿಣೆ.

ಕುಂಭ: ಗು, ಗೆ, ಗೊ, ಸ, ಸಿ, ಸು, ಸೆ, ಸೊ, ದ




ಪರಹಿತ ಚಿಂತನೆಯೇ ರಾಶಿಗುಣವಾದ ನಿಮಗೆ ಸಂವತ್ಸರದಲ್ಲಿ ಶುಭ ಪ್ರದಾತ ಬೃಹಸ್ಪತಿಯು ದ್ವಿತೀಯ ಭಾವದಲ್ಲಿ ಗೋಚರಿಸುವ ಪರಿಣಾಮ **'ಪ್ರಾಪ್ಯಾರ್ಥೇರ್ಥಾನ್ ವ್ಯರಿರಪಿ ಕುರುತೇ ಕಾಂಕಾ... ಸ್ಯಾಜ್ಞೇ ಭ್ರಮರ ವಿಲಸಿತಮ್'** ಎಂಬ ಪರಾಶರೋಕ್ತಿಯಂತೆ ನೀವು ಸಿರಿ-ಸಂಪದಗಳನ್ನು ಹೇರಳವಾಗಿ ಸಂಪಾದಿಸುವಿರಿ. ಇಂಜಿನಿಯರಿಂಗ್ ಹಾಗೂ ವಿದ್ಯಾ ಸಂಸ್ಥೆಗಳು ಹೆಚ್ಚಿನ ಧನ ಲಾಭವನ್ನು ಹೊಂದುವರು. ಸೃಜನಶೀಲ ವ್ಯಕ್ತಿಗಳಿಗೆ ಪ್ರಶಸ್ತಿ, ಪುರಸ್ಕಾರಗಳು ದೊರೆಯುವುದು. ನಿವೇಶನ, ನೂತನ ಗೃಹ ಹೊಂದಲು ಗುರು ಕೃಪೆ ಇದೆ, ಪ್ರಯತ್ನಿಸಿ. ಮನೆಯಲ್ಲಿ ವಿವಾಹಾದಿ ಮಂಗಳ ಕಾರ್ಯಗಳು ಜರುಗುವುದು. ವಿದ್ಯಾರ್ಥಿಗಳು ಯಶ, ಕೀರ್ತಿಗಳಿಗೆ ಭಾಜನರಾಗುವರು. ನಿಮ್ಮ ಬುದ್ಧಿಮತ್ತೆ ಉತ್ತಮ ಮಟ್ಟವಿದ್ದು, ವಾಕ್ಚಾತುರ್ಯದಿಂದ ಕಾರ್ಯ ಸಾಧನೆ ಮಾಡಿಕೊಳ್ಳುವಿರಿ. ಶತ್ರುಗಳು ಪರಾಜಿತರಾಗುವರು.

ಕಲಿಯುಗ ದಂಡಾಧಿಕಾರಿಯಾದ ಶ್ರೀ ಶನಿದೇವನು ಸಂವತ್ಸರಾದಿಯಿಂದ ಜೂನ್ 2022ರವರೆಗೆ ದ್ವಾದಶ ವ್ಯಯ ಭಾವದಲ್ಲಿಯೂ ನಂತರ ಮುಂದಿನ ಯುಗಾದಿಯವರೆಗೆ ಜನ್ಮರಾಶಿಯಲ್ಲೂ ಸಂಚರಿಸುವುದರಿಂದ ಅನೇಕ ತೆರನಾದ ಕಷ್ಟ-ನಷ್ಟಗಳೂ, ಕ್ಲೇಶಗಳು ಘಟಿಸುವುದರಿಂದ ಜರ್ಝರಿತರಾಗುತ್ತೀರಿ. ವ್ಯಾಪಾರ-ವ್ಯವಹಾರಗಳಲ್ಲಿ ನಷ್ಟ, ಕಳ್ಳಕಾಕರಿಂದ ಹಾನಿಗಳು ಸಂಭವಿಸುತ್ತವೆ. ಶ್ರಮ ಪಟ್ಟು ಮಾಡಿದ ಕೆಲಸಗಳಿಗೆ ಸೂಕ್ತ ಪ್ರತಿಫಲವಿಲ್ಲದಂತೆ ಆಗುವುದು. ವಾಹನ ಚಾಲನಾ ಸಮಯದಲ್ಲಿ ತೀರಾ ಎಚ್ಚರವಿರಬೇಕು. **ಶ್ರೀ ಶನಿಮಹಾತ್ಮನ ಶಾಂತಿಗೆ ಕಪ್ಪು ಗೋವಿನ ಸೇವೆ, ಹನುಮಾನ್ ಚಾಲೀಸ ಪಠಿಸಿ.**

ರಾಹು ಫಲ: **ಸಾಹಸ ಕಾರ್ಯಗಳಲ್ಲಿ ಜಯ, ಕೀರ್ತಿ, ಸರ್ವ ಕೆಲಸಗಳಲ್ಲಿ ಶುಭ ಫಲ, ಸಹೋದರರೊಂದಿಗೆ ಕಲಹ.**

ಕೇತು ಫಲ: **ತೀರ್ಥಯಾತ್ರೆಯಿಂದ ಧನ್ಯತೆ, ಮನಃಚಾಂಚಲ್ಯ**

ಮೀನ: ದಿ, ದು, ಖ, ಝ, ತ, ದೆ, ದೊ, ಚ, ಚಿ



ಸಮದರ್ಶಿತ್ವದೊಂದಿಗೆ ದ್ವಿ-ಸ್ವಭಾವ ಗುಣ ಹೊಂದಿರುವ ನಿಮಗೆ ನಿಮ್ಮ ರಾಶಿ ಸ್ವಾಮಿಯಾದ ಶ್ರೀ ಗುರುದೇವ ನಿಮ್ಮ ಜನ್ಮರಾಶಿಯಲ್ಲೇ ಪರಿಭ್ರಮಿಸುವ ಫಲವಾಗಿ **'ಜೀವೇ ಜನ್ಮನ್ಯಪ ಗತಧನಧೀಃ ಸ್ಥಾನ ಭ್ರಷ್ಟೇ ಬಹು ಕಲಹಂಯುತಃ'**. ಅರ್ಥವೇನೆಂದರೆ ಜೀವಕ್ಕೆ ಹಿತವಿಲ್ಲ, ಅಧಿಕವಾದ ಧನವ್ಯಯ, ಸ್ಥಾನ ಭ್ರಷ್ಟತೆ, ಸ್ವಜನರಲ್ಲಿ ಶತ್ರುತ್ವ ಉಂಟಾಗಿ ಕಲಹಗಳು ಉಂಟಾಗುವುದು. ದೊರೆಯಬೇಕಾದ ಸ್ಥಾನಮಾನಗಳಿಂದ ವಂಚಿತರಾಗುತ್ತೀರಿ. **'ಕೈಗೆ ಬಂದ ತುತ್ತು ಬಾಯಿಗಿಲ್ಲ'** ಎಂಬಂತೆ ಆಗುವುದು. ಚಿತ್ತ ಭ್ರಮೆಯಿಂದ ಪೀಡಿತರಾಗುವಿರಿ. ಸ್ವದೇಶ ಅಥವಾ ಜನ್ಮಸ್ಥಳ ತ್ಯಾಗ ಮಾಡಬೇಕಾದೀತು. ವ್ಯಾಜ್ಯಗಳಿಂದಲೂ ಬವಣೆ ಪಡುವಿರಿ. **ಶ್ರೀ ಗುರು ಗ್ರಹ ಶಾಂತಿಗೆ ಶ್ರೀ ದತ್ತಾತ್ರೇಯ ಅರ್ಚನೆ, ಶ್ರೀ ಗುರು ಚರಿತ್ರೆ ಪಾರಾಯಣ, 'ಓಂ ಬ್ರಂ ಬೃಹಸ್ಪತಯೇ ನಮಃ' ಎಂಬ ಮಂತ್ರ ಜಪಿಸಿ.**

ನೀಲಾಂಜನ ಸಮಾಭಾಸನಾದ ಶ್ರೀ ಶನಿರಾಜನು ಜೂನ್ 2022ರವರೆಗೆ ಲಾಭ ಸ್ಥಾನದಲ್ಲಿಯೂ, ನಂತರ ಸಂವತ್ಸರದ ಅಂತ್ಯದವರೆಗೆ ವ್ಯಯ ಸ್ಥಾನದಲ್ಲಿಯೂ ಸಂಚರಿಸುತ್ತಾನೆ. ಲಾಭದಲ್ಲಿದ್ದಾಗ ಧನ-ಧಾನ್ಯ ಲಾಭ, ಇಂಜಿನಿಯರ್, ಕಾಂಟ್ರಾಕ್ಟರ್‌ಗಳಿಗೆ ಹೇರಳ ಧನಾದಾಯವಾಗುವುದು. ಅನೇಕ ವಿಧವಾದ ಸುಖ ಪ್ರಾಪ್ತಿ, ಹಾಗೂ ವೈಭವದ ಜೀವನ. ನಿಮ್ಮ ಸ್ವಭಾವದಲ್ಲಿ ತೀಕ್ಷ್ಣತೆ ಕಂಡು ಬರುವುದು. ನಿಮ್ಮ ಕಾರ್ಯ ಕ್ಷೇತ್ರದಲ್ಲಿ ಕೀರ್ತಿ ಲಭಿಸುತ್ತದೆ. ನಂತರ ವ್ಯಯಕ್ಕೆ ಬಂದಾಗ ಸಾಡೇಸಾತಿಯ ಪ್ರಾರಂಭವಾಗುತ್ತದೆ. ಪರಿಣಾಮ ಕಾರ್ಯಗಳಲ್ಲಿ ವಿಘ್ನ, ಆಸ್ತಿ ಸಂಬಂಧಿ ವ್ಯಾಜ್ಯಗಳು, ನ್ಯಾಯಾಲಯ ವಿಚಾರಗಳಲ್ಲಿ ಪರಾಜಯ, ನಿಮ್ಮ ಮಾನ, ಗೌರವಗಳಿಗೆ ಹಾನಿ ಉಂಟಾಗುವುದು. **ಶ್ರೀ ಶನಿ ಶಾಂತಿಗೆ ಶ್ರೀ ಮಾರುತಿ ಉಪಾಸನೆ.**

ರಾಹು ಫಲ: **ಎಲ್ಲರಲ್ಲಿಯೂ ವಿರೋಧ, ಗೃಹದಲ್ಲಿ ಕಲಹ.**

ಕೇತು ಫಲ: **ದೇಹ ಪೀಡೆ, ಅಪಘಾತ.**

ಯುಗಾದಿ ಹಬ್ಬ ಹಿನ್ನೆಲೆ: ತ್ರಿವೇಣಿ ಸಂಗಮದಲ್ಲಿ

ಪುಣ್ಯಸ್ನಾನ ಮಾಡಿದ ಸಹಸ್ರಾರು ಭಕ್ತರು



ಭಕ್ತ ಸಾಗರ
ಕೋವಿಡ್ ಹಿನ್ನೆಲೆಯಲ್ಲಿ ಕಳೆದೆರಡು ವರ್ಷಗಳಿಂದ ಕಳೆಗುಂದಿದ್ದ ಯುಗಾದಿ ಜಾತ್ರೆ ಈ ಬಾರಿ ಅದ್ಧೂರಿಯಾಗಿ ನೆರವೇರಿತು. ನಿರೀಕ್ಷೆ ಮೀರಿದ ಜನಸ್ತೋಮ ಸಂಗಮದಲ್ಲಿ ಜಮಾಯಿಸಿ ತ್ರಿವೇಣಿ ಸಂಗಮದಲ್ಲಿ ಮಿಂದು ಶ್ರೀಮಹಾಲಕ್ಷ್ಮಿ ಸಮೇತ ಗುಂಜಾನರಸಿಂಹಸ್ವಾಮಿ, ಅಗಸ್ತ್ಯೇಶ್ವರ, ವರ್ಷಕ್ಕೊಮ್ಮೆ ಮಾತ್ರವೇ ಪೂಜಿಸುವ ಭಿಕ್ಷೇಶ್ವರ, ಮೂಲ ಸ್ಥಾನೇಶ್ವರ ಹಾಗೂ ಶ್ರೀಬಳ್ಳೇಶ್ವರ ಸ್ವಾಮಿ ದರ್ಶನ ಪಡೆದರು. ಹಬ್ಬದ ಹಿನ್ನೆಲೆಯಲ್ಲಿ ಪಟ್ಟಣದ ದೇವಾಲಯಗಳಲ್ಲಿ ವಿಶೇಷ ಪೂಜೆ ನಡೆಯಿತು.

ತಿ.ನರಸೀಪುರ, ಏ.3(ಎಸ್‌ಕೆ)– ಹಿಂದೂಗಳ ಹೊಸ ಸಂವತ್ಸರ ಆರಂಭದ ದಿನ ಯುಗಾದಿ ಹಬ್ಬದ ಹಿನ್ನೆಲೆಯಲ್ಲಿ ಪಟ್ಟಣದ ತ್ರಿವೇಣಿ ಸಂಗಮದಲ್ಲಿ ಸಹಸ್ರಾರು ಭಕ್ತರು ಪುಣ್ಯ ಸ್ನಾನ ಮಾಡಿ ದೇವರ ದರ್ಶನ ಪಡೆದರು.

ತಾಲೂಕಿನ ದೊಡ್ಡಜಾತ್ರೆ ಎಂದೇ ಪ್ರಸಿದ್ಧವಾದ ಯುಗಾದಿ ಜಾತ್ರೆ ಕೋವಿಡ್ ಹಿನ್ನೆಲೆಯಲ್ಲಿ ಕಳೆದೆರಡು ವರ್ಷಗಳಿಂದ ಸ್ಥಗಿತ ಗೊಂಡಿತ್ತು. ಆದರೆ ಈ ಬಾರಿ ಕೊರೊನಾ ಸೋಂಕು ಕಡಿಮೆಯಾದ ಕಾರಣ ಪಟ್ಟಣದ ಕಾವೇರಿ–ಕಪಿಲಾ ಸ್ಫಟಿಕ ಸರೋವರ ಸಂಗಮವಾದ ತ್ರಿವೇಣಿ ಸಂಗಮದಲ್ಲಿ ನಿರೀಕ್ಷೆಗೂ ಮೀರಿದ ಭಕ್ತ ಸಮೂಹ ಜಮಾಯಿಸಿ ನದಿಯಲ್ಲಿ ಮಿಂದು ಶ್ರದ್ಧಾಭಕ್ತಿಯೊಂದಿಗೆ ಪೂಜೆ ಸಲ್ಲಿಸಿದರು.

ಮೈಸೂರು, ಚಾಮರಾಜನಗರ, ಮಂಡ್ಯ ಸೇರಿದಂತೆ ಮತ್ತಿತರ ಜಿಲ್ಲೆ, ತಾಲೂಕಿನ ಭಕ್ತರು ಯುಗಾದಿ ಹಬ್ಬದಂದು ನದಿಯಲ್ಲಿ ಪುಣ್ಯ ಸ್ನಾನ ಮಾಡಿ ಪುನೀತರಾದರು.

ಯುಗಾದಿ ಮುನ್ನಾ ದಿನ ಶುಕ್ರವಾರ ಭಕ್ತರು ಮಂಡ್ಯ ಜಿಲ್ಲೆ ಮಳವಳ್ಳಿ ತಾಲೂಕಿನ ಬೊಪ್ಪೇಗೌಡನಪುರ ಶ್ರೀಧರಗೆ ದೊಡ್ಡವರ ಮಠಕ್ಕೆ ತೆರಳಿ ಪೂಜೆ ಸಲ್ಲಿಸಿ ಮತ್ತೆ ಪಟ್ಟಣಕ್ಕೆ ವಾಪಸ್ ಬಂದು ವಾಸ್ತವ್ಯ ಹೂಡಿ ಅಲ್ಲೇ ಪರಿಶೆ ಮಾಡುತ್ತಾರೆ. ಯುಗಾದಿ ಹಬ್ಬಕ್ಕೆ ಒಂದು ವಾರ ಮುಂಚಿತವಾಗಿಯೇ ಮನೆ ಬಿಡುವ ಸಹಸ್ರಾರು ಭಕ್ತರು ಕೆ.ಆರ್.ನಗರ ತಾಲೂಕು ಕಪ್ಪಡಿಗೆ ಹೋಗಿ ರಾಚಪ್ಪಾಜಿ ದೇವರಿಗೆ ಪೂಜೆ ಸಲ್ಲಿಸಿ ಹಬ್ಬದ ದಿನವಾದ ಇಂದು ನದಿಯಲ್ಲಿ ಸ್ನಾನ ಮಾಡಿ ನಂತರವಷ್ಟೇ ತಮ್ಮ ಮನೆಗಳಿಗೆ ತೆರಳುತ್ತಾರೆ.

ಕಪ್ಪಡಿಗೆ ಹೋದವರು ಮಾತ್ರವಲ್ಲದೇ ದೇವರ ದೀಕ್ಷೆ ಪಡೆದ ನೀಲಗಾರರು, ಮಹದೇಶ್ವರ ಸ್ವಾಮಿ, ಮಂಟೇಸ್ವಾಮಿ, ಕಾಲಭೈರವೇಶ್ವರ, ಮುಡುಕುತೊರೆ ಪಾರ್ವತಿ ಮಲ್ಲಪ್ಪನ ದೀಕ್ಷೆ ಪಡೆದ ಗುಡ್ಡಪ್ಪಂದಿರು ತಮ್ಮ ಜೋಳಿಗೆ, ಜಾಗಟೆ, ಕಂಸಾಳೆ ಹಾಗೂ ಮನೆ ದೇವರುಗಳ ದೇವಸ್ಥಾನದ ವಿಗ್ರಹ ಮೂರ್ತಿಗಳನ್ನು ಸಂಗಮದಲ್ಲಿ ಸ್ವಚ್ಛಗೊಳಿಸಿ ಮಠಕ್ಕೆ ತೆರಳಿ ಸಾಮೂಹಿಕ ಪೂಜೆ ಸಲ್ಲಿಸಿದ ನಂತರ ಮೆರವಣಿಗೆ ಮೂಲಕ ಗ್ರಾಮಗಳಿಗೆ ಕೊಂಡೊಯ್ಯುವುದು ವಿಶೇಷ.

ಪಟ್ಟಣದ ಕುರುಬ ಸಮುದಾಯ ಹೆಗ್ಗುರಮ್ಮ, ಹುರದಮ್ಮ ದೇವರುಗಳಿಗೆ ಪಟ್ಟಣದಿಂದ ತಂಬಿಟ್ಟಿನ ಆರತಿಗಳೊಂದಿಗೆ ಮೆರವಣಿಗೆ ಮೂಲಕ ನದಿಯ ದಡಕ್ಕೆ ತಂದು ಅಲ್ಲಿ ವಿಶೇಷ ಪೂಜೆ ಮಾಡುವ ಮೂಲಕ ಭಕ್ತರಿಗೆ ಪ್ರಸಾದ ಹಂಚುತ್ತಾರೆ.

ಭರ್ಜರಿ ವ್ಯಾಪಾರ: ಯುಗಾದಿ ಹಬ್ಬದ ಹಿನ್ನೆಲೆಯಲ್ಲಿ ಶ್ರೀಗುಂಜಾ ನರಸಿಂಹಸ್ವಾಮಿ ದೇವಾಲಯದ ಮುಂದೆ ಹಾಕಲಾಗಿದ್ದ ಬೀದಿ ಬದಿ ವ್ಯಾಪಾರ ಭರ್ಜರಿಯಾಗಿ ನಡೆಯಿತು. ಕೊರೊನಾ ಹಿನ್ನೆಲೆಯಲ್ಲಿ ಕಳೆದೆರಡು ಬಾರಿ ದೇವಸ್ಥಾನದ ಮುಂದೆ ವ್ಯಾಪಾರಕ್ಕೆ ತಾಲೂಕು ಆಡಳಿತ ನಿಷೇಧ ಹೇರಿತ್ತು. ಆದರೆ ಈ ಬಾರಿ ಹೆಚ್ಚಿನ ಸಂಖ್ಯೆಯಲ್ಲಿಯೇ ಅಂಗಡಿ ತಲೆ ಎತ್ತಿದ್ದವು. ಸಿಹಿ–ಖಾರ ತಿಂಡಿಗಳ ವ್ಯಾಪಾರ ಭರ್ಜರಿಯಾಗಿ ನಡೆಯಿತು.

ಪ್ರಿಯಕರನ ಮನೆಯಲ್ಲಿ ಯುವತಿ ಆತ್ಮಹತ್ಯೆಗೆ ಯತ್ನ

ನಂಜನಗೂಡು, ಏ.3– ಮದುವೆ ಆಗುವುದಾಗಿ ನಂಬಿಸಿ ಕೈಕೊಟ್ಟ ಪ್ರಿಯಕರನ ಮನೆಯಲ್ಲೇ ಪ್ರಿಯತಮೆ ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ ಘಟನೆ ನಂಜನಗೂಡು ತಾಲೂಕಿನ ಕಂದೇಗಾಲ ಗ್ರಾಮದಿಂದ ವರದಿಯಾಗಿದೆ.

ತಾಲೂಕಿನ ಕಂದೇಗಾಲ ಗ್ರಾಮದ ಯುವತಿ ಪ್ರಿಯತಮನ ಹುಟ್ಟುಹಬ್ಬದ ದಿನವೇ ವಿಷಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದು, ಇದೀಗ ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದಾಳೆ. ಕಂದೇಗಾಲ ಗ್ರಾಮದ ಪ್ರಭುಸ್ವಾಮಿ ಎಂಬುವರ ಪುತ್ರ ತ್ಯಾಗರಾಜ್ ಅದೇ ಗ್ರಾಮದ ಯುವತಿಯನ್ನು ಕಳೆದ ನಾಲ್ಕು ವರ್ಷಗಳಿಂದ ಪ್ರೀತಿಸಿದ್ದಾನೆ ಎನ್ನಲಾಗಿದ್ದು, ಇವರ ಪ್ರೀತಿಗೆ ಕುಟುಂಬದವರು ವಿರೋಧ ವ್ಯಕ್ತಪಡಿಸಿದ ಕಾರಣ ತ್ಯಾಗರಾಜ್ ಮದುವೆಗೆ ನಿರಾಕರಿಸಿದ್ದಾನೆ ಎನ್ನಲಾಗಿದೆ.

ಕಳೆದ 3 ದಿನಗಳ ಹಿಂದೆ ಸ್ನೇಹಿತರೊಂದಿಗೆ ಹುಟ್ಟುಹಬ್ಬದ ಸಂಭ್ರಮಾಚರಣೆ ಆಚರಿಸಲು ಮುಂದಾದ ತ್ಯಾಗರಾಜ್ ಪ್ರಿಯತಮೆಯನ್ನೂ ಸಹ ಆಹ್ವಾನಿಸಿದ್ದ. ಈ ವೇಳೆ ಯುವತಿ ಮದುವೆ ಪ್ರಸ್ತಾಪ ಮಾಡಿದ್ದಾಳೆ. ಇದರಿಂದ ಕೋಪಗೊಂಡ ತ್ಯಾಗರಾಜ್ ಸ್ನೇಹಿತರ ಎದುರು ಆಕೆಗೆ ಕಪಾಳಕ್ಕೆ ಹೊಡೆದಿದ್ದಾನೆ. ಪ್ರಿಯಕರ ವರ್ತನೆಗೆ ಬೇಸತ್ತ ಪ್ರಿಯತಮೆ ಆತನ ಮನೆಗೆ ತೆರಳಿ ಪ್ರಿಯತಮನ ತಾಯಿಯೊಂದಿಗೆ ತನ್ನ ಪ್ರೇಮ ವಿಚಾರವನ್ನು ಸಂಪೂರ್ಣವಾಗಿ ತಿಳಿಸಿ ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದಾಳೆ. ವಿಷ ಕುಡಿದು ಸಾವು ಬದುಕಿನ ನಡುವೆ ಹೋರಾಟ ನಡೆಸುತ್ತಿದ್ದ ಯುವತಿಯನ್ನು ಗ್ರಾಮಸ್ಥರು ನಂಜನಗೂಡಿನ ಸರ್ಕಾರಿ ಆಸ್ಪತ್ರೆಗೆ ದಾಖಲು ಮಾಡಿದ್ದಾರೆ. ನಂತರ ವೈದ್ಯರ ಸಲಹೆ ಮೇರೆಗೆ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾಗಿದೆ. ಹುಲ್ಲಹಳ್ಳಿ ಪೊಲೀಸರು ಕೆ.ಆರ್.ಆಸ್ಪತ್ರೆಗೆ ತೆರಳಿ ಯುವತಿಯ ಹೇಳಿಕೆ ಪಡೆದಿದ್ದು, ಇನ್ನೆರಡು ದಿನದಲ್ಲಿ ಗ್ರಾಮದ ಮುಖಂಡರು ಪಂಚಾಯಿತಿ ಸೇರಿ ತೀರ್ಮಾನ ಮಾಡಲಿದ್ದಾರೆ. ಹೀಗಾಗಿ ಅಧಿಕೃತವಾಗಿ ದೂರು ನೀಡಿಲ್ಲ. ಒಂದು ವೇಳೆ ತನಗೆ ನ್ಯಾಯ ದೊರೆಯದಿದ್ದರೆ ದೂರು ಸಲ್ಲಿಸುವುದಾಗಿ ಯುವತಿ ತಿಳಿಸಿದ್ದರಿಂದ ದೂರು ದಾಖಲಾಗಿಲ್ಲ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮಕ್ಕಳಿಗೆ ಜ್ಞಾನಕ್ಕಿಂತ ಸದ್ಗುಣ ಮುಖ್ಯ: ಶಾಸಕ ಹೆಚ್‌ಪಿಎಂ



ಹುಣಸೂರು, ಏ.3(ಕೆಕೆ)– ಮಕ್ಕಳಿಗೆ ಜ್ಞಾನಕ್ಕಿಂತ ಸದ್ಗುಣ ಮುಖ್ಯ. ಆ ನಿಟ್ಟಿನಲ್ಲಿ ಶಿಕ್ಷಕರು ಹಾಗೂ ಪೋಷಕರು ಮಕ್ಕಳಿಗೆ ಪಠ್ಯಪುಸ್ತಕಗಳ ಜೊತೆ ಮಾನವೀಯ ಮೌಲ್ಯಗಳ ಅರಿವು ಮೂಡಿಸುವ ಕಡೆ ಗಮನ ಹರಿಸಬೇಕಿದೆ ಎಂದು ಶಾಸಕ ಹೆಚ್.ಪಿ.ಮಂಜುನಾಥ್ ತಿಳಿಸಿದರು.

ನಗರದ ಸರ್ಕಾರಿ ಹಿರಿಯ ಪ್ರಾಥಮಿಕ ಬಾಲಕರ ಶಾಲೆ ವಾರ್ಷಿಕೋತ್ಸವ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು ಸರ್ಕಾರಿ ಶಾಲಾ ಮಕ್ಕಳು ಖಾಸಗಿ ಶಾಲಾ ಮಕ್ಕಳಿಗಿಂತ ಹೆಚ್ಚು ಕ್ರಿಯಾಶೀಲರಾಗಿದ್ದು, ಅವರಿಗೆ ಸರಿಯಾದ ಮಾರ್ಗದರ್ಶನ ಸಿಕ್ಕರೆ ಮುಂದೊಂದು ದಿನ ಅವರು ಉನ್ನತ ಮಟ್ಟಕ್ಕೆ ತಲುಪುವುದು ಶತಸಿದ್ಧ ಎಂದರು.

ಕೋವಿಡ್ ನಂತರ ಬಹುತೇಕ ಪೋಷಕರು ಸರ್ಕಾರಿ ಶಾಲೆ ಕಡೆ ಮುಖ ಮಾಡಿದ್ದು, ಇದರಿಂದ ಸರ್ಕಾರಿ ಶಾಲೆಗಳ ಉಳಿವಿಗೆ ನಾಂದಿ ಹಾಡಿದೆ. ತಾಲೂಕಿನಾದ್ಯಂತ ಶಿಕ್ಷಣ, ಆರೋಗ್ಯ ಹಾಗೂ ನೀರಾವರಿಗೆ ಹೆಚ್ಚು ಆದ್ಯತೆ ನೀಡುತ್ತಾ ಬಂದಿರುವ ನನಗೆ ತಾಲೂಕಿನಲ್ಲಿ ಶಿಕ್ಷಣ ಕ್ರಾಂತಿ ಮಾಡುವ ಮಹಾದಾಸೆ ಇದ್ದು, ಶಿಕ್ಷಣಾಧಿಕಾರಿಗಳು, ಬಹುತೇಕ ಶಿಕ್ಷಕರು ಸಾಥ್ ನೀಡುತ್ತಿದ್ದಾರೆ ಎಂದರು.

ಸರ್ಕಾರಿ ಶಾಲೆ ಖಾಸಗಿ ಶಾಲೆಗೆ ಪೈಪೋಟಿ ನೀಡುವ ಮಟ್ಟಿಗೆ ಅಭಿವೃದ್ಧಿಪಡಿಸಿರುವ ಶಾಲಾಭಿವೃದ್ಧಿ ಸಮಿತಿ ಹಾಗೂ ಮುಖ್ಯೋಪಾಧ್ಯಾಯ ಪ್ರಸನ್ನ ಕುಮಾರ್, ಶಿಕ್ಷಕ ಮಾಧು ಪ್ರಸಾದ್ ತಂಡಕ್ಕೆ ಶಾಸಕರು ಅಭಿನಂದನೆ ಸಲ್ಲಿಸಿದರು. ಶಾಲಾ ಎಸ್‌ಡಿಎಂಸಿ ಅಧ್ಯಕ್ಷ ಹಾಗೂ ವಕೀಲ ಪುಟ್ಟರಾಜು ಮಾತನಾಡಿ, 130 ವರ್ಷ ಇತಿಹಾಸ ವಿರುವ ಈ ಶಾಲೆ ಕಡೆಗಣನೆಯಿಂದ ಅನೈತಿಕ ತಾಣವಾಗಿತ್ತು. ಇದನ್ನು ಮನಗಂಡ ನಾನು ಹಾಗೂ ನನ್ನ ಕೆಲ ಸ್ನೇಹಿತರು ಮತ್ತು ಶಿಕ್ಷಕ ವೃಂದ ಚರ್ಚಿಸಿ ಪೋಷಕರ ವಿಶ್ವಾಸ ಗಳಿಸಿದ ಪರಿಣಾಮ ಇಂದು ಮಾದರಿ ಶಾಲೆಯಾಗಿ ಯಶಸ್ವಿಯಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ವಾರ್ಷಿಕೋತ್ಸವ ಅಂಗವಾಗಿ ಏರ್ಪಡಿಸಲಾಗಿದ್ದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಮಕ್ಕಳ ಹಾಡು, ನೃತ್ಯ ಎಲ್ಲರ ಮನಸೂರೆಗೊಂಡವು. ಇದೇ ವೇದಿಕೆಯಲ್ಲಿ ಹಿಂದಿನ ಶಿಕ್ಷಕರಿಗೆ ಗೌರವ ಸಮರ್ಪಣೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ಎಂಎಎಸ್ ಫೌಂಡೇಶನ್ ಅಧ್ಯಕ್ಷ ಸತ್ಯಪ್ಪ ಮಾತನಾಡಿದರು. ಮಾಜಿ ನಗರಸಭಾ ಅಧ್ಯಕ್ಷೆ ಅನುಷಾ, ಬಿಇಓ ನಾಗರಾಜು, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಗೋವಿಂದೇಗೌಡ, ಮಾಜಿ ನಗರಸಭಾ ಅಧ್ಯಕ್ಷ ಹೆಚ್.ವೈ.ಮಹದೇವ್, ಶಿಕ್ಷಕರಾದ ನರಸಿಂಹ, ಶಿಕ್ಷಕಿಯರಾದ ಇಂದ್ರಾ, ಶೋಭಾ ಹಾಗೂ ಅಂಜುಂ ಉಪಸ್ಥಿತರಿದ್ದರು.

ವಿಜೃಂಭಣೆಯ ಶ್ರೀಮೂಲ ಸ್ಥಾನೇಶ್ವರಸ್ವಾಮಿ ಮೆರವಣಿಗೆ



ತಿ.ನರಸೀಪುರ, ಏ.3(ಎಸ್‌ಕೆ)– ಯುಗಾದಿ ಹಬ್ಬದ ಹಿನ್ನೆಲೆಯಲ್ಲಿ ತಾಲೂಕು ಟೈಲರ್‌ಗಳ ಸಂಘದಿಂದ ಶ್ರೀಮೂಲ ಸ್ಥಾನೇಶ್ವರ ಸ್ವಾಮಿಯ ಉತ್ಸವ ಮೂರ್ತಿ ಮೆರವಣಿಗೆ ಭಾನುವಾರ ವಿಜೃಂಭಣೆಯಿಂದ ಜರುಗಿತು.

ಪ್ರತಿ ವರ್ಷ ಪಟ್ಟಣದ ಹೊರ ವಲಯದ ಹಳೇ ಸಂತೇಮಾಳದ ಬಳಿಯ ಶ್ರೀ ಅನಾದಿ ಮೂಲ ಸ್ಥಾನೇಶ್ವರ ಸ್ವಾಮಿ ಉತ್ಸವಮೂರ್ತಿ ಮೆರವಣಿಗೆ ಮಾಡಲಾಗುತ್ತಿತ್ತು. ಆದರೆ ಕಳೆದೆರಡು ವರ್ಷಗಳಿಂದ ಕೋವಿಡ್ ಹಿನ್ನೆಲೆಯಲ್ಲಿ ಉತ್ಸವಕ್ಕೆ ಬ್ರೇಕ್ ಬಿದ್ದಿತ್ತು. ಈಗ ಕೊರೊನಾ ಹಾವಳಿ ಕಡಿಮೆಯಾಗಿರುವುದರಿಂದ ಮತ್ತೆ ಉತ್ಸವ ಮೂರ್ತಿ ಮೆರವಣಿಗೆಗೆ ಚಾಲನೆ ನೀಡಲಾಗಿದೆ.

ಮೂಲ ಸ್ಥಾನೇಶ್ವರಸ್ವಾಮಿ ದೇವಸ್ಥಾನದಲ್ಲಿ ಮುಂಜಾನೆಯಿಂದಲೇ ಹೋಮ–ಹವನ ಸೇರಿದಂತೆ ಪೂಜಾ ಕೈಂಕರ್ಯ ನಡೆಸಿ ಉತ್ಸವಮೂರ್ತಿಗೆ ಹೂವಿನ ಅಲಂಕಾರ ಮಾಡಿ ಸಿಂಗರಿಸಿ ಮೆರವಣಿಗೆಗೆ ಚಾಲನೆ ನೀಡಲಾಯಿತು. ಪಟ್ಟಣದ ಚಿಕ್ಕಂಗಡಿ, ದೊಡ್ಡಂಗಡಿ ಬೀದಿ, ವಿಶ್ವ ಕರ್ಮ ಬೀದಿ, ಪ್ರೈಮರಿ ಸ್ಕೂಲ್ ರಸ್ತೆಗಳಲ್ಲಿ ಮೆರವಣಿಗೆ ನಡೆಸಿ ಮತ್ತೆ ದೇವಸ್ಥಾನಕ್ಕೆ ಉತ್ಸವ ಮೂರ್ತಿ ತರಲಾಯಿತು. ಬಳಿಕ ಸಂಪ್ರದಾಯದಂತೆ ದೇವಸ್ಥಾನದ ಸುತ್ತ ಉತ್ಸವ ಮೂರ್ತಿಯನ್ನು 3 ಸುತ್ತು ಮೆರವಣಿಗೆ ಮಾಡಿ ಮಹಾ ಮಂಗಳಾರತಿಯೊಂದಿಗೆ ಸ್ವಸ್ಥಾನಕ್ಕೆ ಸೇರಿಸಲಾಯಿತು. ಉತ್ಸವದ ಹಿನ್ನೆಲೆಯಲ್ಲಿ ದೇವಸ್ಥಾನದ ಮುಂಭಾಗ ಅನ್ನ ಸಂತರ್ಪಣೆ ನಡೆಸಲಾಯಿತು.

ಸಹಾಯಧನಕ್ಕೆ ಮನವಿ: ಟೈಲರ್ ಉದ್ಯಮವನ್ನೇ ಅವಲಂಬಿಸಿರುವ ಸಂಘದ ಸದಸ್ಯರು ತೀರಾ ಬಡತನದಲ್ಲಿ ಕಷ್ಟದಿಂದ ಜೀವನ ಸಾಗಿಸುತ್ತಿದ್ದಾರೆ. ಕೋವಿಡ್ ಸಂದರ್ಭ ಸರ್ಕಾರ ಟೈಲರ್‌ಗಳಿಗೆ ಪರಿಹಾರ ಧನ ಘೋಷಿಸಿತ್ತು. ಆದರೆ ಸಹಾಯಧನ ಸಮರ್ಪಕವಾಗಿ ಫಲಾನುಭವಿಗಳಿಗೆ ತಲುಪಲೇ ಇಲ್ಲ. ಈಗಲೂ ಸಹ ನಷ್ಟ ಸರಿದೂಗಿಸಲು ಆಗುತ್ತಿಲ್ಲ. ಆದ್ದರಿಂದ ಕೂಡಲೇ ಶಾಸಕರು ಸರ್ಕಾರದ ಗಮನ ಸೆಳೆದು ಸಂಕಷ್ಟದಲ್ಲಿ ರುವ ಟೈಲರ್‌ಗಳಿಗೆ ಪರಿಹಾರ ಧನ ಕೊಡಿಸ ಬೇಕೆಂದು ತಾಲೂಕು ಟೈಲರ್ ಸಂಘದ ಅಧ್ಯಕ್ಷ ಫ್ಯಾಮಿಲಿ ಮಹದೇವಸ್ವಾಮಿ ಮನವಿ ಮಾಡಿದರು.

ಈ ವೇಳೆ ಸಂಘದ ಗೌರವಾಧ್ಯಕ್ಷ ಮಾದರಾಜು, ಉಪಾಧ್ಯಕ್ಷರಾದ ಮಹದೇವ ಸ್ವಾಮಿ, ಎಂ.ಎಲ್.ಮಹದೇವ್, ಕಾರ್ಯದರ್ಶಿ ರಾಜ ಬುದ್ಧಿ, ಖಜಾಂಚಿ ನಾಗಣ್ಣ ಎಂ.ಬಿ.ಎಚ್. ನಾಗರಾಜು, ಹರೀಶ್, ಸುರೇಶ್, ಕೆ.ಮಾದಯ್ಯ, ಬಸವರಾಜು, ವೆಂಕಟೇಶ್, ಗುರುರಾಜ್, ರಂಗಸ್ವಾಮಿ, ಮಹೇಶ್, ವಸಂತ ಟೈಲರ್ ಸುರೇಶ್, ನಾಗರಾಜು (ವರುಣ್), ಸಿಐಡಿ ರಾಜು, ಸೋಮಣ್ಣ, ನಜೀರ್ ಸೇರಿದಂತೆ ಸಂಘದ ಸದಸ್ಯರಿದ್ದರು.

ಹಲಾಲ್ ಕಟ್ ಮಾಂಸ ಬಹಿಷ್ಕರಿಸುವಂತೆ ಕರೆ ನೀಡಿದ್ದ

ಜನ ಜಾಗೃತಿಗೆ ನಂ.ಗೂಡಿನಲ್ಲಿ ಮಿಶ್ರ ಪ್ರತಿಕ್ರಿಯೆ



ನಂಜನಗೂಡು, ಏ.3– ಹಿಂದೂಪರ ಸಂಘಟನೆಗಳು ಹಲಾಲ್ ಕಟ್ ಮಾಂಸ ಬಹಿಷ್ಕರಿಸುವಂತೆ ಕರೆ ನೀಡಿದ್ದ ಜನ ಜಾಗೃತಿಗೆ ನಂಜನಗೂಡಿನಲ್ಲಿ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಯಿತು.

ಯುಗಾದಿ ಹೊಸತೊಡಕಿಗೆ ಕೆಲ ಹಿಂದೂಗಳು ಮುಸ್ಲಿಂಮರ ಹಲಾಲ್ ಕಟ್ ಮಾಂಸ ಖರೀದಿಯತ್ತ ತಿರುಗಿ ನೋಡದೆ ತಾಲೂಕಿನ ಕೆಂಪಿಸಿದ್ದನ ಹುಂಡಿ ಗ್ರಾಮದ ಹಿಂದೂಗಳ ಮಾರಾಟ ಮಳಿಗೆಗಳಿಗೆ ತೆರಳಿ ಮಾಂಸ ಖರೀದಿಸಿದರು. ಸಾವಿರಾರು ಹಿಂದೂಗಳು ಸರದಿ ಸಾಲಿನಲ್ಲಿ ನಿಂತು ಜಟ್ಕಾ ಕಟ್ ಮಾಂಸ ಖರೀದಿಗೆ ಮುಗಿಬಿದ್ದರು. ಇತ್ತ ದಸಂಸ ಒಕ್ಕೂಟದ ಸದಸ್ಯರು ನೀಲಿ ಶಾಲು ಧರಿಸಿ ನಗರದ ಮಾಂಸ ಮಾರು ಕಟ್ಟೆಗೆ ತೆರಳಿ ಸಾಮೂಹಿಕವಾಗಿ ಹಲಾಲ್ ಕಟ್ ಮಾಂಸ ಖರೀದಿಸುವ ಮೂಲಕ ಹಿಂದೂ ಪರ ಸಂಘಟನೆಗಳಿಗೆ ಟಾಂಗ್ ನೀಡಿದರು.

ಜನಸಂಗ್ರಾಮ ಪರಿಷತ್‌ನ ವಿಜಯ ಕುಮಾರ್ ಮಾತನಾಡಿ, ನಮಗೆ ಹಲಾಲ್ ಮಾಂಸ, ಜಟ್ಕಾ ಮಾಂಸದ ಬಗ್ಗೆ ಗೊತ್ತಿಲ್ಲ. ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಧರ್ಮ, ದೇಶ ಭಕ್ತಿ ಹೆಸರಿನಲ್ಲಿ ಕೋಮು ಭಾವನೆ ಬಿತ್ತಲು ಈ ಹಲಾಲ್, ಜಟ್ಕಾ ಮಾಂಸ ಎಂದು ವಿವಾದ ಸೃಷ್ಟಿಸುತ್ತಿದ್ದಾರೆ. ನಾವು ಮಾರಿಹಬ್ಬ ಸಂದರ್ಭ ಗುಡ್ಡೆ ಮಾಂಸ ತಿನ್ನುತ್ತೇವೆ. ನಿತ್ಯ ಹಲಾಲ್ ಮಾಂಸವನ್ನೂ ತಿನ್ನುತ್ತೇವೆ. ಈ ಬಗ್ಗೆ ಜಾಗೃತಿ ಮೂಡಿಸಲು ಹಲಾಲ್ ಮಾಂಸ ಖರೀದಿಸುವ ಮೂಲಕ ಮುಸ್ಲಿಂ ಭಾಂದವರಿಗೆ ನೈತಿಕ ಸ್ಥೈರ್ಯ ತುಂಬುವ ಕೆಲಸಕ್ಕೆ ಮುಂದಾಗಿದ್ದೇವೆ. ಆಹಾರ ನಮ್ಮ ಹಕ್ಕು ಇದರಲ್ಲಿ ಧರ್ಮ ಕೋಮು ಭಾವನೆ ಬಿತ್ತಬಾರದು ಎಂದರು.

ಈ ವೇಳೆ ತಾಪಂ ಮಾಜಿ ಅಧ್ಯಕ್ಷ ನಾಗೇಶ್ ರಾಜ್, ದಸಂಸ ಒಕ್ಕೂಟದ ಅಧ್ಯಕ್ಷ ಸುರೇಶ್, ಚುಂಚನಹಳ್ಳಿ ಮಲ್ಲೇಶ್, ಅಭಿನಾಗ ಭೂಷಣ್, ಕಳಲೆ ರಾಜೇಶ್, ಶಿವಣ್ಣ, ಪುಟ್ಟ ಸ್ವಾಮಿ ಸೇರಿದಂತೆ ಪದಾಧಿಕಾರಿಗಳು ಇದ್ದರು.

ಕೋಟೆಯಲ್ಲಿ ಗಾಳಿ, ಮಳೆ: ಅಪಾರ ನಷ್ಟ



ಹೆಚ್.ಡಿ.ಕೋಟೆ, ಏ.3(ಮಂಜು)– ತಾಲೂಕಿನಲ್ಲಿ ಶನಿವಾರ ರಾತ್ರಿ ಸುರಿದ ಗಾಳಿ ಮಳೆಗೆ ಅಪಾರ ನಷ್ಟ ಸಂಭವಿಸಿದೆ.

ತಾಲೂಕಿನ ಅಣ್ಣೂರು ಚಿಕ್ಕೆರೆ ಹಾಡಿಯ ಜಾನಕಮ್ಮನವರ ಮನೆ ಮೇಲೆ ನೀಲಗಿರಿ ಮರ ಬಿದ್ದು ಮನೆ ಸಂಪೂರ್ಣ ಜಖಂಗೊಂಡಿದೆ. ಬಿರುಗಾಳಿಗೆ ಮರ ಬೀಳುತ್ತಿರುವುದು ತಿಳಿಯುತ್ತಿದ್ದಂತೆ ಮನೆಯಲ್ಲಿದ್ದವರು ಹೊರಗೆ ಓಡಿ ಬಂದು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಅಲ್ಲದೇ ಮನೆಯಲ್ಲಿದ್ದ ವಸ್ತುಗಳು ಹಾಳಾಗಿದ್ದು, ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕೆ ಆಗಮಿಸಿ ಪರಿಶೀಲಿಸಿ ಸೂಕ್ತ ಪರಿಹಾರ ನೀಡಬೇಕು ಎಂದು ಆದಿವಾಸಿ ಮುಖಂಡ ವಿಜಯಕುಮಾರ್ ಒತ್ತಾಯಿಸಿದ್ದಾರೆ.

ಮತ್ತೊಂದೆಡೆ ತಾಲೂಕಿನ ಭೀಮನಹಳ್ಳಿಯಲ್ಲಿ ಗಾಳಿ ಮಳೆಗೆ ಹತ್ತಕ್ಕೂ ಹೆಚ್ಚು ಮನೆಗಳ ಮೇಲ್ಛಾವಣಿ ಹಾರಿ ಹೋಗಿದೆ. ಜಮೀನಿನಲ್ಲಿ ಬೆಳೆದಿದ್ದ ಬಾಳೆ ಬೆಳೆ ನೆಲಕ್ಕುರುಳಿ ಅಪಾರ ಬೆಳೆ ನಷ್ಟ ಉಂಟಾಗಿದೆ. ಗ್ರಾಮದ ಜಿಪಂ ಮಾಜಿ ಸದಸ್ಯ ಬಿ.ವಿ. ಬಸವರಾಜು ಅವರ ಕೊಟ್ಟಿಗೆ ಮತ್ತು ತಂಬಾಕಿನ ಬ್ಯಾರಲ್ ತೀವ್ರ ಮಳೆ ಗಾಳಿಯಿಂದ ಬಿದ್ದು ಹೋಗಿದೆ. ಈ ಸಂಬಂಧ ಮಾತನಾಡಿರುವ ಅವರು, ಬಿರುಗಾಳಿಗೆ ಕೊಟ್ಟಿಗೆ ಛಾವಣಿ ಸಂಪೂರ್ಣ ನೆಲಕಚ್ಚಿದ್ದು, ತೀವ್ರ ನಷ್ಟವುಂಟಾಗಿದೆ. ಮನೆಯಲ್ಲಿದ್ದ ವಸ್ತುಗಳು ಮಳೆಯಿಂದ ನೆನೆದು ಹಾಳಾಗಿದೆ, ಇದರಿಂದ 2ಲಕ್ಷಕ್ಕೂ ಹೆಚ್ಚು ನಷ್ಟವುಂಟಾಗಿದೆ ಎಂದು ಅಳಲು ತೋಡಿ ಕೊಂಡಿದ್ದಾರೆ.

ಚಿಕ್ಕವಡ್ಡರಗುಡಿ ಪಿಎಸಿಎಸ್ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಭೇರ್ಯ, ಏ.3– ಕೆ.ಆರ್.ನಗರ ತಾಲೂಕಿನ ಚಿಕ್ಕವಡ್ಡರಗುಡಿ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಕಾಮಾಕ್ಷಮ್ಮ, ಉಪಾಧ್ಯಕ್ಷರಾಗಿ ಮಹದೇವ ನಾಯಕ ಆಯ್ಕೆಯಾಗಿದ್ದಾರೆ.

ಸಂಘದ ಕಚೇರಿಯಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಕಾಮಾಕ್ಷಮ್ಮ ಹಾಗೂ ಕೆಂಪೇಗೌಡ, ಉಪಾಧ್ಯಕ್ಷ ಸ್ಥಾನಕ್ಕೆ ಮಹದೇವ ನಾಯಕ ಒಬ್ಬರೇ ನಾಮಪತ್ರ ಸಲ್ಲಿಸಿದ್ದರು.

ನಂತರ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆ ಪ್ರಕ್ರಿಯೆಯಲ್ಲಿ 8 ಮತ ಪಡೆದು ಕಾಮಾಕ್ಷಮ್ಮ ಅಧ್ಯಕ್ಷರಾಗಿ ಆಯ್ಕೆಯಾದರೇ, ಕೆಂಪೇಗೌಡ 5 ಮತ ಪಡೆದು ಪರಾಭವಗೊಂಡರು. ಉಪಾಧ್ಯಕ್ಷ ಸ್ಥಾನಕ್ಕೆ ಮಹಾದೇವ ನಾಯಕ ಒಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಅವರ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಸಹಕಾರ ಸಂಘಗಳ ಜಂಟಿ ನಿಬಂಧಕರ ಕಚೇರಿ ಪ್ರಥಮ ದರ್ಜೆ ಸಹಾಯಕ ಎಂ.ಎನ್.ಸೋಮಶೇಖರ್ ಘೋಷಿಸಿದರು.

ನೂತನ ಅಧ್ಯಕ್ಷೆ ಕಾಮಾಕ್ಷಮ್ಮ ಮಾತನಾಡಿ, ಸಂಘದ ಅಭಿವೃದ್ಧಿಗೆ ಪೂರಕವಾಗಿ ಕಾರ್ಯ ನಿರ್ವಹಿಸುತ್ತೇನೆ. ಜೊತೆಗೆ ಜಿಲ್ಲಾ ಸಹಕಾರ ಬ್ಯಾಂಕ್‌ನಿಂದ ರೈತರಿಗೆ ಹೆಚ್ಚಿನ ಸಾಲ ಸೌಲಭ್ಯ ಕೊಡಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇನೆ ಎಂದರು.

ಈ ವೇಳೆ ಎಂಸಿಡಿಸಿಸಿ ಬ್ಯಾಂಕ್ ಮೇಲ್ವಿಚಾರಕ ಸತೀಶ್, ಸಂಘದ ಸಿಇಓ ಭಾಸ್ಕರ್, ಸಿಬ್ಬಂದಿಗಳಾದ ಜಯರಾಂ, ನಂದೀಶ್, ಈಶ್ವರಚಾರ್, ನಿರ್ದೇಶಕರಾದ ನಾಗಮ್ಮ, ಪದ್ಮಮ್ಮ, ಕೃಷ್ಣೇಗೌಡ, ನಿಂಗಾಜೋಗಿ, ಜಿ.ಜೆ.ಮಹದೇವ, ರಂಗೇಗೌಡ, ವೀರಭದ್ರಸ್ವಾಮಿ, ರಮೇಶ್ ಬಾಬು, ನಾರಾಯಣ ಹಾಜರಿದ್ದರು.

ನೂತನ ಅಧ್ಯಕ್ಷೆ ಕಾಮಾಕ್ಷಮ್ಮ ಹಾಗೂ ಉಪಾಧ್ಯಕ್ಷ ಮಹದೇವನಾಯಕ ಅವರನ್ನು ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ಜಿ.ಎನ್. ರಾಜೇಗೌಡ, ತಾಪಂ ಮಾಜಿ ಸದಸ್ಯ ಜಿ.ಆರ್.ಮಹದೇವ್, ಗ್ರಾಪಂ ಸದಸ್ಯರಾದ ಜಿ.ಎಸ್.ರಾಜೇಗೌಡ, ಜಿ.ಸಿ.ಸತೀಶ್, ಗ್ರಾಪಂ ಮಾಜಿ ಅಧ್ಯಕ್ಷ ಜಿ.ಕೆ.ನಾಗೇಗೌಡ, ಮಾಜಿ ಉಪಾಧ್ಯಕ್ಷರಾದ ಜಿ.ಪಿ.ಚಂದ್ರು, ಲಕ್ಷ್ಮಣ, ಜಿ.ಆರ್. ಚಂದ್ರು, ಮುಖಂಡರಾದ ಜಿ.ಕೆ.ರಾಮಚಂದ್ರ, ಜಿ.ಎಲ್. ಬೀರಾಜ್, ದೇವೇಂದ್ರ, ಮನು, ಪ್ರಸನ್ನ, ಜಿ.ಎಲ್.ಮಂಜುನಾಥ್ ಹಾಗೂ ಕಂಚಿನಕೆರೆ, ಚಿಕ್ಕವಡ್ಡರಗುಡಿ, ಗಂಧನಹಳ್ಳಿ, ಬೊಮ್ಮೇನಹಳ್ಳಿ ಗ್ರಾಮಸ್ಥರು ಅಭಿನಂದಿಸಿದರು.

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಮಾರ್ಬಿಯಸ್ (ಇಂ): ಬೆ.10.45ಕ್ಕೆ, ರಾ.9.50ಕ್ಕೆ, ಜೇಮ್ಸ್ (ಕ): ಮ.1ಕ್ಕೆ, ಅಟ್ಯಾಕ್ (ಹಿಂ): ಮ.3.55ಕ್ಕೆ, ಆರ್‌ಆರ್‌ಆರ್ (3ಡಿ)(ತೆ): ಸಂ.6.20ಕ್ಕೆ.
ಸ್ಕ್ರೀನ್ 2	ಬಾಡಿಗಾಡ್ (ಕ): ಬೆ.10.45ಕ್ಕೆ, ತಲೆದಂಡ (ಕ): ಮ.1.20ಕ್ಕೆ, ಜೇಮ್ಸ್ (ಕ): ಸಂ.4ಕ್ಕೆ, ರಾ.7ಕ್ಕೆ, ಅಟ್ಯಾಕ್ (ಹಿಂ): ರಾ.10ಕ್ಕೆ.
ಸ್ಕ್ರೀನ್ 3	ಹೋಂ ಮಿನಿಸ್ಟರ್ (ಕ): ಬೆ.10.35ಕ್ಕೆ, ಸಂ.4.15ಕ್ಕೆ, ಲೋಕಲ್ ಟ್ರೈನ್ (ಕ): ಮ.1.30ಕ್ಕೆ, ದಿ ಕಾಶ್ಮೀರ್ ಫೈಲ್ಸ್ (ಹಿಂ): ಸಂ.6.45ಕ್ಕೆ, ಆರ್‌ಆರ್‌ಆರ್ (2ಡಿ)(ಹಿಂ): ರಾ.10ಕ್ಕೆ.
ಸ್ಕ್ರೀನ್ 4	ಆರ್‌ಆರ್‌ಆರ್ (2ಡಿ)(ಕ): ಬೆ.10.55ಕ್ಕೆ, ಆರ್‌ಆರ್‌ಆರ್ (2ಡಿ)(ತೆ): ಮ.2.30ಕ್ಕೆ, ಸಂ.6.15ಕ್ಕೆ, ರಾ.9.55ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಆರ್‌ಆರ್‌ಆರ್ (ಹಿಂ): ಬೆ.9.30ಕ್ಕೆ, ಅಟ್ಯಾಕ್ (ಹಿಂ): ಮ.1.10ಕ್ಕೆ, ಆರ್‌ಆರ್‌ಆರ್ (3ಡಿ)(ತೆ): ಮ.3.55ಕ್ಕೆ, ಮಾರ್ಬಿಯಸ್ (ಇಂ): ರಾ.7.35ಕ್ಕೆ, ಆರ್‌ಆರ್‌ಆರ್ (3ಡಿ)(ಹಿಂ): ರಾ.10ಕ್ಕೆ.
ಸ್ಕ್ರೀನ್ 2	ಮಾರ್ಬಿಯಸ್ (ಇಂ): ಬೆ.9.35ಕ್ಕೆ, ಆರ್‌ಆರ್‌ಆರ್ (ತೆ): ಬೆ.11.55ಕ್ಕೆ, ಸಂ.6.10ಕ್ಕೆ, ಬಾಡಿಗಾಡ್ (ಕ): ಮ.3.35ಕ್ಕೆ, ದಿ ಕಾಶ್ಮೀರ್ ಫೈಲ್ಸ್ (ಹಿಂ): ರಾ.9.50ಕ್ಕೆ.
ಸ್ಕ್ರೀನ್ 3	ಜೇಮ್ಸ್ (ಕ): ಬೆ.9.50ಕ್ಕೆ, ಮ.3.45ಕ್ಕೆ, ರಾ.9.40ಕ್ಕೆ, ಮಾರ್ಬಿಯಸ್ (ಇಂ): ಮ.1ಕ್ಕೆ, ಅಟ್ಯಾಕ್ (ಹಿಂ): ಸಂ.6.55ಕ್ಕೆ.
ಸ್ಕ್ರೀನ್ 4	ಹೋಂ ಮಿನಿಸ್ಟರ್ (ಕ): ಬೆ.10.10ಕ್ಕೆ, ಸಂ.6.45ಕ್ಕೆ, ತಲೆದಂಡ (ಕ): ಮ.3.55ಕ್ಕೆ, ಲೋಕಲ್ ಟ್ರೈನ್ (ಕ): ಮ.12.55ಕ್ಕೆ, ಆರ್‌ಆರ್‌ಆರ್ (ತೆ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಲೋಕಲ್ ಟ್ರೈನ್ (ಕ): ಬೆ.10.30ಕ್ಕೆ, ಸಂ.4.15ಕ್ಕೆ, ಜೇಮ್ಸ್ (ಕ): ಮ.1.15ಕ್ಕೆ, ಅಟ್ಯಾಕ್ (ಹಿಂ): ರಾ.7ಕ್ಕೆ, ಆರ್‌ಆರ್‌ಆರ್ (2ಡಿ) (ತೆ): ರಾ.9.30ಕ್ಕೆ.
ಸ್ಕ್ರೀನ್ 2	ಬಾಡಿಗಾಡ್ (ಕ): ಬೆ.10.30ಕ್ಕೆ, ಆರ್‌ಆರ್‌ಆರ್ (ತೆ): ಮ.12.40ಕ್ಕೆ, ಹೋಂ ಮಿನಿಸ್ಟರ್ (ಕ): ಸಂ.4.05ಕ್ಕೆ, ಜೇಮ್ಸ್ (ಕ): ಸಂ.6.35ಕ್ಕೆ, ಅಟ್ಯಾಕ್ (ಹಿಂ): ರಾ.9.30ಕ್ಕೆ
ಸ್ಕ್ರೀನ್ 3	ಆರ್‌ಆರ್‌ಆರ್ (2ಡಿ)(ಕ): ಬೆ.10.30ಕ್ಕೆ, ಹೋಂ ಮಿನಿಸ್ಟರ್ (ಕ): ಮ.2ಕ್ಕೆ, ಮಾರ್ಬಿಯಸ್ (ಇಂ): ಸಂ.4.30ಕ್ಕೆ, ರಾ.10ಕ್ಕೆ, ಆರ್‌ಆರ್‌ಆರ್ (ಕ): ಸಂ.6.35ಕ್ಕೆ,
ಸ್ಕ್ರೀನ್ 4	ಹೋಂ ಮಿನಿಸ್ಟರ್ (ಕ): ಬೆ.10.30ಕ್ಕೆ, ತಲೆದಂಡ (ಕ): ಮ.1ಕ್ಕೆ, ಮನ್ಮಥ ಲೀಲೈ(ತ): ಮ.3.45ಕ್ಕೆ, ದಿ ಕಾಶ್ಮೀರ್ ಫೈಲ್ಸ್ (ಹಿಂ): ಸಂ.6ಕ್ಕೆ, ಜೇಮ್ಸ್ (ಕ): ರಾ.9.15ಕ್ಕೆ

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ಫೋರಂ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಲವ್ ಮಾಕ್ಟೇಲ್ 2 (ಕ): ಸಂ.6ಕ್ಕೆ, ಡಿಯರ್ ಸತ್ಯ (ಕ): ಮ.12.35ಕ್ಕೆ, ರಾಧೆಶ್ಯಾಮ್ (ತೆ): ಬೆ.10.05ಕ್ಕೆ, ಬೆ.11.30ಕ್ಕೆ, ಮ.12.10ಕ್ಕೆ, ಮ.1ಕ್ಕೆ, ಮ.2.25ಕ್ಕೆ, ಮ.3.05ಕ್ಕೆ, ಮ.3.55ಕ್ಕೆ, ಸಂ.5.20ಕ್ಕೆ, ಸಂ.6.50ಕ್ಕೆ, ರಾ.8.15ಕ್ಕೆ, ರಾ.9.45ಕ್ಕೆ, ದಿ ಬ್ಯಾಟ್‌ಮ್ಯಾನ್ (ಇಂ): ಮ.2.50ಕ್ಕೆ, ರಾ.9.45ಕ್ಕೆ, ಗಂಗೂಬಾಯ್ ಕಾಠಿಯಾವಾಡಿ (ಹಿಂ): ಬೆ.11.30ಕ್ಕೆ, ಸಂ.6.25ಕ್ಕೆ, ದಿ ಕಾಶ್ಮೀರ್ ಫೈಲ್ಸ್ (ಹಿಂ): ಮ.3.15ಕ್ಕೆ, ರಾ.9.45ಕ್ಕೆ, ಭೀಷ್ಮಪರ್ವಂ (ಮ): ರಾ.9ಕ್ಕೆ, ಪಡ (ಮ): ಸಂ.6.40ಕ್ಕೆ, ಎದರ್ಕುಂ ತುನಿಂದವನ್ (ತ): ಬೆ.9.20ಕ್ಕೆ, ಮ.12.30ಕ್ಕೆ, ಮ.3.40ಕ್ಕೆ, ಸಂ.6.50ಕ್ಕೆ, ರಾ.10ಕ್ಕೆ.

ಗರುಡ ಮಾಲ್, 1ನೇ ಮಹಡಿ, ಮೊ.ನಂ: 9901373210

ಹರೀಶ ವಯಸ್ಸು 36 (ಕ): ಮ.3.30ಕ್ಕೆ, ಲವ್ ಮಾಕ್ಟೇಲ್ 2 (ಕ): ಮ.12.25ಕ್ಕೆ, ಮ.3.05ಕ್ಕೆ, ರಾಧೆಶ್ಯಾಮ್ (ತೆ): ಬೆ.9.15ಕ್ಕೆ, ಬೆ.10.20ಕ್ಕೆ, ಮ.12.10ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ಸಂ.6.05ಕ್ಕೆ, ರಾ.7.05ಕ್ಕೆ, ರಾ.9ಕ್ಕೆ, ರಾ.10ಕ್ಕೆ, ದಿ ಬ್ಯಾಟ್‌ಮ್ಯಾನ್ (ಇಂ): ಬೆ.11.55ಕ್ಕೆ, ಸಂ.5.55ಕ್ಕೆ, ಗಂಗೂಬಾಯ್ ಕಾಠಿಯಾವಾಡಿ (ಹಿಂ): ರಾ.9.30ಕ್ಕೆ, ಎದರ್ಕುಂ ತುನಿಂದವನ್ (ತ): ಬೆ.9.15ಕ್ಕೆ, ಮ.3.25ಕ್ಕೆ, ಸಂ.6.30ಕ್ಕೆ, ರಾ.9.45ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಆರ್‌ಆರ್‌ಆರ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಆರ್‌ಆರ್‌ಆರ್ (ಕ)	1 ಪ್ರದರ್ಶನಗಳು
ಆರ್‌ಆರ್‌ಆರ್ (ತೆ)	3 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಇಲ್ಲಿಂದ ಆರಂಭವಾಗಿದೆ (ಕ)	1 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಆರ್‌ಆರ್‌ಆರ್ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಹೋಂ ಮಿನಿಸ್ಟರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಜೇಮ್ಸ್ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಅಟ್ಯಾಕ್ (ಹಿ)	4 ಪ್ರದರ್ಶನಗಳು
ಸಂಗಂ	
ಜೇಮ್ಸ್ (ಕ)	4 ಪ್ರದರ್ಶನಗಳು
ಲಿಡೋ	
ಹೋಂ ಮಿನಿಸ್ಟರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಆರ್‌ಆರ್‌ಆರ್ (ಕ)	4 ಪ್ರದರ್ಶನಗಳು

ಪಂಜಾಬ್‌ಗೆ ಗೆಲುವು: ಚೆನ್ನೈಗೆ ಹ್ಯಾಟ್ರಿಕ್ ಸೋಲು



ಮುಂಬೈ, ಏ.3– ಲಿಯಾಮ್ ಲಿವಿಂಗ್‌ಸ್ಟೋನ್ ಆಲ್‌ರೌಂಡರ್ ಆಟದ ನೆರವಿನಿಂದ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ಪಂಜಾಬ್ ಕಿಂಗ್ಸ್ 54 ರನ್‌ಗಳ ಅಮೋಘ ಗೆಲುವು ಸಾಧಿಸುವ ಮೂಲಕ ಟೂರ್ನಿಯಲ್ಲಿ ಸತತ 2ನೇ ಜಯ ದಾಖಲಿಸಿದರೇ, ಅತ್ತ ಹಾಲಿ ಚಾಂಪಿಯನ್ ಸಿಎಸ್‌ಕೆ ಹ್ಯಾಟ್ರಿಕ್ ಸೋಲಿನ ಮುಖಭಂಗಕ್ಕೊಳಗಾಗಿದೆ.

ಇಲ್ಲಿನ ಬ್ರೆಬೋರ್ನ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಬ್ಯಾಟಿಂಗ್ ಮಾಡಿದ ಪಂಜಾಬ್ ತಂಡದ ಮೊತ್ತ 14 ರನ್ ಆಗುವಷ್ಟರಲ್ಲೇ 2 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ಮೂರನೇ ವಿಕೆಟ್‌ಗೆ ಒಂದಾದ ಲಿಯಾಮ್ ಲಿವಿಂಗ್‌ಸ್ಟೋನ್ ಹಾಗೂ ಶಿಖರ್ ಧವನ್ 95 ರನ್‌ಗಳ ಜೊತೆಯಾಟವಾಡುವ ಮೂಲಕ ತಂಡವನ್ನು ಆರಂಭಿಕ ಆಘಾತದಿಂದ ಪಾರು ಮಾಡಿದರು. ಬಿರುಸಿನ ಬ್ಯಾಟಿಂಗ್ ಮಾಡಿದ ಲಿವಿಂಗ್‌ಸ್ಟೋನ್ ಕೇವಲ 27 ಎಸೆತಗಳಲ್ಲಿ ಚೊಚ್ಚಲ ಅರ್ಧಶಕರ ಸಿಡಿಸಿ ಸಂಭ್ರಮಿಸಿದರು. ಈ ವೇಳೆ 33 ರನ್ ಗಳಿಸಿ ಉತ್ತಮವಾಗಿ ಆಡುತ್ತಿದ್ದ ಶಿಖರ್ ಧವನ್ ವಿಕೆಟ್ ಒಪ್ಪಿಸಿದರು. ಇವರ ಹಿಂದೆಯೇ ತಲಾ 5 ಸಿಕ್ಸರ್, ಬೌಂಡರಿ ಒಳಗೊಂಡ 60 ರನ್ ಗಳಿಸಿದ ಲಿವಿಂಗ್‌ಸ್ಟೋನ್ ನಿರ್ಗಮಿಸಿದರು. ನಂತರ ಬಂದ ಜಿತೇಶ್ ಶರ್ಮಾ 3 ಸಿಕ್ಸರ್ ನೆರವಿನಿಂದ 26 ರನ್ ಗಳಿಸಿದರು. ಉಳಿದಂತೆ ನಾಯಕ ಮಯಂಕ್ ಅಗರವಾಲ್ 4, ಭಾನುಕ ರಜಪಕ್ಸ 9, ಶಾರೂಕ್ ಖಾನ್ 6 ಹಾಗೂ ಒಡಿನ್ ಸ್ಮಿತ್ 3 ರನ್ ಗಳಿಸಿ ವೈಫಲ್ಯ ಅನುಭವಿಸಿದರು. ಇನ್ನುಳಿದಂತೆ ಕಗಿಸೊ ರಬಾಡ 12 ಹಾಗೂ ರಾಹುಲ್ ಚಾಹರ್ 12 ರನ್ ಗಳಿಸಿದರು. ಅಂತಿಮವಾಗಿ ಪಂಜಾಬ್ ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 180 ರನ್ ಗಳಿಸಿತು. ಸಿಎಸ್‌ಕೆ ಪರ ಕ್ರಿಸ್ ಜಾರ್ಡನ್, ಡ್ವೇನ್ ಪ್ರಿಟೋರಿಯಸ್ ತಲಾ 2, ಮುಕೇಶ್ ಚೌಧರಿ, ರವೀಂದ್ರ ಜಡೇಜಾ ಹಾಗೂ ಡ್ವೇನ್ ಬ್ರಾವೊ ತಲಾ ಒಂದೊಂದು ವಿಕೆಟ್ ಕಬಳಿಸಿದರು.

ಬಳಿಕ ಗುರಿ ಬೆನ್ನತ್ತಿದ ಚೆನ್ನೈ 18 ಓವರ್‌ಗಳಲ್ಲಿ 126 ರನ್‌ಗೆ ಆಲೌಟಾಯಿತು. ಚೆನ್ನೈ ತಂಡದ ಮೊತ್ತ 36 ರನ್ ಆಗುವಷ್ಟರಲ್ಲಿ ಪ್ರಮುಖ 5 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ಈ ವೇಳೆ ಕ್ರೀಸ್‌ಗೆ ಆಗಮಿಸಿ ಮಹೇಂದ್ರ ಸಿಂಗ್ ಧೋನಿ ಜೊತೆಗೂಡಿದ ಶಿವಂ ದುಬೆ ಕೇವಲ 26 ಎಸೆತಗಳಲ್ಲಿ ಅರ್ಧಶತಕ ಬಾರಿಸಿ ತಿರುಗೇಟು ನೀಡಿದರು. ಆದರೆ ಫಿಫ್ಟಿ ಬೆನ್ನಲ್ಲೇ ವಿಕೆಟ್ ಒಪ್ಪಿಸಿದರು. ಶಿವಂ ದುಬೆ 30 ಎಸೆತಗಳಲ್ಲಿ 3 ಸಿಕ್ಸರ್, 6 ಬೌಂಡರಿ ಒಳಗೊಂಡ 57ರನ್ ಸಿಡಿಸಿ ವಿಕೆಟ್ ಒಪ್ಪಿಸಿದರು. ಉಳಿದಂತೆ ಧೋನಿ 23 ಗಳಿಸಿದರು. ಪಂಜಾಬ್ ಪರ ರಾಹುಲ್ ಚಹಾರ್ 3, ಲಿಯಾಮ್ ಲಿವಿಂಗ್‌ಸ್ಟೋನ್, ವೈಭವ್ ಅರೋರಾ ತಲಾ 2, ಓಡೆನ್ ಸ್ಮಿತ್, ರಬಾಡ ಹಾಗೂ ಹರ್ಷದೀಪ್ ಸಿಂಗ್ ತಲಾ ಒಂದೊಂದು ವಿಕೆಟ್ ಕಿತ್ತು ಮಿಂಚಿದರು. ಲಿವಿಂಗ್‌ಸ್ಟೋನ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಹಲಾಲ್ ಸಾವಿರಾರು ವರ್ಷಗಳಿಂದ ನಡೆದುಕೊಂಡು ಬಂದಿರುವ ಪದ್ಧತಿ

ವಿಪಕ್ಷ ನಾಯಕ ಸಿದ್ದರಾಮಯ್ಯ ಪ್ರತಿಪಾದನೆ

● ಅನಗತ್ಯ ವಿಚಾರಕ್ಕೆ ಸಮಾಜದಲ್ಲಿ ಅಶಾಂತಿ ಸೃಷ್ಟಿ ● ಬೆಲೆ ಏರಿಕೆ ಮುಚ್ಚಿ ಹಾಕಲು ಸರ್ಕಾರದಿಂದ ಕೋಮು ಗಲಭೆಗೆ ಪ್ರಚೋದನೆ



ಬೆಂಗಳೂರು,ಏ.3–ಸಾವಿರಾರು ವರ್ಷಗಳಿಂದ ಹಲಾಲ್ ನಡೆದುಕೊಂಡು ಬಂದಿದೆ. ಅವರ ಪದ್ಧತಿ ಅವರದ್ದು, ನಮ್ಮ ಪದ್ಧತಿ ನಮ್ಮದು. ರಕ್ತದಿಂದ ಕೂಡಿರುವ ಮಾಂಸ ಆರೋಗ್ಯಕ್ಕೆ ಒಳ್ಳೆಯದಲ್ಲ ಎಂಬುದು ಅವರ ನಂಬಿಕೆ. ಅವರ ನಂಬಿಕೆಯಂತೆ ಅವರು ಬದುಕಲು ಬಿಡಿ ಎಂದು ವಿಪಕ್ಷ ನಾಯಕ ಸಿದ್ದರಾಮಯ್ಯ ಹೇಳಿದ್ದಾರೆ.

ಕೆಪಿಸಿಸಿ ಕಚೇರಿಯಲ್ಲಿ ಭಾನುವಾರ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಒಡಗೂಡಿ ಜಂಟಿ ಸುದ್ದಿಗೋಷ್ಠಿ ನಡೆಸಿದ ಅವರು, ನಾವೂ ಕೂಡ ಹಲಾಲ್ ಕಟ್ ಮಾಂಸ ಖರೀದಿಸಿ ತಿಂದಿಲ್ವಾ? ನಾವು ಜಾತ್ರೆಗಳಲ್ಲಿ ಮರಿ ಕಡಿಯುವುದಿಲ್ಲವಾ? ಅನಗತ್ಯ ವಿಚಾರಕ್ಕೆ ರಾಜ್ಯದಲ್ಲಿ ಶಾಂತಿ ಹಾಳು ಮಾಡುವ ಕೆಲಸ ಮಾಡಬೇಡಿ. ಜನರಿಗೆ ಅಗತ್ಯವಿರುವ ವಿಚಾರಗಳ ಬಗ್ಗೆ ಚರ್ಚೆ ಮಾಡಿ. ಮನುಷ್ಯನ ಬದುಕಿಗೆ ಸಂಬಂಧವಿಲ್ಲದ ವಿಷಯಗಳನ್ನು ಪ್ರಸ್ತಾಪಿಸಿ, ಸಮಾಜದಲ್ಲಿ ಅಶಾಂತಿ ಸೃಷ್ಟಿ ಮಾಡುವುದು ಏಕೆ ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು.

ಜನರು ಈಗ ಬೆಲೆಏರಿಕೆಯಿಂದ ಕಂಗಾಲಾಗಿದ್ದಾರೆ. ಅದನ್ನು ಮುಚ್ಚಿಹಾಕಲು ಸರ್ಕಾರಗಳು ಕೋಮು ಗಲಭೆಗೆ ಪ್ರಚೋದಿಸುತ್ತಿವೆ. ಹಿಜಾಬ್ ಪದ್ಧತಿ ಮತ್ತು ಹಿಂದೂ ಧಾರ್ಮಿಕ ಕೇಂದ್ರಗಳ ಸಮೀಪ ಹಿಂದೂಯೇತರರ ವ್ಯಾಪಾರಕ್ಕೆ ನಿರ್ಬಂಧ ವಿಧಿಸಲಾಗುತ್ತಿದೆ. 'ಕಾಶ್ಮೀರ್ ಫೈಲ್ಸ್' ಸಿನಿಮಾವನ್ನು ಹಲವೆಡೆ ಉಚಿತವಾಗಿ ಪ್ರದರ್ಶಿಸಲಾಗುತ್ತಿದೆ. ಸಮಾಜದ ಸಾಮರಸ್ಯವನ್ನು ಹಾಳು ಮಾಡುತ್ತಿದ್ದಾರೆ. ಇವರಿಗೆ ಮನುಷ್ಯತ್ವ ಇದೆಯೇ ಎಂದು ಸಿದ್ದರಾಮಯ್ಯ ಕೇಳಿದರು.

> ಕೇಂದ್ರ ಸರ್ಕಾರವು ಯುಗಾದಿಗೆ ಕೇವಲ ಕಹಿ ನೀಡಿದೆ. ಸಿಹಿ ಕೊಡಲೇ ಇಲ್ಲ. 50 ಕೆಜಿ ಡಿಎಪಿ ರಸಗೊಬ್ಬರದ ಮೂಟೆ 1,350 ಆಗಿದೆ. ಡಿಎಪಿ ರಸಗೊಬ್ಬರ ಒಂದು ಕೆಜಿ ಮೇಲೆ 3 ರೂಪಾಯಿ ಹೆಚ್ಚಳವಾಗಿದೆ. ದೇಶದಲ್ಲಿ 1 ಕೋಟಿ 20 ಲಕ್ಷ ಟನ್ ಡಿಎಪಿ ಬಳಸುತ್ತಾರೆ. 3,600 ಕೋಟಿ ರೈತರಿಂದ ಸುಲಿಗೆ ಮಾಡುತ್ತಿದ್ದಾರೆ. ರೈತರ ಆದಾಯ ದುಪ್ಪಟ್ಟು ಮಾಡುವುದಾಗಿ ಹೇಳಿದ್ದ ಮೋದಿ, ರೈತರ ರಕ್ತ ಹೀರುತ್ತಿದ್ದಾರೆ. ತೈಲ ಕಂಪನಿಗಳು ನಮ್ಮ ಅಧೀನದಲ್ಲಿಲ್ಲ ಎನ್ನುತ್ತಾರೆ. ಆದರೆ ಚುನಾವಣೆ ಸಮಯದಲ್ಲಿ ತೈಲ ಬೆಲೆ ಏರಿಕೆಯಾಗದೆ ಚುನಾವಣೆ ಮುಗಿಯುತ್ತಿದ್ದಂತೆ ಬೆಲೆ ಹೆಚ್ಚಾಗುತ್ತದೆ ಎಂದು ಸಿದ್ದರಾಮಯ್ಯ ದೂರಿದರು.

ಕೇಂದ್ರ ಸರ್ಕಾರಕ್ಕೆ ಹೆಚ್ಚುವರಿ ಅಬಕಾರಿ ಸುಂಕದಿಂದ 26 ಲಕ್ಷ ಕೋಟಿ ಆದಾಯ ಬಂದಿದೆ. ಡೀಸೆಲ್ ಮೇಲಿನ ಸುಂಕ ಶೇ.531, ಪೆಟ್ರೋಲ್ ಮೇಲೆ ಸುಂಕ ಶೇ.203ರಷ್ಟು ಹೆಚ್ಚಾಗಿದೆ. ಆದರೆ ಕಾರ್ಪೊರೇಟ್ ಟ್ಯಾಕ್ಸ್ ಶೇ.35ರಿಂದ 23ಕ್ಕೆ ಇಳಿಕೆಯಾಗಿದೆ. ಹಿಂದಿನ ಸರ್ಕಾರ ಸಾಲ ಮಾಡಿದೆ ಎಂದು ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಸುಳ್ಳು ಹೇಳುತ್ತಿದ್ದಾರೆ. ದೇಶದ ಜನರನ್ನು ದಾರಿತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. ಪ್ರಧಾನಿ ಮೋದಿ ಸಬ್ಸಿಡಿಯನ್ನು ನಿಲ್ಲಿಸಿಬಿಟ್ಟಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಗೃಹ ಬಳಕೆಯ ಎಲ್‌ಪಿಜಿ ಸಿಲಿಂಡರ್ ಬೆಲೆ 50 ರೂ. ಹೆಚ್ಚಾಗಿದೆ. ಎಲ್ಲರಿಗೂ ಒಂದು ಸಾವಿರ ರೂಪಾಯಿ ಕೊಟ್ಟು ಸಿಲಿಂಡರ್ ಖರೀದಿಸಲು ಆಗುತ್ತದೆಯೇ ಜನೌಷಧ ಅಂಗಡಿಗಳಲ್ಲಿ ದೊರೆಯುವ ಔಷಧಗಳ ಬೆಲೆಯನ್ನೂ ಶೇ 10ರಷ್ಟು ಹೆಚ್ಚಿಸಿದ್ದಾರೆ. ಅಡುಗೆ ಎಣ್ಣೆ ಸೇರಿದಂತೆ ಎಲ್ಲಾ ಅಗತ್ಯ ವಸ್ತುಗಳ ಬೆಲೆ ಏರಿಕೆಯಾಗಿದೆ. ಇದರಿಂದ ಹಣದುಬ್ಬರ ಹೆಚ್ಚಾಗುತ್ತದೆ. ಸಾಮಾನ್ಯ ಜನರ ಜೀವನ ದುಸ್ತರವಾಗುತ್ತದೆ ಎಂದು ಸಿದ್ದರಾಮಯ್ಯ ಆತಂಕ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಡಿ.ಕೆ.ಶಿವಕುಮಾರ್, ಕೇಂದ್ರ ಸರ್ಕಾರವು ಬೆಲೆ ಏರಿಕೆ ಎಂಬ ಗದಾಪ್ರಹಾರವನ್ನು ಬಡವರ ವಿರುದ್ಧ ನಡೆಸುತ್ತಿದೆ. ಅಚ್ಛೇ ದಿನ್ ಕೊಡುತ್ತೇವೆಂದು ಹೇಳಿ ನರಕ ತೋರಿಸುತ್ತಿದ್ದಾರೆ. ಕೃಷಿ ಯಂತ್ರೋಪಕರಣಗಳ ಬೆಲೆಯೂ ಹೆಚ್ಚಳವಾಗಿದೆ. ಈ ಸರ್ಕಾರವನ್ನು ಕಿತ್ತೊಗೆಯುವವರೆಗೆ ಅಗತ್ಯ ವಸ್ತುಗಳ ಬೆಲೆ ಇಳಿಕೆ ಮಾಡುವವರೆಗೆ ಹೋರಾಟ ಮುಂದುವರಿಸುತ್ತೇವೆ ಎಂದು ಘೋಷಿಸಿದರು. ಜನರ ಆದಾಯ ಪಾತಾಳಕ್ಕೆ ಕುಸಿದಿದ್ದರೆ ಅಗತ್ಯ ವಸ್ತುಗಳ ಬೆಲೆ ಗಗನಮುಖಿಯಾಗಿದೆ ಎಂದು ಆರೋಪಿಸಿದರು.

ಯುಪಿಎ ಸರ್ಕಾರ ಇದ್ದ ಸಂದರ್ಭದಲ್ಲಿ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬೆಲೆ ಹೆಚ್ಚಳವಾದಾಗ ದೇಶೀಯ ಮಾರುಕಟ್ಟೆಯಲ್ಲಿ ಇಂಧನ, ಅಡುಗೆ ಅನಿಲ ಸೇರಿದಂತೆ ಅಗತ್ಯ ವಸ್ತುಗಳ ಬೆಲೆಯನ್ನು ಎಷ್ಟು, ಹೇಗೆ, ಯಾವಾಗ ಹೆಚ್ಚಳ ಮಾಡಬಹುದೆಂದು ಚರ್ಚೆ ನಡೆಸಿ ಯೋಚಿಸಿ ನಿರ್ಧಾರ ಮಾಡುತ್ತಿದ್ದರು. ಆ ದಾಟಿಯಲ್ಲಿ ಮಾಡಬೇಕೆ ಹೊರತು ಅವೈಜ್ಞಾನಿಕವಾಗಿ ಕೇಂದ್ರ ಬಿಜೆಪಿ ಸರ್ಕಾರ ಮಾಡುತ್ತಿದೆ ಎಂದು ಆರೋಪಿಸಿದರು.

ಮೈಸೂರಿನಲ್ಲಿ ಮತ್ತೆ ಸರಗಳ್ಳರ ಕೈಚಳಕ



ಮೈಸೂರು, ಏ.3(ಜಿಎ)– ಸರಗಳ್ಳರು ಮೈಸೂರಿನಲ್ಲಿ ಮತ್ತೆ ತಮ್ಮ ಕೈಚಳಕ ತೋರಿಸಿದ್ದಾರೆ. ಮಹಿಳೆಯೊಬ್ಬರ ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗಿರುವ ಘಟನೆ ನಗರದ ಬೋಗಾದಿಯಲ್ಲಿ ನಡೆದಿದೆ.

ಭಾನುವಾರ ರಾತ್ರಿ ಸುಮಾರು 8.30ರ ಸಮಯದಲ್ಲಿ ಬೋಗಾದಿ 2ನೇ ಹಂತ, ಪ್ರಶಾಂತ್ ನಗರದ ಬ್ಯಾಂಕ್ ಆಫ್ ಬರೋಡಾ ಸಮೀಪ ದಂಪತಿ ದ್ವಿಚಕ್ರ ವಾಹನದಲ್ಲಿ ತೆರಳುತ್ತಿದ್ದ ವೇಳೆ ಹಿಂದಿನಿಂದ ದ್ವಿಚಕ್ರ ವಾಹನದಲ್ಲಿ ಬಂದ ಇಬ್ಬರು ಸರಗಳ್ಳರು ಮಹಿಳೆಯ ಕತ್ತಿನಲ್ಲಿದ್ದ ಚಿನ್ನದ ಸರವನ್ನು ಕಿತ್ತುಕೊಂಡು ಪರಾರಿಯಾಗಿದ್ದಾರೆ. ಸರಸ್ವತಿ ಪುರಂ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ವಿಜೃಂಭಣೆಯ ಶ್ರೀ ಚಿಕ್ಕದೇವಮ್ಮನ ಜಾತ್ರಾ ಮಹೋತ್ಸವ



ಸರಗೂರು, ಏ.3(ನಾಗೇಶ್)– ತಾಲೂಕಿನ ಶ್ರೀ ಚಿಕ್ಕದೇವಮ್ಮನ ಬೆಟ್ಟದಲ್ಲಿ ಅಮ್ಮನವರ ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ನಡೆಯಿತು.

ಚಾಂದ್ರಮಾನ ಯುಗಾದಿ ಹಬ್ಬದಂದು ಬೆಳಗ್ಗೆಯೇ ದೇವತೆಗೆ ವಿಶೇಷ ಪೂಜೆ ಸಲ್ಲಿಸಿ, ಶ್ರೀಚಿಕ್ಕದೇವಮ್ಮನ ಬೆಟ್ಟದಿಂದ ಅಮ್ಮನವರ ಉತ್ಸವ ಮೂರ್ತಿ ತಂದು ಕಪಿಲಾ ನದಿ ಬಳಿಯ ಹಾಲುಗಡುವಿನ ಜಪದಕಟ್ಟೆಯಲ್ಲಿ ಕೂರಿಸಿ ವಿಶೇಷ ಪೂಜೆ ಸಲ್ಲಿಸಲಾಯಿತು. ಬಳಿಕ ದೇವರಿಗೆ ಹೋಮ–ಹವನ ನಡೆದವು. ನಂತರ ಭಕ್ತರು ಸರತಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದರು. ಇದೇ ವೇಳೆ 10ಕ್ಕೂ ಹೆಚ್ಚು ಸತ್ತಿಗೆಗಳನ್ನು ಮೆರವಣಿಗೆ ಮಾಡಲಾಯಿತು. 500ಕ್ಕೂ ಹೆಚ್ಚು ಭಕ್ತರು ಮುಡಿ ಕೊಟ್ಟು ಇಷ್ಟಾರ್ಥ ಸಿದ್ಧಿಗಾಗಿ ಹರಕೆ ತೀರಿಸಿದರು.

ಇದಕ್ಕೂ ಮುನ್ನ ಶಾಸಕ ಅನಿಲ್ ಚಿಕ್ಕಮಾದು ಕುಟುಂಬ ಸಮೇತರಾಗಿ ಚಿಕ್ಕದೇವಮ್ಮನವರ ಬೆಟ್ಟಕ್ಕೆ ತೆರಳಿ ಸಮಸ್ತ ಜನತೆಗೆ ಒಳಿತಾಗಲೆಂದು ಪ್ರಾರ್ಥಿಸಿ ವಿಷೇಷ ಪೂಜೆ ನೆರವೇರಿಸಿರು. ಅಲ್ಲದೇ ಜಾತ್ರೆಗೆ ಆಗಮಿಸಿದ್ದ ಭಕ್ತರಿಗೆ ಲಾಡು ಪ್ರಸಾದದ ವ್ಯವಸ್ಥೆ ಮಾಡಿದ್ದರು.

ಸಿಪಿಐ ಎನ್.ಆನಂದ್, ಎಸ್‌ಐಗಳಾದ ಶ್ರವಣ್‌ದಾಸ್ ರೆಡ್ಡಿ, ಜಯಪ್ರಕಾಶ್ ನೇತೃತ್ವದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು. ಅಲ್ಲದೆ ವಿಶ್ವಪ್ರಾಣಿ ಕಲ್ಯಾಣ ಮಂಡಳಿ ಅಧ್ಯಕ್ಷ ದಯಾನಂದ ಸ್ವಾಮೀಜಿ ಅವರು ಜಾತ್ರಾವರಣದಲ್ಲಿ ಯಾವುದೇ ಪ್ರಾಣಿಬಲಿ ನಡೆಸದಂತೆ ಮುನ್ನೆಚ್ಚರಿಕೆ ವಹಿಸಿ ಜಾಗೃತಿ ಮೂಡಿಸಿದರು.

ಜಾತ್ರಾ ಮಹೋತ್ಸವದಲ್ಲಿ 40 ಸಾವಿರಕ್ಕೂ ಹೆಚ್ಚು ಭಕ್ತರು ದೇವರ ದರ್ಶನ ಪಡೆದು ಪುನೀತರಾದರು. ಬೆಟ್ಟದ ಪ್ರಧಾನ ಅರ್ಚಕರು ಪೂಜಾ ವಿಧಿವಿಧಾನದಲ್ಲಿ ಭಾಗಿಯಾಗಿದ್ದರು. ಹಾಲುಗಡ ಜಾತ್ರಾ ಕಮಿಟಿ ಪದಾಧಿಕಾರಿಗಳು, ಬೆಟ್ಟದ ಸುತ್ತಮುತ್ತಲ ಗ್ರಾಮಸ್ಥರು ಉಪಸ್ಥಿತರಿದ್ದರು.

ಬೊಲೆರೋ ಸರಕು ವಾಹನ ಡಿಕ್ಕಿ : ದ್ವಿಚಕ್ರ ವಾಹನ ಸವಾರ ಸಾವು

ಮೈಸೂರು, ಏ.3(ಜಿಎ)–ಬೊಲೆರೊ ಸರಕು ವಾಹನ–ದ್ವಿಚಕ್ರ ವಾಹನ ನಡುವೆ ಡಿಕ್ಕಿ ಹೊಡೆದ ಪರಿಣಾಮ 65 ವರ್ಷ ವಯಸ್ಸಿನ ವ್ಯಕ್ತಿಯೊಬ್ಬರು ಮೃತಪಟ್ಟಿರುವ ಘಟನೆ ಮೈಸೂರಿನ ಬೋಗಾದಿ ಸಮೀಪದ ರಾಜರಾಜೇಶ್ವರಿ ಜಂಕ್ಷನ್‌ನಲ್ಲಿ ಶನಿವಾರ ನಡೆದಿದೆ. ತಮ್ಮ ಸ್ನೇಹಿತರೊಂದಿಗೆ ಯುಗಾದಿ ಹಬ್ಬದ ಪ್ರಯುಕ್ತ ಬೋಗಾದಿ ಯಲ್ಲಿರುವ ದೇಗುಲಕ್ಕೆ ಹೋಗಲು ರಿಂಗ್ ರಸ್ತೆಯನ್ನು ಕ್ರಾಸ್ ಮಾಡುವಾಗ ರಿಂಗ್ ರಸ್ತೆಯಲ್ಲಿ ಬಂದ ಬೊಲೆರೊ ವಾಹನ ಡಿಕ್ಕಿ ಹೊಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ಸಂಬಂಧ ಕೆ.ಆರ್. ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ನಂಜನಗೂಡು ತಾಲೂಕಿನ ಹೆಡತಲೆ ಗ್ರಾಮದ ಶ್ರೀಆದಿಶಕ್ತಿ ಭಂಗಿ ಮಾರಮ್ಮನನ್ನು ಕಂಚಿನ ಕುದುರೆ ಮೇಲೆ ಕೂರಿಸಿ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು.

ಜೂಜುಕೋರರ ಬಂಧನ

ಮೈಸೂರು, ಏ.3(ಜಿಎ)– ಜೂಜಾಡುತ್ತಿದ್ದ 14 ಮಂದಿಯನ್ನು ಉದಯಗಿರಿ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಠಾಣಾ ವ್ಯಾಪ್ತಿಯಲ್ಲಿ ಗುಂಪು ಕಟ್ಟಿಕೊಂಡು ಜೂಜಾಡುತ್ತಿದ್ದವರ ಮೇಲೆ ದಾಳಿ ನಡೆಸಿರುವ ಪೊಲೀಸರು 14 ಮಂದಿಯನ್ನು ವಶಕ್ಕೆ ಪಡೆದು, ಪಣಕ್ಕಿಟ್ಟಿದ್ದ 50 ಸಾವಿರ ರೂ. ನಗದನ್ನು ಪಶಪಡಿಸಿಕೊಳ್ಳಲಾಗಿದೆ ಎಂದು ತಿಳಿದುಬಂದಿದೆ.

ಕೊಡಗಿನ ಸಿದ್ದಾಪುರದಲ್ಲಿ ಡಿಜಿಟಲ್ ಗ್ರಂಥಾಲಯ ಉದ್ಘಾಟನೆ



ಸಿದ್ದಾಪುರ, ಏ.3– ಪ್ರತಿಯೊಬ್ಬರು ಜ್ಞಾನ ವೃದ್ಧಿಸಿಕೊಳ್ಳುವ ನಿಟ್ಟಿನಲ್ಲಿ ಡಿಜಿಟಲ್ ಗ್ರಂಥಾಲಯದ ಸೌಲಭ್ಯಗಳನ್ನು ಸದುಪಯೋಗ ಪಡಿಸಿಕೊಳ್ಳಬೇಕೆಂದು ಶಾಸಕ ಕೆ.ಜಿ.ಬೋಪಯ್ಯ ಹೇಳಿದರು.

ಸಿದ್ದಾಪುರ ಗ್ರಾಮ ಪಂಚಾಯಿತಿ ಮುಂಭಾಗದ ಕಟ್ಟಡದಲ್ಲಿ ಸುಸಜ್ಜಿತವಾಗಿ ಪುನರಾರಂಭಗೊಂಡಿರುವ ಗ್ರಂಥಾಲಯವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪ್ರತಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಡಿಜಿಟಲ್ ಗ್ರಂಥಾಲಯ ಸ್ಥಾಪನೆ ಮಾಡಬೇಕೆಂಬ ಪ್ರಧಾನಮಂತ್ರಿಗಳ ಆಶಯದಂತೆ ಈಗಾಗಲೇ ಜಿಲ್ಲೆಯಲ್ಲಿ ಬಹುತೇಕ ಗ್ರಂಥಾಲಯಗಳು ಕಾರ್ಯ ನಿರ್ವಹಿಸುತ್ತಿವೆ. ಶಾಲಾ ವಿದ್ಯಾರ್ಥಿಗಳು, ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಸಲಹೆ ನೀಡಿದರು. ಈ ಸಂದರ್ಭ ಗ್ರಾಮ ಪಂಚಾಯಿತಿ ಅಧ್ಯಕ್ಷೆ ರೀನಾ ತುಳಸಿ, ಉಪಾಧ್ಯಕ್ಷ ಮಹೇಶ್ ಕುಮಾರ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಚಂದ್ರಮೋಹನ್ ಸೇರಿದಂತೆ ಗ್ರಾಮ ಪಂಚಾಯಿತಿ ಸದಸ್ಯರು ಹಾಗೂ ಸ್ಥಳೀಯ ಮುಖಂಡರು ಹಾಜರಿದ್ದರು.

ಅವರವರ ಧರ್ಮ, ಹಬ್ಬಗಳ ಆಚರಣೆ ಮಾಡಲು ಎಲ್ಲರಿಗೂ ಸ್ವಾತಂತ್ರ್ಯವಿದೆ: ಸಿಎಂ ಬೊಮ್ಮಾಯಿ



ಬೆಂಗಳೂರು, ಏ.3– ಅವರವರ ಧರ್ಮ, ಹಬ್ಬಗಳನ್ನು ಆಚರಣೆ ಮಾಡಲು ಎಲ್ಲರಿಗೂ ಸ್ವಾತಂತ್ರ್ಯವಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರು ಹೇಳಿದ್ದಾರೆ.

ಕೋರಮಂಗಲದ ಪೊಲೀಸ್ ಮೈದಾನದಲ್ಲಿ ಆಯೋಜಿಸಲಾಗಿದ್ದ ಪೊಲೀಸ್ ಧ್ವಜ ದಿನಾಚರಣೆ ಅಂಗವಾಗಿ ಗೌರವ ವಂದನೆ ಸ್ವೀಕರಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅವರವರ ಧರ್ಮ, ಹಬ್ಬಗಳನ್ನು ಆಚರಣೆ ಮಾಡಲು ಎಲ್ಲರಿಗೂ ಸ್ವಾತಂತ್ರ್ಯವಿದೆ. ಕಾನೂನು ಸುವ್ಯವಸ್ಥೆ ಕಾಪಾಡಲು ಮಾತ್ರ ಸರ್ಕಾರದಿಂದ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಯುಗಾದಿಯ ಹೊಸ ತೊಡಕು ಹಬ್ಬದ ಹಿನ್ನೆಲೆಯಲ್ಲಿ ಹಲಾಲ್ ಮಾಂಸ ಬಹಿಷ್ಕಾರಕ್ಕೆ ಹಿಂದೂ ಸಂಘಟನೆಗಳ ಒತ್ತಾಯಿಸುತ್ತಿರುವ ವಿಚಾರ ಗಮನಕ್ಕೆ ಬಂದಿದೆ. ಈ ಕುರಿತು ಎಲ್ಲಾ ಜಿಲ್ಲಾ ಎಸ್‌ಪಿಗಳು, ಡಿಸಿಗಳಿಗೆ ಸೂಚನೆ ನೀಡಲಾಗಿದೆ. ಕಾನೂನು ಸುವ್ಯವಸ್ಥೆಗೆ ಧಕ್ಕೆ ಬಾರದಂತೆ ಕ್ರಮ ಕೈಗೊಳ್ಳಲು ಸೂಚಿಸಿದ್ದೇನೆಂದು ತಿಳಿಸಿದರು.

ಈ ನಡುವೆ ಪೊಲೀಸ್ ಧ್ವಜ ದಿನಾಚರಣೆಯ ಅಂಗವಾಗಿ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ 135 ಡಿವೈಎಸ್‌ಪಿ, ಇನ್ಸ್‌ಪೆಕ್ಟರ್ ಮತ್ತು ಸಿಬ್ಬಂದಿಗೆ ಮುಖ್ಯಮಂತ್ರಿಗಳ ಪದಕ ನೀಡಿ ಗೌರವಿಸಲಾಯಿತು.